"VARTHA JANAPADA" Monthly - Aug 2019
"ವಾರ್ತಾ ಜನಪದ" ಮಾಸಿಕ - ಆಗಸ್ಟ್ 2019

RNI No. KAR/KAN/2017/75029
Regd No.KA/BGGPO/2583/2018-20 Licensed to post without prepayment Licence No. PMG/BG/ WPP-365/2018-20
Published on 27th, Dt. 29th & 30th Posted at (Every month), Bangalore PSO, Mysore Road, Bangalore - 26



ಕೃಷ್ಣಜನ್ಮಾಷ್ಟಮಿಯ
ಶುಭಾಶಯಗಳು

downloaded from: www.kpscvaani.com



73ನೇ ಸ್ವಾತಂತ್ರ್ಯೋತ್ಸವದ
ಶುಭಾಶಯಗಳು

# ವಾರ್ತಾ ಜನಪದ

ವಾರ್ಷಿಕ ಚಂದಾ ರೂ.25/-
ಆಗಸ್ಟ್ 2019



ನೂತನ ಮುಖ್ಯಮಂತ್ರಿಯಾಗಿ
**ಶ್ರೀ ಬಿ. ಎಸ್. ಯಡಿಯೂರಪ್ಪ**
ಪ್ರಮಾಣ ವಚನ ಸ್ವೀಕಾರ

downloaded from: www.kpscvaani.com



ಜುಲೈ 12 ರಿಂದ ಪ್ರಾರಂಭವಾದ 15 ನೇ ವಿಧಾನಸಭೆ ಕಲಾಪದ ವಿಹಂಗಮ ನೋಟ



ಜುಲೈ 12 ರಿಂದ ಪ್ರಾರಂಭವಾದ ವಿಧಾನಪರಿಷತ್ ಕಲಾಪದ ವಿಹಂಗಮ ನೋಟ

ವಾರ್ತಾ
# ಜನಪದ
ಸಂಪುಟ–02 • ಸಂಚಿಕೆ–11 • ಆಗಸ್ಟ್ 2019




05 ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾದ ಬಿ. ಎಸ್. ಯಡಿಯೂರಪ್ಪ

08 ಸ್ವಾತಂತ್ರ್ಯೋತ್ಸವದ ಹರ್ಷಧಾರೆಯಲ್ಲಿ
• ಬನ್ನೂರು ಕೆ.ರಾಜು

11 ಜಲಿಯನ್ ವಾಲಾಬಾಗ್ ಶತಮಾನ ಕಳೆದರೂ ಮಾಸದ ನೆನಪು
• ವಿರೇಶ ವಾಕೆಟ್ಟ ನಿಡಗುಂದಿ

15 "ಆಧುನಿಕ ತಂತ್ರಜ್ಞಾನದ ಹುಚ್ಚು ಬಿಡಬೇಕು"
• ಪ್ರೊ.ಬಿ.ಎ.ಶ್ರೀಧರ

16 ಪ್ರಿಯಾನಗರವಾದ ಕಾಳಘಟ್ಟ ಗ್ರಾಮ
• ತುಕಾರಾಂರಾವ್ ಬಿ. ವಿ

18 ವರ್ಲಿ ಚಿತ್ರಕಲೆಯಲ್ಲಿ ಕಂಗೊಳಿಸುತ್ತಿರುವ ಸರ್ಕಾರಿ ಪ್ರೌಢಶಾಲೆ
• ವಿನಾಯಕ ಗೋ. ಭೀಮಪ್ಪನವರ

19 ಶ್ರೀಗಂಧ ಬೆಳೆಯಲು ನಿರ್ಬಂಧವಿಲ್ಲ
• ಆರ್.ದೊಡ್ಡಕೆರಾ

22 ಗುಮ್ಮಟನಗರಿ ವಿಜಯಪುರ
• ಡಾ.ಗುರಲಿಂಗಪ್ಪ ಅಂಕದ

25 ಹೃದಯವಂತ ಮಹಾರಾಜ ಶ್ರೀ ಜಯಚಾಮರಾಜೇಂದ್ರ ಒಡೆಯರ್
• ಮಹಾಲಕ್ಷ್ಮಿ

31 ಆರೋಗ್ಯವಂತ ಕಂದಮ್ಮನಿಗೆ ಬೇಕು ಎದೆಹಾಲು
• ಡಾ.ಎಸ್.ಎಂ.ಶಿವ್ಯಾಪುರ

35 ಜಿಐ ಸ್ಥಾನಮಾನ–ಸಮುದಾಯದ ಪೇಟೆಂಟ್
• ಕೆ.ಎಸ್.ರಾಜಮನ್ನಾರ್

38 ಸರಳ ಸುಂದರಿ ರಂಗನಾಯಕಿ
• ಗುಡಿಹಳ್ಳಿ ನಾಗರಾಜ್

41 ಸಾವಯವ ಕೃಷಿಯಲ್ಲಿ ಯಶಸ್ವಿಯಾದ ಶಿಕ್ಷಕ
• ಎಚ್.ಆರ್. ಕಡಿವಾಲ

42 ಪರಿಸರ ರಕ್ಷಣೆಗೆ ಸಾರಜನಕದ ನಿರ್ವಹಣೆ
• ನಾಗರತ್ನ ಜಿ.ಎಸ್

45 ಯುವಜನತೆಯ ಸ್ಥೈರ್ಯ ವೃದ್ಧಿಸಲು ಯುವಸ್ಪಂದನ
• ಬಿ.ಎ.ಖಾದರ್ ಶಾ

48 ಅಚ್ಚರಿಯ ಕಂದಕಕ್ಕೆ ಪಯಣ
• ಲಕ್ಷ್ಮಿ



ಪ್ರಧಾನ ಸಂಪಾದಕರು
ಎನ್. ಭೃಂಗೀಶ್
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ಸಂಪಾದಕೀಯ ಸಲಹೆ
ಬಸವರಾಜ ಎಂ ಕಂಬಿ
ಜಂಟಿ ನಿರ್ದೇಶಕರು

ಸಹನಾ ಎಂ
ಉಪ ನಿರ್ದೇಶಕರು

ಉಪ ಸಂಪಾದಕರು
ಬಿ. ಜಿ. ಹೊರ್ಕೇರಿ

ಪ್ರಕಾಶಕರು
ನಿರ್ದೇಶಕರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
#17, ವಾರ್ತಾ ಸೌಧ, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು - 01
email : varthajanapada@yahoo.co.in
emagazine : karnatakajanapada.com | www.karnatakainformation.gov.in

ಮುದ್ರಕರು
ಅಭಿಮಾನಿ ಪಬ್ಲಿಕೇಷನ್ಸ್ ಪ್ರೈ. ಲಿ.
ನಂ.3 ರಾಜ್‌ಕುಮಾರ್ ರಸ್ತೆ, ರಾಜಾಜಿನಗರ, ಬೆಂಗಳೂರು - 10


ಲೇಖಕರ ಅಭಿಪ್ರಾಯಗಳು ಸರ್ಕಾರದ ಅಭಿಪ್ರಾಯಗಳಲ್ಲ

**downloaded from: www.kpscvaani.com**

# ಓದುಗರಿಂದ...




ಜುಲೈ 2019 ರ ವಾರ್ತಾ ಜನಪದ ಸಂಚಿಕೆಯ ಮೈತ್ರಿ ಸರ್ಕಾರದ ಸಾಧನಾ ಪರ್ವ ಲೇಖನ ಫಲಾನುಭವಿಗಳಿಗೆ ಖುಷಿ ತಂದಿದೆ. ಬರಗಾಲ ಬಂದಿರುವ ಸಂದರ್ಭದಲ್ಲಿ ಶಾಶ್ವತ ಪರಿಹಾರದ ಮೋಡ ಬಿತ್ತನೆಯ ಲೇಖನ ಕೃಷಿಕರಿಗೆ ಆನಂದವನ್ನುಂಟು ಮಾಡಿದೆ. ಡಾ. ಗಿರೀಶ ಕಾರ್ನಾಡರ ಬದುಕು-ಬರಹ ಉತ್ತಮವಾಗಿ ಮೂಡಿ ಬಂದಿದೆ. ವಿಶ್ವ ಜನಸಂಖ್ಯಾ ದಿನಾಚರಣೆಯ ಲೇಖನ ಜನಸಂಖ್ಯಾ ಸ್ಫೋಟದ ಬಗ್ಗೆ ಅರಿವು ಮೂಡಿಸುವಂತಿದೆ. ನಾಡು ಕಟ್ಟಿದ ನಾಲ್ವಡಿ ಕೃಷ್ಣರಾಜ ಒಡೆಯರ್ ಕುರಿತ ಲೇಖನ ರಾಜ್ಯಕ್ಕೆ ಸಾಧಿಸಿದ ಅಪ್ರತಿಮ ಮಹಾರಾಜರು ಎಂಬುದಕ್ಕೆ ಕೈಗನ್ನಡಿಯಾಗಿದೆ. ದಾರದಹಳ್ಳಿಯ ಪಶು ಆಸ್ಪತ್ರೆಯಂತೆ ರಾಜ್ಯದ ಎಲ್ಲಾ ಆಸ್ಪತ್ರೆಗಳು ಅಳವಡಿಸಿಕೊಂಡರೆ ಎಷ್ಟು ಚೆನ್ನ ಎನಿಸಿತು. ಹಾಗೆಯೇ ರಾಷ್ಟ್ರಪಕ್ಷಿ ನವಿಲಿನ ವರ್ಣನೆ ಆನಂದವನ್ನುಂಟು ಮಾಡಿತು.

ಬಹು ಬೆಳೆ ಕೃಷಿ ಪದ್ಧತಿಯನ್ನು ಇಂದಿನ ಯುವ ಜನರು ಅನುಸರಿಸಬೇಕಾಗಿದೆ. ಕಲಾ ಕುಸುಮ ಯಲ್ಲವ್ವನ ಜಾನಪದ ಬದುಕು, ನಡೆದು ಬಂದ ದಾರಿ ಕರ್ನಾಟಕ ಜಾನಪದದ ಸೊಗಡನ್ನು ಬಿಂಬಿಸುತ್ತದೆ. ಒಟ್ಟಿನಲ್ಲಿ ಇಡೀ ಸಂಚಿಕೆಯಲ್ಲಿ ಅತ್ಯುತ್ತಮ ಲೇಖನಗಳು ಪ್ರಕಟವಾಗಿವೆ.

**–ಡಾ.ಬಿ.ಎ.ರಾಜಪ್ಪ ನಿಬಗೂರು,** ಬದರಕೆರೆ

ಮಾನ್ಯರೆ, ಜುಲೈ ತಿಂಗಳ ಸಂಚಿಕೆ ನೋಡಿ ತುಂಬಾ ಸಂತೋಷವಾಯಿತು. ನಾಡು ಕಟ್ಟಿದ ನಾಲ್ವಡಿ ಕೃಷ್ಣರಾಜ ಒಡೆಯರ್, ಶ್ರೀಕೃಷ್ಣಪಾಂಜಾತದ ಕಲಾ ಕುಸುಮ-ಯಲ್ಲವ್ವ ಮತ್ತು ದ್ವಿಚಕ್ರ ವಾಹನ ಸವಾರರ ಜೀವರಕ್ಷಕ ಶಿರಸ್ತ್ರಾಣ ಲೇಖನಗಳು ತುಂಬ ಮಾಹಿತಿ ಕೊಟ್ಟವು. ಅದರಲ್ಲೂ ಸಾಸಿರ ಕಣ್ಣಿನ ಚೆಲುವ ಎಂಬ ಲೇಖನ ತುಂಬಾ ಹಿಡಿಸಿತು. ಲೇಖನದಲ್ಲಿ ನವಿಲಿನ ಬಗ್ಗೆ ಸಮಗ್ರ ಪರಿಚಯ ನೀಡಲಾಗಿದೆ. ಒಟ್ಟಿನಲ್ಲಿ ಸಂಚಿಕೆಯು ಸಂಗ್ರಹಕ್ಕೆ ಯೋಗ್ಯವಾಗಿದೆ.

**– ಶಂಕ್ರಪ್ಪ ತೊಂಡಿಹಾಳ,** ಗದಗ

ಮೈತ್ರಿ ಸರ್ಕಾರಕ್ಕೆ ಒಂದು ವರ್ಷವಾಗಿರುವ ಹಿನ್ನೆಲೆಯಲ್ಲಿ ವಿಧಾನಸೌಧದ ಚಿತ್ರದೊಂದಿಗೆ ಮಾನ್ಯ ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿಯವರ ಭಾವಚಿತ್ರಗಳನ್ನು ಹೊಂದಿರುವ ನಮ್ಮ ವಾರ್ತಾ ಜನಪದ ಜುಲೈ ಮಾಸ ಪತ್ರಿಕೆಯ ಮುಖಪುಟವು ಉತ್ತಮವಾಗಿ ಮೂಡಿ ಬಂದಿದೆ. ನಮ್ಮ ಜನಪದ ಮಾಸಿಕವು ಜ್ಞಾನ ಭಂಡಾರವಾಗಿರುವುದು ಹೆಮ್ಮೆಯ ಸಂಗತಿ.

ಮೋಡ ಬಿತ್ತನೆ ಕುರಿತ ಜ್ಞಾನ, ಗಿರೀಶ ಕಾರ್ನಾಡ ಅವರ ಸಂಪೂರ್ಣ ಜೀವನ, ನಾಡು ಕಟ್ಟಿದ ನಾಲ್ವಡಿ ಕೃಷ್ಣ ರಾಜ ಒಡೆಯರ್ ಅವರ ಸಮಾನತೆ ನೀತಿ, ನಿರುದ್ಯೋಗಿಗಳಿಗೆ ಐರಾವತ, ವಿಸ್ಮಯವಾಗಿ ದಾದರಹಳ್ಳಿಯ ಮಾದರಿ ಪಶು ಆಸ್ಪತ್ರೆ, ಸಾಸಿರ ಕಣ್ಣಿನ ಚೆಲುವ ರಾಷ್ಟ್ರಪಕ್ಷಿ ನವಿಲಿನ ಜೀವನ, ಹನುಮನ ಹಳ್ಳಿಯ ಜನರ ಆದರ್ಶ ಜೀವನ, ಹಾಗೂ ಕಲಾ ಕುಸುಮ ಸಹೋದರಿ ಯಲ್ಲವ್ವನವರು ಸರಾಗವಾಗಿ ನೋಡಿಕೊಳ್ಳದೇ 50 ಹೆಸರು ಹೇಳುವ ನೈಪುಣ್ಯತೆ, ಮತ್ತು ವಾಹನ ಸವಾರರು ಶಿರಸ್ತ್ರಾಣವನ್ನು ಏಕೆ ಉಪಯೋಗಿಸ ಬೇಕೆಂಬುದಕ್ಕೆ ಉಪಯುಕ್ತ ಮಾಹಿತಿಯನ್ನು ನೀಡಲಾಗಿದೆ.

**–ವೈ.ಸಿ.ಚೋಳಕೆ,** ವಿಜಯಪುರ

"ಬರಗಾಲಕ್ಕೊಂದು ಶಾಶ್ವತ ಪರಿಹಾರ ಮೋಡ ಬಿತ್ತನೆ" ಬಗ್ಗೆ ಪ್ರಕಟವಾಗಿರುವ ಲೇಖನ ಸಮಗ್ರ ಮಾಹಿತಿಯನ್ನು ಒಳಗೊಂಡಿದೆ. ಮೋಡ ಬಿತ್ತನೆ ಅಂದರೆ ಏನು?, ಅದನ್ನು ಹೇಗೆ ಮಾಡಲಾಗುತ್ತದೆ?, ಎಂಬ ಪ್ರಶ್ನೆಗಳು ಎಷ್ಟೋ ಜನರಿಗೆ ಕಾಡುತಿತ್ತು. ಹಾಗಾಗಿ ಇಂತಹ ಉತ್ತಮ ವಿಷಯದಲ್ಲಿ ಲೇಖನವನ್ನು ಓದುಗರಿಗೆ ನೀಡಿರುವುದಕ್ಕೆ ಧನ್ಯವಾದಗಳು. ಇನ್ನು ಸೋಮಲಿಂಗಪ್ಪ ಬೆಣ್ಣೆ ಗುಳದಳ್ಳಿ ಅವರು ಬರೆದಿರುವ 'ಗಾಂಧಿ ಕನಸಿನ ಮಾದರಿ ಗ್ರಾಮ' ಲೇಖನ ಓದಿದ ನನಗೆ ಹನುಮನಹಳ್ಳಿಯ ಜನರ ಸೌಹಾರ್ದ ಮನೋಭಾವ ಕಂಡು ಹೆಮ್ಮೆ ಎನಿಸಿತು. ಇವರಂತೆ ನಮ್ಮ ದೇಶದ ಎಲ್ಲಾ ಜನರು ಪಾಲಿಸಿಕೊಂಡು ಬಂದಲ್ಲಿ ಖಂಡಿತವಾಗಿ ಗಾಂಧಿ ಕಂಡ ಕನಸಿನ ರಾಜ್ಯವನ್ನು ನನಸು ಮಾಡಬಹುದು.

**–ರಂಜಿತ,** ಹಾಸನ

ಜೂನ್ ತಿಂಗಳ ವಾರ್ತಾ ಜನಪದದಲ್ಲಿ 'ದ್ವಿಚಕ್ರ ವಾಹನ ಸವಾರರ ಜೀವರಕ್ಷಕ ಶಿರಸ್ತ್ರಾಣ' ಎಂಬ ಲೇಖನ ಅತೀ ಸುಂದರವಾಗಿ ಅರಿವು ಮೂಡಿಸುವ ರೀತಿಯಲ್ಲಿ ಪ್ರಕಟಿಸಲಾಗಿದೆ. ಹೆಲ್ಮೆಟ್ ಧರಿಸುವುದರ ಅವಶ್ಯಕತೆ, ಅದರ ಮಹತ್ವ ಕುರಿತು ಉತ್ತಮವಾಗಿ ಪ್ರಕಟಿಸಲಾಗಿದೆ. ಗುಣಮಟ್ಟದ ಹೆಲ್ಮೆಟ್ ಅನ್ನು ಅಧಿಕೃತ ಡೀಲರ್‌ಗಳಿಂದಲೇ ಖರೀದಿಸಬೇಕು, ಗುಣಮಟ್ಟವನ್ನು ಪರೀಕ್ಷಿಸುವ ವಿಧಾನ, ಇವೇ ಮುಂತಾದ ಹಲವಾರು ಉತ್ತಮ ಮಾಹಿತಿಯನ್ನು ಈ ಲೇಖನದಲ್ಲಿ ಕೊಡಲಾಗಿದೆ.

ಅಪಘಾತ ಸಂದರ್ಭದಲ್ಲಿ ತಲೆಗೆ, ಮೆದುಳಿಗೆ ಉಂಟಾಗಬಹುದಾದ ಗಾಯಗಳಿಂದ ಇದು ಪರಿಪೂರ್ಣ ರಕ್ಷಣೆ ಕೊಡುತ್ತದೆ. ಬೆಂಗಳೂರಿನಲ್ಲಿ 38 ಲಕ್ಷದಷ್ಟು ದ್ವಿಚಕ್ರ ವಾಹನಗಳಿರುವ ಸುದ್ದಿ ತಿಳಿದು ಆಶ್ಚರ್ಯವಾಯಿತು. ಪೊಲೀಸರ ಸಲುವಾಗಿ ಹೆಲ್ಮೆಟ್ ಧರಿಸದೆ ನಮ್ಮ ಸುರಕ್ಷತೆಗಾಗಿ ಹೆಲ್ಮೆಟ್ ಧರಿಸಬೇಕೆಂಬುದನ್ನು ಲೇಖನದ ಮೂಲಕ ಚೆನ್ನಾಗಿ ತಿಳಿಸಿಕೊಟ್ಟಿರುವಿರಿ.

**–ವಿಲ್ಸನ್,** ಉತ್ತರ ಕನ್ನಡ

'ವಾರ್ತಾ ಜನಪದ' ಮಾಸಿಕ ಈಗ **www.kanaja.in**ನಲ್ಲಿ ಲಭ್ಯ

ವಾರ್ಷಿಕ ಚಂದಾ ರೂ.25/-

'ವಾರ್ತಾ ಜನಪದ' ಮಾಸಿಕಕ್ಕೆ ಚಂದಾದಾರರಾಗುವವರು ರೂ. 25/- ಅನ್ನು ಕಡ್ಡಾಯವಾಗಿ **"The Director, Department of Information & Public Relations"** ಹೆಸರಿನಲ್ಲಿ ಡಿ.ಡಿ. ಮುಖಾಂತರವೇ ಕಳುಹಿಸಬೇಕು. ಮನಿ ಆರ್ಡರ್ ಮೂಲಕ ಹಣವನ್ನು ಸ್ವೀಕರಿಸುವುದಿಲ್ಲ.

ವಾರ್ತಾ ಜನಪದ ಪತ್ರಿಕೆಯ ಸಾಫ್ಟ್ ಕಾಪಿಯನ್ನು ಇ-ಮೇಲ್ ಮೂಲಕ ಉಚಿತವಾಗಿ ಚಂದಾದಾರರಾಗಲು ಇಚ್ಛಿಸುವವರು ತಮ್ಮ ಇ-ಮೇಲ್ ವಿಳಾಸವನ್ನು 9480841210 ಗೆ ಕಳುಹಿಸಿ ನೋಂದಾಯಿಸಿ ಕೊಳ್ಳಬಹುದು.

downloaded from: www.kpscvaani.com




# ನಾಲ್ಕನೇ ಬಾರಿಗೆ ಮುಖ್ಯಮಂತ್ರಿಯಾದ ಬಿ.ಎಸ್. ಯಡಿಯೂರಪ್ಪ



ಶ್ರೀ ಬಿ.ಎಸ್.ಯಡಿಯೂರಪ್ಪ ಅವರು ರಾಜ್ಯದ ನೂತನ ಮುಖ್ಯಮಂತ್ರಿಯಾಗಿ 26-07-2019ರಂದು ಅಧಿಕಾರ ಸ್ವೀಕರಿಸಿದ್ದಾರೆ. ರಾಜ್ಯಪಾಲ ಶ್ರೀ ವಜುಭಾಯಿ ವಾಲ ಅವರು ರಾಜಭವನದ ಗಾಜಿನ ಮನೆಯಲ್ಲಿ ನೂತನ ಮುಖ್ಯಮಂತ್ರಿಗಳಿಗೆ ಪ್ರಮಾಣ ವಚನ ಭೋದಿಸಿದರು. ಬಿ.ಎಸ್.ಯಡಿಯೂರಪ್ಪ ಅವರು ನಾಲ್ಕನೆಯ ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಕೀರ್ತಿಗೆ ಪಾತ್ರರಾಗಿದ್ದಾರೆ.



ಡಾ. ಶ್ರೀ ಶ್ರೀ ಶ್ರೀ ಶಿವಕುಮಾರಸ್ವಾಮೀಜಿ ಅವರೊಂದಿಗೆ...




ದಿ। ಮಾಜಿ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರೊಂದಿಗೆ...



ಮಾಜಿ ಉಪ ಪ್ರಧಾನಿ ಹಾಗೂ ಹಿರಿಯ ಮುಖಂಡರಾದ ಎಲ್.ಕೆ. ಅಡ್ವಾಣಿ ಅವರೊಂದಿಗೆ..

ಯಡಿಯೂರಪ್ಪನವರು 1972ರಲ್ಲಿ ಶಿಕಾರಿಪುರ ಪುರಸಭೆಯ ಸದಸ್ಯ, ತದನಂತರ 1975 ರಲ್ಲಿ ಪುರಸಭೆ ಅಧ್ಯಕ್ಷರಾಗಿ ಸಕ್ರಿಯ ರಾಜಕಾರಣಕ್ಕೆ ಕಾಲಿರಿಸಿದರು. 1983ರಿಂದ ಈವರೆಗೆ ಆರು ಬಾರಿ ಶಿಕಾರಿಪುರದಿಂದ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾಗಿರುವ ಅವರು ಶಾಸಕರಾಗಿ, ಲೋಕಸಭೆ ಸದಸ್ಯರಾಗಿ, ಕರ್ನಾಟಕ ವಿಧಾನಸಭೆಯಲ್ಲಿ ವಿರೋಧಪಕ್ಷದ ನಾಯಕರಾಗಿ, ಉಪಮುಖ್ಯಮಂತ್ರಿಯಾಗಿ ಮತ್ತು ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ.




ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ...



downloaded from: www.kpscvaani.com



ದಿ। ಮಾಜಿ ರಾಷ್ಟ್ರಪತಿ ಡಾ।ಎ.ಪಿ.ಜೆ ಅಬ್ದುಲ್ ಕಲಾಂ ಅವರೊಂದಿಗೆ...



ಉಪ ರಾಷ್ಟ್ರಪತಿ ವೆಂಕಯ್ಯ ನಾಯ್ಡು ಅವರೊಂದಿಗೆ...

ಮಂಡ್ಯ ಜಿಲ್ಲೆ ಕೆ.ಆರ್.ಪೇಟೆ ತಾಲ್ಲೂಕಿನ ಬೂಕನಕೆರೆಯ ಶ್ರೀ ಸಿದ್ದಲಿಂಗಪ್ಪ ಮತ್ತು ಶ್ರೀಮತಿ ಪುಟ್ಟತಾಯಮ್ಮ ಅವರ ಪುತ್ರರಾಗಿ ರೈತಾಪಿ ಕುಟುಂಬದಲ್ಲಿ ಯಡಿಯೂರಪ್ಪನವರು 1943ರ ಫೆಬ್ರವರಿ 27ರಂದು ಜನಿಸಿದರು. ಮಂಡ್ಯದ ಪಿ.ಇ.ಎಸ್. ಕಾಲೇಜಿನಲ್ಲಿ ಪದವಿ ಪೂರ್ವ ಹಾಗೂ ಬೆಂಗಳೂರಿನಲ್ಲಿ ಪದವಿ ಶಿಕ್ಷಣ ಮುಗಿಸಿದ ಯಡಿಯೂರಪ್ಪನವರು ಸ್ವಲ್ಪ ಕಾಲ ಸಮಾಜ ಕಲ್ಯಾಣ ಇಲಾಖೆಯಲ್ಲಿ ಸೇವೆ ಸಲ್ಲಿಸಿ ತದನಂತರ ಶಿಕಾರಿಪುರದ ಖಾಸಗಿ ರೈಸ್ ಮಿಲ್‌ನಲ್ಲಿ ಕೂಡ ಕಾರ್ಯನಿರ್ವಹಿಸಿದ್ದರು. ಮೈತ್ರಾದೇವಿ ಅವರನ್ನು ಮದುವೆಯಾದ ಬಳಿಕ ಶಿಕಾರಿಪುರದಲ್ಲಿ ಸ್ವಂತ ಉದ್ದಿಮೆ ಕೂಡ ನಡೆಸಿದ್ದರು.

ಬಾಲ್ಯದಿಂದಲೂ ನಾಯಕತ್ವದ ಗುಣ ಹಾಗೂ ಶಿಸ್ತುಬದ್ಧ ಜೀವನಕ್ಕೆ ಹೆಸರಾಗಿದ್ದ ಅವರು 1972ರಲ್ಲಿ ಶಿಕಾರಿಪುರ ಪುರಸಭೆಯ ಸದಸ್ಯ, ತದನಂತರ 1975 ರಲ್ಲಿ ಪುರಸಭೆ ಅಧ್ಯಕ್ಷರಾಗಿ ಸಕ್ರಿಯ ರಾಜಕಾರಣಕ್ಕೆ ಕಾಲಿರಿಸಿದರು. 1983ರಿಂದ ಈವರೆಗೆ ಆರು ಬಾರಿ ಶಿಕಾರಿಪುರದಿಂದ ಕರ್ನಾಟಕ ವಿಧಾನಸಭೆಗೆ ಆಯ್ಕೆಯಾಗಿರುವ ಅವರು ಶಾಸಕರಾಗಿ, ಲೋಕಸಭೆ ಸದಸ್ಯರಾಗಿ, ಕರ್ನಾಟಕ ವಿಧಾನಸಭೆಯಲ್ಲಿ ವಿರೋಧಪಕ್ಷದ ನಾಯಕರಾಗಿ, ಉಪಮುಖ್ಯಮಂತ್ರಿಯಾಗಿ ಮತ್ತು ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದಾರೆ. 2007ರಲ್ಲಿ ಮೊದಲ ಬಾರಿ ಮುಖ್ಯಮಂತ್ರಿಯಾದ ಅವರು ಅಲ್ಪ ಕಾಲದಲ್ಲಿ ಅಧಿಕಾರ ತ್ಯಜಿಸಬೇಕಾಯಿತು. 2008ರಲ್ಲಿ 2ನೇ ಬಾರಿಗೆ ಮುಖ್ಯಮಂತ್ರಿಯಾಗಿ ಸುಮಾರು ಮೂರೂವರೆ ವರ್ಷ ಅಧಿಕಾರದಲ್ಲಿದ್ದರು. 2018ರಲ್ಲಿ ಮೂರನೇ ಬಾರಿಗೆ ಮುಖ್ಯಮಂತ್ರಿಯಾಗಿ ಅಲ್ಪ ಕಾಲದಲ್ಲಿ ಅಧಿಕಾರ ಬಿಟ್ಟುಕೊಟ್ಟರು. ಇದೀಗ ಅಂದರೆ 26-07-2019ರಂದು ನಾಲ್ಕನೇ ಬಾರಿಗೆ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ್ದಾರೆ.



ಕೇಂದ್ರ ರಕ್ಷಣಾ ಸಚಿವರಾದ ರಾಜನಾಥ್ ಸಿಂಗ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ.

ಜೀತದಾಳು ವಿಮುಕ್ತಿ ಹೋರಾಟ ಮತ್ತು ರೈತಪರ ಹೋರಾಟದ ಮೂಲಕ ರಾಜ್ಯ ರಾಜಕೀಯದ ಪ್ರಧಾನ ಭೂಮಿಕೆಯಲ್ಲಿ ಮೇಲೆದ್ದು ನಿಂತ ಯಡಿಯೂರಪ್ಪನವರು ಮುಖ್ಯಮಂತ್ರಿಯಾಗಿ ಹಲವು ಜನಪರ ಹಾಗೂ ಅಭಿವೃದ್ಧಿ ಯೋಜನೆಗಳ ಅನುಷ್ಠಾನಕ್ಕೆ ಬುನಾದಿ ಹಾಕಿದ್ದರು. ಭಾಗ್ಯಲಕ್ಷ್ಮಿ, ಸಂಧ್ಯಾ ಸುರಕ್ಷ, ಉಚಿತ ಬೈಸಿಕಲ್ ವಿತರಣೆ, ಕ್ಷೀರ ಸಹಾಯಧನ, ಆರೋಗ್ಯ ಕವಚ, ಸುವರ್ಣ ಭೂಮಿ, ಸುವರ್ಣ ಕಾಯಕ, ಸಾವಯವ ಕೃಷಿ ಮೊದಲಾದವು ಅವರ ಸರ್ಕಾರದ ಯಶಸ್ವಿ ಯೋಜನೆಗಳಾಗಿವೆ. ಅಲ್ಲದೇ, ರಾಷ್ಟ್ರದ ಕೃಷಿ ಬಜೆಟ್ ಮಂಡನೆ ಮತ್ತು ಶೂನ್ಯ ಬಡ್ಡಿದರದಲ್ಲಿ ಕೃಷಿ ಸಾಲ ವಿತರಣೆಯ ಖ್ಯಾತಿ ಕೂಡ ಅವರ ಸರ್ಕಾರಕ್ಕೆ ಇದೆ.



# ಸ್ವಾತಂತ್ರ್ಯೋತ್ಸವದ ಹರ್ಷಧಾರೆಯಲ್ಲಿ...

ಬನ್ನೂರು ಕೆ. ರಾಜು

ಮಧ್ಯರಾತ್ರಿ ಗಂಟೆ ಹೊಡೆಯುತ್ತಿದ್ದಂತೆ ಜಗತ್ತು ಮಲಗಿರುವಾಗ ಭಾರತವು ಚಲನಶೀಲತೆ ಮತ್ತು ಸ್ವಾತಂತ್ರ್ಯಕ್ಕೆ ಎಚ್ಚರಗೊಳ್ಳುತ್ತಿದೆ. ಇತಿಹಾಸದಲ್ಲಿ ಅಪರೂಪವಾಗಿ ಬರುವ ಇಂಥ ಈ ಗಳಿಗೆಯಲ್ಲಿ ಹಳತಿನಿಂದ ಹೊಸತಿಗೆ ಕಾಲಿಡುತ್ತಿದ್ದೇವೆ. ಹಳೆಯ ಯುಗ ಮುಗಿದು ಬಹುಕಾಲ ಅದುಮಿಟ್ಟ ದೇಶವೊಂದರ ಚೇತನವು ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತಿದೆ. ಇವತ್ತು ನಾವು ನಮ್ಮ ದುರಾದೃಷ್ಟದ ಕಾಲವನ್ನು ಮುಗಿಸಿದ್ದೇವೆ ಮತ್ತು ಭಾರತವು ತನ್ನನ್ನು ತಾನು ಮತ್ತೆ ಕಂಡುಕೊಳ್ಳುತ್ತಿದೆ.

"ನಡೆ ಮುಂದೆ ನಡೆ ಮುಂದೆ ನುಗ್ಗಿ ನಡೆ ಮುಂದೆ
ಜಗ್ಗದೆಯೆ, ಕುಗ್ಗದೆಯೆ, ಹಿಗ್ಗಿ ನಡೆ ಮುಂದೆ
ನಾನಳಿವೆ ನೀನಳಿವೆ ನಮ್ಮೆಲುಬುಗಳ ಮೇಲೆ
ಮೂಡುವುದು, ಮೂಡುವುದು ನವಭಾರತದ ಲೀಲೆ"

ಎಂಬ ಮಹಾಕವಿ ಕುವೆಂಪು ಅವರ 'ಪಾಂಚಜನ್ಯ'ದ ಕಾವ್ಯ ನುಡಿಗಳಂತೆ ಸ್ವಾತಂತ್ರ್ಯದ ಕಿಡಿಗಳಾಗಿ ಹೋರಾಟದ ಹಾದಿಯಲ್ಲಿ ಹೊತ್ತಿ ಉರಿದು ಬಲಿದಾನವಾದವರ ಕಥೆಗಳನ್ನು ಕೇಳಿದರೆ ಕಲ್ಲು ಕೂಡ ಕರಗಿ ಕಣ್ಣೀರಾಗಿ ಜಿಡುತ್ತದೆ. ಭಾರತ ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹರಿದ ರಕ್ತವನ್ನು ಅಳೆದವರಿಲ್ಲ, ಹಾರಿ ಹೋದ ಪ್ರಾಣ ಪಕ್ಷಿಗಳೆಷ್ಟೋ ಲೆಕ್ಕ ವಿಟ್ಟವರಿಲ್ಲ. ನಗು ನಗುತ್ತಲೇ ನೇಣುಗಂಬವೇರಿದ ಸ್ವಾತಂತ್ರ್ಯ ವೀರರಿಗಿಲ್ಲ ಯಾವುದೂ ಸಮ. ಭಾರತಾಂಬೆಗೆ ನೆತ್ತರನೆ ಅಭಿಷೇಕಗೈದ ದೇಶ ಭಕ್ತರಿಗೆ ಸಾಟಿ ಎಲ್ಲಿದ್ದೀತು.

ಅಂತಹ ತ್ಯಾಗಜೀವಿ ದೇಶ ಭಕ್ತರ ಹೃದಯ ಭೂಮಿಯಲ್ಲಿ ಅರಳಿದ ಶಾಂತಿ ಪುಷ್ಪವೇ ಈ ಸ್ವಾತಂತ್ರ್ಯ. ಅದಕ್ಕೇನೆ ಇವರೆಲ್ಲರನ್ನೂ, ಇವೆಲ್ಲವನ್ನೂ ನೆನೆಸಿಕೊಂಡು ನಮ್ಮ ರಾಷ್ಟ್ರದ ಮೊದಲ ರಾಷ್ಟ್ರಪತಿ ಡಾ. ಬಾಬು ರಾಜೇಂದ್ರ ಪ್ರಸಾದರು ಕಂಗಳನ್ನು ಕಂಬನಿಯ ಕಡಲು ಮಾಡಿಕೊಂಡು 1947 ಆಗಸ್ಟ್ 14ರ ರಾತ್ರಿ 11 ಗಂಟೆಯಲ್ಲಿ ಸೇರಿದ್ದ ರಾಜ್ಯಾಂಗ ಸಭೆಯನ್ನುದ್ದೇಶಿಸಿ ಮಾತನಾಡುತ್ತಾ "ನಗು ಮುಖದಿಂದ ನೇಣುಗಂಬವೇರಿದ, ಗುಂಡಿನ ಸುರಿ ಮಳೆಗೆ ಎದೆಗೊಟ್ಟು ಅಂಡಮಾನಿನ ಜೈಲಿನಲ್ಲಿ ಜೀವಂತ ಸಾವನ್ನು ಅನುಭವಿಸಿದ, ಭಾರತದ ಜೈಲುಗಳಲ್ಲಿ ಅನೇಕ ವರ್ಷಗಳು ಜೀವ ಸವೆಸಿದ, ವಿದೇಶಗಳಲ್ಲಿ ಆಶ್ರಯ ಪಡೆದು ಅವಮಾನಕರ ಜೀವನ ನಡೆಸಿದ, ಬರೀ ಐಶ್ವರ್ಯ-ಆಸ್ತಿಗಳನ್ನಷ್ಟೇ ಕಳೆದುಕೊಳ್ಳದೆ ನಾವೀಗ ತಲುಪಿರುವ ಮಹಾನ್ ಗುರಿಯನ್ನು ಸಾಧಿಸಲು ತಮ್ಮ ನೆಂಟರಿಷ್ಟರಿಂದಲೂ ದೂರವಾದ ಎಲ್ಲ ಪರಿಚಿತ-ಅಪರಿಚಿತ ಪುರುಷರು, ಮಹಿಳೆಯರ ಸೇವೆಯನ್ನು ನಾವು ಕೃತಜ್ಞತಾ ಪೂರ್ವಕವಾಗಿ ಸ್ಮರಿಸಿಕೊಳ್ಳೋಣ" ಎಂದು ಗದ್ಗದಿತರಾಗುತ್ತಾರೆ.

ಹೀಗೆ ತಾಯಿ ಭಾರತಾಂಬೆಯ ದೇಶಪ್ರೇಮಿ ಸುಪುತ್ರ-ಸುಪುತ್ರಿಯರ ವೀರೋಚಿತ ವೀರಾಗ್ರಣಿಗಳ ಹೋರಾಟ ಹಾಗೂ ತ್ಯಾಗದ ಫಲವಾಗಿ ಸ್ವಾತಂತ್ರ್ಯವೆಂಬ ಅಮೃತ ಫಲ ಭಾರತಕ್ಕೆ ದೊರೆತದ್ದು ಈಗ ಇತಿಹಾಸ. ಭಾರತಕ್ಕೆ ಸ್ವಾತಂತ್ರ್ಯ ಘೋಷಣೆಯಾದ ಆ ಒಂದು ಕ್ಷಣ ಭಾರತೀಯರಿಗೆ ರಸರೋಮಾಂಚನ. ಆದರೆ ಭಾರತಕ್ಕೆ ಸ್ವಾತಂತ್ರ್ಯ ಘೋಷಣೆಗೂ ಮೊದಲೇ 1947 ಜೂನ್ 3 ರಂದು ಅಂದಿನ ಗವರ್ನರ್ ಜನರಲ್ ಆಗಿದ್ದ ಲಾರ್ಡ್‌ಮೌಂಟ್ ಬ್ಯಾಟನ್, ಭಾರತ ಸಾಮ್ರಾಜ್ಯವನ್ನು ಭಾರತ ಮತ್ತು ಪಾಕಿಸ್ತಾನ ಎಂಬ ಎರಡು ರಾಷ್ಟ್ರಗಳಾಗಿ ವಿಭಜಿಸುವುದಾಗಿ ಘೋಷಿಸಿದ್ದ. ಅವತ್ತು ನಡೆದ ಅಖಂಡ ಭಾರತದ ವಿಭಜನೆ ಒಂದು ಐತಿಹಾಸಿಕ ದುರಂತ. ಆಗ ಘಟಿಸಿದ ಇಂಥ ದುರಂತದಿಂದ ಉದ್ಭವವಾಗಿರುವ ಭಾರತ-ಪಾಕಿಸ್ತಾನ ಎರಡೂ ದೇಶಗಳ ಅನೇಕ ಸಮಸ್ಯೆಗಳಿಗೆ ಸಮಾಧಾನಕರವಾದ ಯಾವುದೇ ಪರಿಹಾರ ಇವತ್ತಿಗೂ ಸಿಕ್ಕಿಲ್ಲ.

1947 ಆಗಸ್ಟ್ 15ರಂದು ಭಾರತೀಯರಾದ ನಾವು ಬ್ರಿಟೀಷರ ಕಪಿಮುಷ್ಟಿಯ ಸಂಕೋಲೆಯಿಂದ ಮುಕ್ತಿ ಪಡೆದು ಸ್ವತಂತ್ರರಾದೆವು. ಅಂದು ಭಾರತವನ್ನು ಸ್ವತಂತ್ರ ದೇಶವನ್ನಾಗಿ ಘೋಷಿಸಲಾಯಿತು. ಘೋಷಣೆಯ ಸಮಯ ಮಾತ್ರ ಕತ್ತಲು. ಅದೂ ಮಧ್ಯರಾತ್ರಿ. ಆದರೆ ಘೋಷಣೆಯಾಗುತ್ತಿದ್ದಂತೆಯೇ ದೇಶದ ದಾಸ್ಯದ ಅಂಧಕಾರ ಕಳೆದು ಭಾರತೀಯರೆಲ್ಲರ ಹೃನ್ಮನಗಳಲ್ಲಿ ಸ್ವಾತಂತ್ರ್ಯದ ಪ್ರಜ್ವಲ ಬೆಳಕು ಜ್ವಾಜಲ್ಯಮಾನವಾಗಿ ಬೆಳಗಿತ್ತು. ಕತ್ತಲಿನಿಂದ ಬೆಳಕಿನೆಡೆಗೆ ಸಾಗುವ ಸಂಕೇತವಿದು. 'ತಮಸೋಮಾ ಜ್ಯೋತಿರ್ಗಮಯಾ... !'ಭಾರತದ ತ್ರಿವರ್ಣ ಧ್ವಜ ಪಟಪಟನೆ ಬಾನೆತ್ತರ ಹಾರಿತ್ತು.

ಇದಕ್ಕೂ ಮುನ್ನಾ ದಿನ ಅಂದರೆ ಆಗಸ್ಟ್ 14ರಂದು ಭಾರತದ ರಾಜ್ಯಾಂಗ ಸಭೆಯು ಸಮಾವೇಶಗೊಂಡಿತ್ತು. ಆಗಸ್ಟ್ 15 ರಂದೇ ಸ್ವಾತಂತ್ರ್ಯ ಪಡೆದ ಭಾರತ ಸರ್ಕಾರದ ಪ್ರಮಾಣ ವಚನ ಸ್ವೀಕರಿಸಬೇಕಾದರೆ ಗವರ್ನರ್ ಜನರಲ್ ಇರಬೇಕು. ಲಾರ್ಡ್‌ಮೌಂಟ್ ಬ್ಯಾಟನ್‌ಗೆ ಆ ಸ್ಥಾನವನ್ನು ಹಸ್ತಾಂತರಿಸಬೇಕೆಂದು ಆ ಸಮಾವೇಶದಲ್ಲಿ



ಪ್ರತಿಪಾದಿಸಲಾಯಿತು. ಆಗ ಇದನ್ನು ರಾಜ್ಯಾಂಗ ಸಭೆ ಅನುಮೋದಿಸಿತು. ಸಮಾವೇಶದ ನಂತರ ರಾಜ್ಯಾಂಗ ಸಭೆ ಅಧ್ಯಕ್ಷರಾಗಿದ್ದ ಬಾಬು ರಾಜೇಂದ್ರ ಪ್ರಸಾದ್, ಪಂಡಿತ್ ಜವಾಹರಲಾಲ್ ನೆಹರು ಅವರುಗಳು ತಮ್ಮ ನಿರ್ಧಾರವನ್ನು ಲಾರ್ಡ್ ಮೌಂಟ್ ಬ್ಯಾಟನ್ನರಿಗೆ ತಿಳಿಸಿದರು. ಆಗ ಇದು ತನಗೆ ಅತ್ಯಂತ ಗೌರವವೆಂದು ಸಂವಿಧಾನ ಬದ್ಧವಾಗಿ ತಾವು ನಡೆದುಕೊಳ್ಳುವುದಾಗಿ ಅವರು ಹೇಳುತ್ತಾರೆ. ಮಾರನೇ ದಿನ ಆಗಸ್ಟ್ 15ರ ಬೆಳಗ್ಗೆ ಮೌಂಟ್ ಬ್ಯಾಟನ್ನರ ಕೈನಲ್ಲಿ ಸುಪ್ರೀಂಕೋರ್ಟ್ ಚೀಫ್ ಜಸ್ಟೀಸ್ ಕಾನಿಯಾ ಗವರ್ನರ್ ಜನರಲ್‌ರನ್ನು ಪ್ರಮಾಣ ಮಾಡಿಸಿ ಆನಂತರ ಹೊಸ ಗವರ್ನರ್ ಜನರಲ್ ನೂತನ ಕ್ಯಾಬಿನೆಟ್‌ನಿಂದ ಪದವಿ ಪ್ರಮಾಣ ಮಾಡಿಸುತ್ತಾರೆ. ನಂತರ ಮೌಂಟ್ ಬ್ಯಾಟನ್ ರಾಜ್ಯಾಂಗ ಸಭೆ ಕಾರ್ಯಾಲಯಕ್ಕೆ ಹೋಗುತ್ತಾರೆ. ಪ್ರಪಂಚದಾದ್ಯಂತ ಹರಿದು ಬಂದ ಶುಭಾಷಯ ಸಂದೇಶಗಳನ್ನು ಓದಲಾಗುತ್ತದೆ.

ಹೀಗೆ ಸ್ವಾತಂತ್ರ್ಯದ ಬೆಳಕು ಕಂಡ ಸ್ವತಂತ್ರ ಭಾರತದ ಪ್ರಪ್ರಥಮ ಪ್ರಧಾನಿ ಪಂಡಿತ್ ಜವಾಹರಲಾಲ್ ನೆಹರೂ ಅವರು ಆಗಸ್ಟ್ 15ರಂದು ಮಧ್ಯರಾತ್ರಿ ಪ್ರಮಾಣ ವಚನ ಸ್ವೀಕರಿಸಿ ಇಡೀ ಭಾರತದ ರಾಜಕೀಯ ಅಧಿಕಾರ ಕೇಂದ್ರವಾದ ದೆಹಲಿಯ ಕೆಂಪು ಕೋಟೆಯ ಮೇಲೆ ಮೊದಲ ರಾಷ್ಟ್ರಧ್ವಜಾರೋಹಣ ಮಾಡಿ, ಭಾರತೀಯ ರಾಜ್ಯಾಂಗವನ್ನು ಕುರಿತು 'ಭವಿಷ್ಯದೊಂದಿಗೆ ಅನುಸಂಧಾನ' ಎನ್ನುವ ತಮ್ಮ ಐತಿಹಾಸಿಕ ಭಾಷಣದಲ್ಲಿ ರಾಷ್ಟ್ರವನ್ನುದ್ದೇಶಿಸಿ ಮಾತನಾಡಿ "ಮಧ್ಯರಾತ್ರಿ ಗಂಟೆ ಹೊಡೆಯುತ್ತಿದ್ದಂತೆ ಜಗತ್ತು ಮಲಗಿರುವಾಗ ಭಾರತವು ಚಲನಶೀಲತೆ ಮತ್ತು ಸ್ವಾತಂತ್ರ್ಯಕ್ಕೆ ಎಚ್ಚರಗೊಳ್ಳುತ್ತಿದೆ. ಇತಿಹಾಸದಲ್ಲಿ ಅಪರೂಪವಾಗಿ ಬರುವ ಇಂಥ ಈ ಗಳಿಗೆಯಲ್ಲಿ







downloaded from: www.kpscvaani.com

ಹಳತಿನಿಂದ ಹೊಸತಿಗೆ ಕಾಲಿಡುತ್ತಿದ್ದೇವೆ. ಹಳೆಯ ಯುಗ ಮುಗಿದು ಬಹುಕಾಲ ಅದುಮಿಟ್ಟ ದೇಶವೊಂದರ ಚೇತನವು ತನ್ನ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತಿದೆ. ಇವತ್ತು ನಾವು ನಮ್ಮ ದುರಾದೃಷ್ಟದ ಕಾಲವನ್ನು ಮುಗಿಸಿದ್ದೇವೆ ಮತ್ತು ಭಾರತವು ತನ್ನನ್ನು ತಾನು ಮತ್ತೆ ಕಂಡುಕೊಳ್ಳುತ್ತಿದೆ. ಬಹು ದೀರ್ಘ ಕಾಲ ಭಾರತವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಪರಕೀಯರು ಆಡಳಿತ ನಡೆಸಿ ನಮ್ಮನ್ನು ಗುಲಾಮರಾಗಿಸಿದ್ದರು. ಹಲವಾರು ಮಹನೀಯರ ಹೋರಾಟ, ತ್ಯಾಗ, ಬಲಿದಾನದ ಮೂಲಕ ಈಗ ಸ್ವಾತಂತ್ರ್ಯ ಪಡೆದಿದ್ದೇವೆ. ಇನ್ನು ಮುಂದೆ ಜನತೆ ನೆಮ್ಮದಿಯಿಂದ ಬಾಳುವ ವಾತಾವರಣ ಮೂಡಿ ಬರುತ್ತದೆ. ಭಾರತ ಭವ್ಯ ದಿವ್ಯದೇಶವಾಗುತ್ತದೆ ..." ಎಂದು ಸಂಭ್ರಮ ಪಡುತ್ತಲೇ ನೆಹರೂ ಅವರು ದೇಶದ ಜನತೆಗೆ ಸಂದೇಶ ನೀಡಿದ್ದರು. ಈ ಮಾತು ಇಂದಿಗೂ ಅನುರಣಿಸುತ್ತಿದೆ.

ದೇಶದ ಮೊದಲ ಪ್ರಧಾನಿ ನೆಹರೂ ಅವರ ಸಂದೇಶದ ಆಶಯಗಳು ಹಾಗೂ ಸ್ವಾತಂತ್ರ್ಯಕ್ಕಾಗಿ ಬೆವರು ಸುರಿಸಿದ, ರಕ್ತ ಹರಿಸಿದ, ಬಲಿದಾನ ಗೈದ ಸ್ವಾತಂತ್ರ್ಯ ಯೋಧರು, ವೀರಾಗ್ರಣಿಗಳು ಬೋಧಿಸಿದ ಮೌಲ್ಯಗಳು, ಕಂಡ ಕನಸುಗಳು ಎಷ್ಟರ ಮಟ್ಟಿಗೆ ಸಾಕಾರಗೊಂಡಿವೆಯೋ ಬಿಟ್ಟಿವೆಯೋ ಆದರೆ ಇಂದು ಭಾರತವು ಆಧುನಿಕತೆಯಲ್ಲಿ ಮುಂಚೂಣಿಯಲ್ಲಿದ್ದು ವಿಶ್ವದ ಪ್ರಭಾವಿ ರಾಷ್ಟ್ರಗಳ ಸಾಲಿನಲ್ಲಿ ತಲೆಯೆತ್ತಿ ನಿಲ್ಲುವಂತಾಗಿರುವುದಂತೂ ನಿಜ.

ಜಗತ್ತಿನ ಬಹುದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲೊಂದಾಗಿರುವ ನಮ್ಮ ಭಾರತವು ಪ್ರಪಂಚದಲ್ಲಿ ಎಲ್ಲಿಯೂ ಕಾಣಸಿಗದಂತಹ ಅಪಾರವಾದ, ಅನನ್ಯವಾದ ಸಾಂಸ್ಕೃತಿಕ, ಚಾರಿತ್ರಿಕ ಮಹತ್ವವನ್ನು ಹೊಂದಿದ್ದು ಈ ದಿಶೆಯಲ್ಲಿ ಐಕ್ಯತೆಯನ್ನು ಸಾಧಿಸಿದೆ. ಭಾರತ ಸ್ವತಂತ್ರಗೊಂಡಾಗ ದೇಶದಲ್ಲಿ ಅನೇಕ ಸಮಸ್ಯೆಗಳಿದ್ದವು. ಬಹಳಷ್ಟು ರಾಜ ಮಹಾರಾಜರುಗಳ, ಅನೇಕ ಪಾಳೆಗಾರರ ಸಂಸ್ಥಾನಗಳಿಂದ ಭಾರತವು ಕೂಡಿದ್ದರಿಂದ ಇದೊಂದು ದೇಶದ ದೊಡ್ಡ ಸಮಸ್ಯೆಯೇ ಆಗಿತ್ತು. ಆಗ ರಾಜಕೀಯದ ಏಕೀಕರಣದ ಜವಾಬ್ದಾರಿಯನ್ನು ಹೆಗಲಿಗೇರಿಸಿಕೊಂಡು ಎಲ್ಲಾ ರಾಜ ಸಂಸ್ಥಾನಗಳನ್ನೂ ಒಂದುಗೂಡಿಸುವ ಕಾರ್ಯ ಮಾಡಲಾಯಿತು. ದೇಶದ ಆಡಳಿತ ವ್ಯವಸ್ಥೆಯ ಹಾಗೂ ಜನತೆಯ ಹಿತದೃಷ್ಟಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ನೇತೃತ್ವದಲ್ಲಿ ಸಂವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಇದೆಲ್ಲದರ ಫಲವಾಗಿ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ಒಟ್ಟಾರೆ ಅಭಿವೃದ್ಧಿಯ ಹಾದಿಯಲ್ಲಿ ತಾನು ಯಾರಿಗೂ ಕಡಿಮೆ ಇಲ್ಲವೆಂಬಂತೆ ದಾಸ್ಯದ ಪಂಜರದಿಂದ ಹೊರ ಬಂದು ಇಂದು ಭಾರತವು ಥಳ ಥಳನೆ ಹೊಳೆಯುತ್ತಿದೆ.

ವಿದೇಶಿಯರ ದಾಳಿಯಿಂದ, ದೌರ್ಜನ್ಯದಿಂದ, ದಬ್ಬಾಳಿಕೆಯಿಂದ ತತ್ತರಿಸುತ್ತಿದ್ದ ಭಾರತ ಮಾತೆಯು ಸ್ವಾತಂತ್ರ್ಯದ ಕಿರೀಟ ತೊಟ್ಟು ಸ್ವತಂತ್ರಳಾದದ್ದು ಈಗ ಒಂದು ಮಹಾಚರಿತ್ರೆ. ಇದೊಂದು ಭಾರತ ಸ್ವಾತಂತ್ರ್ಯದ ಮಹಾ ಕಾವ್ಯವೆನ್ನಬಹುದು. ಇದರ ಪ್ರತಿಯೊಂದು ಪುಟಗಳೂ ಅತ್ಯಂತ ರೋಚಕ ಮತ್ತು ಮಹತ್ವಪೂರ್ಣವಾದವು. ಮಹಾತ್ಮಗಾಂಧೀಜಿಯವರ ಸಾರಥ್ಯದಲ್ಲಿ ಅಹಿಂಸಾ ಮಾರ್ಗದಲ್ಲಿ ಚಳವಳಿ ನಡೆಸಿ ಸ್ವಾತಂತ್ರ್ಯಗಳಿಸಿದ್ದು ಈ ಸ್ವಾತಂತ್ರ್ಯದ ಮಹಾಕಾವ್ಯದ ಮಹತ್ತರ ಅಧ್ಯಾಯ. ಆದರೆ, ಇಂಥ ಸ್ವಾತಂತ್ರ್ಯ ಇವತ್ತು ದೇಶದಲ್ಲಿ ಯಾವ ಸ್ಥಿತಿಯನ್ನು ತಲುಪಿದೆ ಎನ್ನುವುದರತ್ತ ಪ್ರತಿಯೊಬ್ಬ ಭಾರತೀಯ ಪ್ರಜೆಯೂ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರ, ಕ್ರಾಂತಿ ವೀರರ, ಶಾಂತಿ ದೂತರ ಅಪೇಕ್ಷೆ ಏನಾಗಿತ್ತೆಂಬುದನ್ನೂ ಅರಿತು, ಅವರುಗಳ ಕನಸುಗಳೆಂತಹದ್ದೆಂದು ತಿಳಿದು ಅದನ್ನೆಲ್ಲವನ್ನೂ ಸಾಕಾರಗೊಳಿಸುವತ್ತ ನಾವು ಸಾಗಬೇಕಾಗಿದೆ. ಇದೇ ನಾವು ಅವರಿಗೆ ಸಲ್ಲಿಸುವ ದೊಡ್ಡ ಸೆಲ್ಯೂಟ್.

**"ಝಂಡಾ ಊಂಚಾ ರಹೇ ಹಮಾರಾ**
**ವಿಜಯೀ ವಿಶ್ವತಿರಂಗಾ ಪ್ಯಾರಾ**
**ಝಂಡಾ ಊಂಚಾ ರಹೇ ಹಮಾರಾ**
**ಸದಾ ಶಕ್ತಿ ಬರಸಾನೇವಾಲಾ**
**ಪ್ರೇಮಸುಧಾ ಬರಸಾನೇವಾಲಾ**
**ವೀರೋಂಕೋ ಹರುಷಾನೇವಾಲಾ**
**ಮಾತೃಭೂಮಿ ಕಾ ತನುಮನ ಸಾರಾ ...."**

ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕಾಲದಲ್ಲಿ ಅಖಂಡ ಭಾರತದ ಉದ್ದಗಲಕ್ಕೂ ಮೊಳಗುತ್ತಿದ್ದ ಸ್ವಾತಂತ್ರ್ಯ ಸೇನಾನಿಗಳ ಸ್ಫೂರ್ತಿ ಗೀತೆಯಿದು. ಇದು ಸ್ವಾತಂತ್ರ್ಯ ಪೂರ್ವದಲ್ಲಷ್ಟೇ ಅಲ್ಲದೆ ಸ್ವಾತಂತ್ರ್ಯಾ ನಂತರದಲ್ಲೂ ದೇಶದ ಮೈ-ಮನಗಳನ್ನೂ ಆವರಿಸಿಕೊಂಡಿರುವ ಶಕ್ತಿಗೀತೆಯಾಗಿದೆ. ಈ ಕ್ಷಣಕ್ಕೂ ಈ ಗೀತೆ ಕಿವಿಗೆ ಹಾಕಿದರೆ ಸಾಕು ನರ-ನಾಡಿಗಳಲ್ಲೂ, ಧಮನಿ ಧಮನಿಗಳಲ್ಲೂ ದೇಶ ಪ್ರೇಮದ ಮಹಾ ಚೈತನ್ಯ ಮೈದಾಳಿ ಪುಟಿಯುತ್ತದೆ. ಆಗಸ್ಟ್ ಹದಿನೈದರ ದಿನವಂತೂ ಈ ಗೀತೆ ಭಾರತೀಯರೆಲ್ಲರ ನಾಲಿಗೆಯಲ್ಲಿ ನಲಿಯುತ್ತದೆ.


ಆಗಸ್ಟ್ ಹದಿನೈದು ಭಾರತೀಯರ ಪಾಲಿಗೆ ಎಂದೂ ಮರೆಯಲಾಗದ ಪರಮ ಪವಿತ್ರ ದಿನ. ಈ ದಿನವನ್ನು ನೆನಸಿಕೊಂಡರೆ ಸಾಕು ಸಮಸ್ತ ಭಾರತೀಯರ ಮನಸ್ಸುಗಳೂ ಮಲ್ಲಿಗೆಯಾಗಿ ಅರಳುತ್ತದೆ. ಇನ್ನು ಈ ದಿನ ಬಂದೇ ಬಿಟ್ಟಿತೆಂದರೆ ಆ ಸಂಭ್ರಮಕ್ಕೆ, ಸಂತೋಷಕ್ಕೆ, ಉಲ್ಲಾಸಕ್ಕೆ ಪಾರವೇ ಇರುವುದಿಲ್ಲ. ಅಂಥ ಅವಿನಾಭಾವ ಸಂಬಂಧ, ಅವ್ಯಕ್ತ ಆನಂದ ಆಗಸ್ಟ್ ಹದಿನೈದರ ದಿನಕ್ಕೂ ಹಾಗೂ ಭಾರತೀಯರಿಗೂ ಉಂಟು. ಅಂಥ ಭವ್ಯ ದಿನ ಇದು. ಈ ದಿನದ ವಿಶೇಷವೇ ಅಂಥಾದ್ದು. ತಾಯಿ ಭಾರತಿ ಪರಕೀಯರ ಬಂಧನದಿಂದ ಬಿಡುಗಡೆಗೊಂಡ ಭಾಗ್ಯದ ದಿನವಿದು. ಅದೇ ಭಾರತದ ಸ್ವಾತಂತ್ರ್ಯ ದಿನ. ಭಾರತೀಯರ ಮಹಾಸುದಿನ. ಅಂದು ಹಳ್ಳಿಯಿಂದ ದಿಲ್ಲಿಯತನಕ ಹರ್ಷಧಾರೆಯ ಸ್ವಾತಂತ್ರ್ಯಾಮೃತ ಸಿಂಚನ. ಎಲ್ಲೆಲ್ಲೂ ತ್ರಿವರ್ಣ ಧ್ವಜಗಳ ಹಾರಾಟ. ಪುಟ್ಟ ಪುಟ್ಟ ಮಕ್ಕಳಿಂದ ಹಿಡಿದು ಯುವಜನತೆಯಿಂದ ವೃದ್ಧರ ತನಕ ಎಲ್ಲರಲ್ಲೂ ಸ್ವಾತಂತ್ರ್ಯೋತ್ಸವ ಸಡಗರ. ಸ್ವಾತಂತ್ರ್ಯೋತ್ಸವ ಕುರಿತು ಭಾಷಣಗಳು, ಹಾಡುಗಳು, ದೇಶಭಕ್ತಿಗೀತೆಗಳು, ರೂಪಕಗಳು, ನೃತ್ಯಗಳು, ನಾಟಕಗಳು .....ಹೀಗೆ ಎಲ್ಲವೂ ಮೇಳೈಸಿ ದೇಶಾದ್ಯಂತ ಭಾರತೀಯರ ಒಂದು ಸಾಂಸ್ಕೃತಿಕ ಲೋಕವೇ ತೆರೆದುಕೊಳ್ಳುತ್ತದೆ. ಹೇಳಿ ಕೇಳಿ ನಮ್ಮ ಭಾರತ ಬಹು ಸಂಸ್ಕೃತಿಯ ಭವ್ಯ ಪರಂಪರೆಯ ದೇಶ. ಅನೇಕತೆಯಲ್ಲಿ ಏಕತೆಯನ್ನು ಸಾಧಿಸಿರುವ ವಿಶ್ವದ ಬಹು ಅಪರೂಪದ ರಾಷ್ಟ್ರ. ಹಾಗಾಗಿ ಎಲ್ಲಾ ರೀತಿಯ ಸಾಂಸ್ಕೃತಿಕ ಉತ್ಸವಗಳೂ ಎಲ್ಲರೂಂದಾಗಿ ಸ್ವಾತಂತ್ರ್ಯದ ಹೆಸರಿನಲ್ಲಿ ಭಾರತ ಮಾತೆಗೆ ಸಲ್ಲಲ್ಪಡುತ್ತದೆ. ಆಗಸ್ಟ್ ಹದಿನೈದರ ಮಹತ್ವ ಮತ್ತು ಅಂದಿನ ಹರ್ಷವೇ ಅದ್ಭುತವಾದದ್ದು. ■



# ಜಲಿಯನ್ ವಾಲಾಬಾಗ್

## ಶತಮಾನ ಕಳೆದರೂ ಮಾಸದ ನೋವಿನ ನೆನಪು

ವಿರೇಶ ಮಾಶೆಟ್ಟಿ ನಿಡಗುಂದಿ





downloaded from: www.kpscvaani.com




**ಪ್ರ**ಸ್ತುತ ನಾವು 2019 ಆಗಸ್ಟ್ 15ರಂದು ಸ್ವಾತಂತ್ರ್ಯ ದಿನೋತ್ಸವವನ್ನು ಆಚರಿಸುವ ಸಂಭ್ರಮದಲ್ಲಿದ್ದೇವೆ. ಆದರೆ ಇದೇ ವರ್ಷದ ನೂರು ವರ್ಷಗಳ ಹಿಂದೆ ಅಂದರೆ 1919 ಏಪ್ರಿಲ್ ತಿಂಗಳಲ್ಲಿ ನಮ್ಮ ಭಾರತೀಯರು ಸ್ವಾತಂತ್ರ್ಯ ಎಂಬ ಅಮೃತವನ್ನು ನಮಗೆ ನೀಡಬೇಕಾದರೆ ತಮ್ಮ ಬದುಕನ್ನು ನೆಲದ ಕಟ್ಟಕಡೆಯ ಕಠೋರ ಸ್ಥಿತಿಯನ್ನು ಅನುಭವಿಸಿ ಜೀವ ಸಮರ್ಪಣೆ ಮಾಡಿದ್ದಾರೆ. ಏಕೆಂದರೆ **"ಜಲಿಯನ್ ವಾಲಾಬಾಗ್"** ಘಟನೆಯ ನರಕ ಸದೃಶ್ಯ ನೋಟ ಅಂತಹ ಕಣ್ಣೀರಿನ ನೆನಪು ಹುಟ್ಟಿಸುತ್ತದೆ. ಪಂಜಾಬ್‌ನ ಜನರಲ್ ಡ್ಶೆಯರ್‌ನ ಅಮಾನುಷ ವರ್ತನೆ, ಕ್ರೂರವಾದ ಅಧಿಕಾರ, ವಿಕೃತ ಮನಸ್ಸನ್ನು ನೋಡಿದ ನಮ್ಮ ಭಾರತೀಯರಿಗೆ ರಕ್ತ ಬೆಂಕಿಯಾಗಿ ಆದರ ಕಿಚ್ಚಿನಲ್ಲಿ ಆತನನ್ನು ದಹಿಸಬೇಕೆನ್ನುವ ಕೋಪವಿದ್ದರೂ ಅಂದು ಭಾರತೀಯರು ಅಸಹಾಯಕರಾಗಿದ್ದರು. ಡ್ಶೆಯರ್ ನೀಡಿದ ದೌರ್ಜನ್ಯಗಳು ಇಂದಿನ ಯುವಕರಿಗೆ ಸ್ವಾತಂತ್ರ್ಯ ಎನ್ನುವ ಬೆಳಕು ಒಮ್ಮೆಲೆ ಸಿಕ್ಕಿಲ್ಲ, ಹಾಗೂ ಇದು ಒಬ್ಬರ ಶ್ರಮದಿಂದ ಪಡೆದಿದ್ದುದಲ್ಲ ಎಂಬುದು ಅರಿವಾಗುತ್ತದೆ. ಸ್ವಾತಂತ್ರ್ಯದ ಹಿಂದೆ ಲಕ್ಷ ಲಕ್ಷ ಭಾರತೀಯರ ನೋವಿನ ಆಕ್ರಂದನ ಹಾಗೂ ಅವರು ಅನುಭವಿಸಿದ ಅಮಾನವೀಯ ಅವಮಾನವನ್ನು ನಾವೆಲ್ಲ ಸ್ಮರಿಸಬೇಕಾದ ಸಮಯವಿದು.

1919 ರಲ್ಲಿ ನಡೆದ "ಜಲಿಯನ್ ವಾಲಾಬಾಗ್" ಘಟನೆ ಆಧುನಿಕ ಭಾರತದ ಇತಿಹಾಸದಲ್ಲಿ ಆದರಲ್ಲೂ ಸ್ವಾತಂತ್ರ್ಯ ಚಳುವಳಿಯ ಇತಿಹಾಸದಲ್ಲಿ ಪ್ರಮುಖವಾದುದು. ಬ್ರಿಟಿಷರ ದಬ್ಬಾಳಿಕೆ, ಕ್ರೂರ ನೀತಿ, ಇತ್ಯಾದಿ ಅರಿತುಕೊಳ್ಳಲು ಈ ಘಟನೆ ಒಂದು ಉದಾಹರಣೆ ಎಂದರೆ ತಪ್ಪಿಲ್ಲ. 1919 ಏಪ್ರಿಲ್ 13 ರಂದು ವೈಶಾಖದ ದಿನ 10 ರಿಂದ 20 ಸಾವಿರ ಜನರು ಅಮೃತಸರದಲ್ಲಿರುವ ಜಲಿಯನ್ ವಾಲಾಬಾಗ್‌ನಲ್ಲಿ ಸಭೆ ಸೇರಿರುವರೆಂದು ತಿಳಿದ ಜನರಲ್ ಡ್ಶೆಯರ್ 25 ಜನ ಗೋರ್ಖಾ, 25 ಜನ ರೈಫಲ್ ಹೊಂದಿದ ಸೈನಿಕರು ಮತ್ತು 40 ಜನ ಆಯುಧ ಹೊಂದಿದ ಗೂರ್ಖಾ ಸೈನಿಕರನ್ನು ಎರಡು ವಾಹನಗಳಲ್ಲಿ ತುಂಬಿಕೊಂಡು ಸಭೆ ಸೇರಿದ ಸ್ಥಳಕ್ಕೆ ಬಂದನು.

ತನ್ನ ಅಪ್ಪಣೆಗೆ ವಿರುದ್ಧವಾಗಿ ಸಭೆ ಸೇರಿದ್ದ ಜನರಿಗೆ ಚದುರಲು ಎಚ್ಚರಿಕೆಯನ್ನು ನೀಡದೆ ಅಲ್ಲಿ ನೆರೆದಿದ್ದ ಗಂಡಸರು, ಹೆಂಗಸರು ಮತ್ತು ಮಕ್ಕಳ ಮೇಲೆ ಗುಂಡು ಹಾರಿಸಲು ಸೈನಿಕರಿಗೆ ಆಜ್ಞೆ ನೀಡಿದ. "10 ಸಾವಿರಕ್ಕೂ ಹೆಚ್ಚು ಶಸ್ತ್ರ ರಹಿತ ಗುಂಪಿನ ಮೇಲೆ 100 ಅಡಿ ಅಂತರದಿಂದ ಸತತವಾಗಿ 10 ನಿಮಿಷಗಳ ಕಾಲ ಅಮಾನುಷವಾಗಿ ಗುಂಡು ಹಾರಿಸಲಾಯಿತು. ಗುಂಡು ಹಾರಲು ಪ್ರಾರಂಭವಾದ ತಕ್ಷಣ ಜನರು ಚದುರಲು ಪ್ರಾರಂಭಿಸಿದರು. ಒಟ್ಟು 1650 ಗುಂಡುಗಳನ್ನು ಹಾರಿಸಲಾಯಿತು. ಗುಂಡನ್ನು ತಪ್ಪಿಸಿಕೊಳ್ಳಲು ಬೇರೆ ಯಾವುದೇ ಮಾರ್ಗವಿರಲಿಲ್ಲ, 5 ಅಡಿ ತಗ್ಗಾಗಿದ್ದ ಕಡೆಗೆ ಓಡಿ ತಪ್ಪಿಸಿಕೊಳ್ಳಲು ಜನರು ಪ್ರಯತ್ನಿಸುತ್ತಿದ್ದರು. ಆದರೆ ಜನ ಗುಂಪಾಗಿ ಸೇರಿದ



ಡ್ಶೆಯರ್ ನೀಡಿದ ದೌರ್ಜನ್ಯಗಳು ಇಂದಿನ ಯುವಕರಿಗೆ ಸ್ವಾತಂತ್ರ್ಯ ಎನ್ನುವ ಬೆಳಕು ಒಮ್ಮೆಲೆ ಸಿಕ್ಕಿಲ್ಲ, ಹಾಗೂ ಇದು ಒಬ್ಬರ ಶ್ರಮದಿಂದ ಪಡೆದಿದ್ದುದಲ್ಲ ಎಂಬುದು ಅರಿವಾಗುತ್ತದೆ. ಸ್ವಾತಂತ್ರ್ಯದ ಹಿಂದೆ ಲಕ್ಷ ಲಕ್ಷ ಭಾರತೀಯರ ನೋವಿನ ಆಕ್ರಂದನ ಹಾಗೂ ಅವರು ಅನುಭವಿಸಿದ ಅಮಾನವೀಯ ಅವಮಾನವನ್ನು ನಾವೆಲ್ಲ ಸ್ಮರಿಸಬೇಕಾದ ಸಮಯವಿದು.



ಕಡೆಗೆ ಗುರಿಯಿಡಬೇಕೆಂದು ಡ್ಶೆಯರ್ ಸೈನಿಕರಿಗೆ ಸೂಚನೆ ನೀಡುತ್ತಿದ್ದನು. ಮಕ್ಕಳನ್ನು ಎತ್ತುಕೊಂಡಿದ್ದ ತಾಯಂದಿರು ತನ್ನ ಮಗುವನ್ನು ಬಂದೂಕಿನ ಗುಂಡಿನಿಂದ ಪಾರು ಮಾಡಲು ಅಲ್ಲೇ ಇದ್ದ ಬಾವಿಗೆ ಹಾರಿಕೊಳ್ಳುತ್ತಿದ್ದರು. ಅಷ್ಟು ಘೋರವಾಗಿತ್ತು ಆ ಘಟನೆ.

ಸರ್ಕಾರವು ನಾಲ್ಕು ತಿಂಗಳ ನಂತರ ನೇಮಿಸಿದ ವಿಚಾರಣಾ ಸಮಿತಿಯ ಅಂದಾಜಿನಂತೆ 379 ಜನರು ಈ ಘಟನೆಯಿಂದ ಮರಣ ಹೊಂದಿದ್ದರು. 1137 ಜನರಿಗೆ ಗಾಯಗಳಾಗಿತ್ತು. ಅಂದರೆ 1650 ಗುಂಡುಗಳಿಗೆ ಸಾವು ನೋವು ಸಂಭವಿಸಿತು. ಇಂತಹ ಘೋರ ಘಟನೆಗೆ ಮೂಲ ಕಾರಣ ಡ್ಶೆಯರ್. ಅಮಾಯಕ ಜನರ ಮೇಲೆ ನಡೆದ ಈ ಚೆಲ್ಲಾಟದ ಕ್ರೂರ ದೌರ್ಜನ್ಯವನ್ನು ನೋಡಿದರೆ ಡ್ಶೆಯರ್‌ನ ಮನಸ್ಥಿತಿ ಹೇಗಿತ್ತು ಎಂಬುದನ್ನು ಅರಿಯಬಹುದು.

ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ಗಾಯಗೊಂಡವರನ್ನು ಆಸ್ಪತ್ರೆಗೆ ಸೇರಿಸುವ ಬಗ್ಗೆ ಡ್ಶೆಯರ್ ಹೇಳಿದ ಮಾತು "ಅದು ನನ್ನ ಕರ್ತವ್ಯವಲ್ಲ, ಗಾಯಗೊಂಡವರು ಬೇಕಾದರೆ ಆಸ್ಪತ್ರೆಗೆ ಹೋಗಲಿ" ಎಂಬುದಾಗಿತ್ತು. ಇಷ್ಟಲ್ಲದೆ ಅದೇ ದಿನ ಡ್ಶೆಯರ್ ಕರ್ಫ್ಯೂವನ್ನು ಜಾರಿ ಮಾಡಿ "ಎಲ್ಲ ಜನರು ರಾತ್ರಿ 8 ಗಂಟೆಯ ನಂತರ ಮನೆಯೊಳಗಿರಬೇಕು. ಮನೆಯಿಂದ ಹೊರಗಡೆ ಬಂದು ಬೀದಿಯಲ್ಲಿದ್ದರೆ ಕಂಡಲ್ಲಿ ಗುಂಡು ಹಾರಿಸಲಾಗುವುದು" ಎಂದು ಘೋಷಿಸಿದನು. ಇದರಿಂದ ಗಾಯಗೊಂಡವರನ್ನು ಅವರ ಸಂಬಂಧಿಗಳು ಆಸ್ಪತ್ರೆಗೆ ಸೇರಿಸಲು ಸಾಧ್ಯವಾಗದೇ ದೀನರಾಗಿ, ಭಯಗ್ರಸ್ಥರಾಗಿ ಮನೆಯಲ್ಲಿಯೇ ಕುಳಿತುಕೊಳ್ಳುವಂತಾಯಿತು. ಹಾಗಾಗಿ ಹತ್ಯಾಕಾಂಡದಲ್ಲಿ ಗಾಯಗೊಂಡವರು ಶುಶ್ರೂಷೆ ಸಿಗದೆ ನರಳಾಡುತ್ತಾ ಪ್ರಾಣ ಬಿಡುವಂತಾಯಿತು. ನಗರದ ಜನತೆಯನ್ನು ಮತ್ತಷ್ಟು ಸಂಕಷ್ಟಕ್ಕೀಡು ಮಾಡಲು ವಿದ್ಯುತ್ ಶಕ್ತಿ ಹಾಗೂ ನೀರಿನ ಪೂರೈಕೆಯನ್ನು ಕಡಿತಗೊಳಿಸಿದನು. ಭಾರತೀಯರ ಅಸಹಾಯಕತೆ ಹಾಗೂ ನಿಕೃಷ್ಟ ಸ್ಥಿತಿಯನ್ನು ನೋಡಿ ಸಂತಸಪಡುವ ಡ್ಶೆಯರ್‌ನ ಹೀನ ಮನಸ್ಥಿತಿಯನ್ನು ನಾವು ಇಲ್ಲಿ ನೋಡಬಹುದು.

ಒಂದು ಬಾರಿ ಗಲಭೆಕೋರರು ಹೆಡ್ ಮಾಸ್ಟರ್ ಮಿಸ್ ಶೇರ್‌ವುಡ್‌ರನ್ನು ಗಾಯಗೊಳಿಸಿದ್ದರು. ಮಿಸ್ ಶೇರ್ ವುಡ್ ಬ್ಯಾಂಡೇಜ್ ಸುತ್ತಿಕೊಂಡಿರುವುದನ್ನು ಗಮನಿಸಿದ ಡ್ಶೆಯರನು ಇಂಗ್ಲಿಷ್ ಸ್ತ್ರೀಯನ್ನು ಅವಮಾನಿಸಿದಕ್ಕಾಗಿ ಕುಚಾತ ವಾರೀನ್ ಮಾರ್ಗದಲ್ಲಿ ಹೋಗಬೇಕಾದರೆ ಭಾರತೀಯರು ತೆವಳಿಕೊಂಡು ಅಥವಾ ಅಂಬೆಗಾಲಿಟ್ಟು ಕೊಂಡು ಹೋಗಬೇಕೆಂದು "ಕ್ರಾಲಿಂಗ್ ಆರ್ಡರ್" ಅನ್ನು ಹೊರಡಿಸಿದನು. ಸರ್ಕಾರ ಆ ಕಾನೂನನ್ನು ಹಿಂತೆಗೆದುಕೊಳ್ಳುವವರೆಗೂ ಎಲ್ಲರೂ ತೆವಳುತ್ತಾ ಹೋಗಬೇಕಾಯಿತು. ಯಾರು ಅಂಬೆಗಾಲಿನಲ್ಲಿ ಬರುವುದಿಲ್ಲವೋ ಅಂತಹವರನ್ನು ಕಂಬಕ್ಕೆ ಕಟ್ಟಿ ಛಡಿ ಏಟುಗಳನ್ನು ಹೊಡೆಸಲು ಛಡಿ ಏಟಿನ ಕಂಬದ ವಿರ್ಪಾಟನ್ನು ಶಾಲೆಯ ಮುಂಭಾಗದಲ್ಲಿ ಮಾಡಿಸಿದ್ದನು. ಮಿಸ್ ಶೇರ್‌ವುಡ್‌ಳನ್ನು ಗಾಯಗೊಳಿಸುವಲ್ಲಿ ಭಾಗಿಯಾಗಿದ್ದವರನ್ನು ಗುರುತಿಸಿ ಬಹಿರಂಗವಾಗಿ ಬೀದಿಯಲ್ಲಿ ಛಡಿ ಏಟನ್ನು ನೀಡಲಾಯಿತು. ಗಲಭೆಯಲ್ಲಿ ಭಾಗಿಯಾಗಿದ್ದರೆಂದು 298 ಜನರನ್ನು ಗುರುತಿಸಿ ಅವರಲ್ಲಿ 218 ಜನಕ್ಕೆ ಶಿಕ್ಷೆ ವಿಧಿಸಿದ್ದನು.

ಈತ ತನ್ನ ಮೇಲಧಿಕಾರಿಗಳಿಗೆ ಜಲಿಯನ್ ವಾಲಾಬಾಗ್ ಹತ್ಯಾಕಾಂಡದ ಕುರಿತು ಬರೆಯುತ್ತಾ "ಜನರನ್ನು ಚದುರಿಸುವ ಪ್ರಶ್ನೆಯೇ ಇರಲಿಲ್ಲ. ಅಲ್ಲಿ ಸೇರಿದ್ದ ಮತ್ತು ಪಂಜಾಬಿನಾದ್ಯಂತ ಭಯದ ವಾತಾವರಣವನ್ನು ನಿರ್ಮಾಣ ಮಾಡುವುದೇ ನನ್ನ ಉದ್ದೇಶವಾಗಿತ್ತು. ಅಲ್ಲದೆ ನಾನು ಒಳ್ಳೆಯ ಕೆಲಸವನ್ನೇ ಮಾಡಿದೆ" ಎಂದು ತಿಳಿಸಿದ್ದಾನೆ. ಇದು ಜಲಿಯನ್ ವಾಲಾಬಾಗ್ ಹತ್ಯಾಕಾಂಡದಲ್ಲಿ ನಮ್ಮವರಿಗಾದ ದೈಹಿಕ ಗಾಯಕ್ಕಿಂತ ಆತ ಅಧಿಕಾರಿಗೆ ನೀಡಿದ ಹೇಳಿಕೆ ಇನ್ನೂ ಹೆಚ್ಚಿನ ನೋವನ್ನು ಉಂಟುಮಾಡಿತು.

ಪಂಜಾಬಿನ ದುಷ್ಕೃತ್ಯಗಳನ್ನು ವಿಚಾರಿಸಲು ಹಂಟರ್





downloaded from: www.kpscvaani.com




ಎಂಬಾತನ ನೇತೃತ್ವದಲ್ಲಿ ಒಂದು ನಿಯೋಗವನ್ನು ರಚಿಸಲಾಯಿತು. ಆಗ ವಿಚಾರಣೆಯ ಸಂದರ್ಭದಲ್ಲಿ ಜಲಿಯನ್ ವಾಲಾಬಾಗ್‌ನಲ್ಲಿ ಗಾಯಗೊಂಡವರನ್ನು ವೈದ್ಯಕೀಯ ಶುಶ್ರೂಷೆಗೆ ಸೇರಿಸಬಹುದಾಗಿತ್ತು ಎಂದು ಕೇಳಿದಾಗ ಡೈಯರ್‌ನು "ಅದು ನನ್ನ ಕರ್ತವ್ಯವೆಂದು ನಾನು ಯೋಚಿಸಲೇ ಇಲ್ಲ" ಎಂದು ನೀಡಿದ ಉತ್ತರ ನಿಜಕ್ಕೂ ಆವನ ಮತ್ತು ಸರ್ಕಾರದ ಉದ್ಧಟತನವನ್ನು ಎತ್ತಿ ತೋರಿಸುತ್ತದೆ. ಜನರಲ್ ಡೈಯರ್‌ನು ತನ್ನ ಕಾರ್ಯವನ್ನು ಸಮರ್ಥಿಸಿಕೊಳ್ಳುತ್ತಾ "ಮದ್ದು ಗುಂಡುಗಳು ಮುಗಿದಿದ್ದುದರಿಂದ ನನ್ನ ಕಾರ್ಯವನ್ನು ಯಶಸ್ವಿಯಾಗಿ ಮಾಡಲಾಗಲಿಲ್ಲ. ಅದರ ಪ್ರವೇಶ ದ್ವಾರ ಅಗಲವಾಗಿದ್ದರೆ, ಮೆಷಿನ್ ಗನ್ ಹೊಂದಿದ್ದ ಶಸ್ತ್ರಾಸ್ತ್ರ ತುಂಬಿದ ಮಿಲಿಟರಿ ವಾಹನವನ್ನೇ ಅಲ್ಲಿಗೆ ತೆಗೆದುಕೊಂಡು ಹೋಗುತ್ತಿದ್ದೆ." ಎಂದು ಹಂಟರ್ ಸಮಿತಿಯ ಮುಂದೆ ಹೇಳಿದಾಗ ಸದಸ್ಯರೆಲ್ಲರೂ ಭಯಭೀತರಾಗಿದ್ದಲ್ಲದೆ ಈತನ ಸ್ವಭಾವ ಎಷ್ಟರ ಮಟ್ಟಿಗೆ ಕ್ರೂರವಾಗಿರಬೇಕೆಂದು ಭಯಗೊಂಡರು. ಇಂತಹ ಕ್ರೂರ ಅಧಿಕಾರಿಗಳ ಅಡಿಯಲ್ಲಿ ನಮ್ಮ ಸಹೋದರ ಸಹೋದರಿಯರು ಅನುಭವಿಸಿರುವ ನೋವು ಮರುಕ ಹುಟ್ಟಿಸುತ್ತದೆ.

ಇಂಗ್ಲಿಷ್ ಜನರು ಡೈಯರ್‌ನನ್ನು ಬ್ರಿಟಿಷ್ ಸಾಮ್ರಾಜ್ಯದ ರಕ್ಷಕನೆಂದು ಗೌರವಿಸಿದರು. ಜನರಲ್ ಡೈಯರ್‌ನ ಸಹಾಯಾರ್ಥ ನಿಧಿ ಸ್ಥಾಪನೆಗೆ "ಮಾರ್ನಿಂಗ್ ಪೋಸ್ಟ್ " ಪತ್ರಿಕಾ ಬಳಗ ಬೆಂಬಲಿಸಿತು. ಭಾರತದಲ್ಲಿದ್ದ ಇಂಗ್ಲಿಷ್ ಸ್ತ್ರೀಯರು ಮಸ್ಸೂರಿಯಲ್ಲಿ ಡೈಯರ್ ಬೆಂಬಲಿತ ನಿಧಿಗೆ 20,000 ಪೌಂಡ್ ಹಣವನ್ನು ಕೂಡಿಸಿದರು. ಲಾಹೋರ್‌ನ ಯೂರೋಪಿಯನ್ನರು ಡೈಯರ್‌ಗೆ ಭೋಜನ ಕೂಟವನ್ನೇರ್ಪಡಿಸಿ "ಬಡವರ ರಕ್ಷಕ"ನೆಂದು ಹೊಗಳಿದರು. ಭಾರತದ ಬೊಕ್ಕಸದಿಂದಲೇ ಡಯರ್‌ಗೆ ನಿವೃತ್ತಿ ವೇತನ ಮತ್ತಿತರ ಸವಲತ್ತುಗಳನ್ನು ನೀಡಲಾಯಿತು.

ನಮ್ಮ ದೇಶದ ಕೆಲವು ಕಡೆಗಳಲ್ಲಿ ಭಾರತೀಯರಿಗೆ ಆದ ಹೀನಾಯ ಸಾವನ್ನು ನೋಡಿ ಯುವಕರು ಇಂತಹ ಅಧಿಕಾರಿಗಳ ಮೇಲೆ ಸೇಡು ತೀರಿಕೊಂಡಿದ್ದು ಹೆಮ್ಮೆ ಪಡುವ ಸಂಗತಿ. ವಿದೇಶಗಳಲ್ಲಿ ನಡೆದ ಪ್ರಮುಖ ಪ್ರತೀಕಾರವೆಂದರೆ ಡೈಯರ್‌ನ ಹತ್ಯೆ. ಪಂಜಾಬ್‌ನಲ್ಲಿ ಭಾರತೀಯರ ಮೇಲೆ ದುಷ್ಕೃತ್ಯಗಳು ನಡೆಯುವಾಗ ಉದ್ಧಾಮ್ ಸಿಂಗ್ ಚಿಕ್ಕ ಹುಡುಗನಾಗಿದ್ದ. ಆತ ದೊಡ್ಡವನಾಗಿ ಸೇಡು ತೀರಿಸಿಕೊಳ್ಳಲು ಡೈಯರ್‌ನನ್ನು ಬೆನ್ನಟ್ಟಿ ಲಂಡನ್‌ಗೆ ಹೋದ. ಮಾರ್ಚ್ 13, 1940 ರಂದು ಡೈಯರ್‌ನನ್ನು ಕಾಕ್ಸ್ ಟೌನ್ ಹಾಲ್‌ನಲ್ಲಿ ಕೊಂದು ಹಾಕಿದನು. ಇನ್ನೊಂದು ರೋಚಕ ಉದಾಹರಣೆಯೆಂದರೆ ಮಹಾರಾಷ್ಟ್ರದ ಕ್ಷಾಮ ಪರಿಹಾರ ಕಾರ್ಯದ ದುಷ್ಕೃತ್ಯದಲ್ಲಿ ಭಾಗಿಯಾಗಿದ್ದ ಸರ್ ಕರ್ಜನ್ ವೈಲಿಯನ್ನು ಮದನ್ ಲಾಲ್ ದಿಂಗ್ರಾ ಎಂಬ ಯುವಕನು ಲಂಡನ್‌ನ ಒಂದು ಸತ್ಕಾರ ಸಮಾರಂಭದಲ್ಲಿ ಗುಂಡುಹಾರಿಸಿ ಕೊಂದನು. "ಭಾರತೀಯ ತರುಣರನ್ನು ಅಮಾನುಷವಾಗಿ ಗಲ್ಲಿಗೇರಿಸುತ್ತಿರುವುದಕ್ಕೆ ಅಲ್ಪ ಪ್ರತೀಕಾರವಾಗಿ ನಾನು ಇಂಗ್ಲಿಷ್ ರಕ್ತವನ್ನು ಸುರಿಸಲು ಯತ್ನಿಸಿದೆ ಎಂದು ಒಪ್ಪಿಕೊಳ್ಳುತ್ತೇನೆ. ನನ್ನ ದೇಶಕ್ಕೆ ಮಾಡುವ ಅನ್ಯಾಯ ಭಗವಂತನಿಗೆ ಮಾಡುವ ಅಪಮಾನವೆಂದು ನಾನು ಭಾವಿಸಿದ್ದೇನೆ", ಎಂದು ಕೋರ್ಟ್ ಹೇಳಿಕೆಯ ಸಂದರ್ಭದಲ್ಲಿ ದಿಂಗ್ರಾ ಹೇಳಿರುವುದು ದೇಶಭಕ್ತಿಯ ಪ್ರತೀಕವಾಗಿದೆ.

"ಜಲಿಯನ್ ವಾಲಾಬಾಗ್" ಘಟನೆಯಲ್ಲಿ ನೂರಾರು ದೇಶಪ್ರೇಮಿಗಳು ತಮ್ಮ ಬಲಿದಾನವನ್ನು ನೀಡಿ ಒಂದು ಶತಮಾನವೇ ಕಳೆದು ಹೋದರೂ, ಭಾರತೀಯರ ನೆನಪಲ್ಲಿ ಇದು ಮಾಸದ ಕಪ್ಪು ಚುಕ್ಕೆಯಾಗಿದೆ. ಸ್ವಾತಂತ್ರ್ಯೋತ್ಸವದ ಈ ಸಂಭ್ರಮದಲ್ಲಿ, ಸ್ವಾತಂತ್ರ್ಯಕ್ಕಾಗಿ ಹುತಾತ್ಮರಾದವರನ್ನು ನೆನೆಯುತ್ತಾ ದೇಶಪ್ರೇಮವನ್ನು ಮೆರೆಯೋಣ. ■





# ಆಧುನಿಕ ತಂತ್ರಜ್ಞಾನದ ಹುಚ್ಚು ಬಿಡಬೇಕು

"ಬೆಂಗಳೂರು ವಿಶ್ವ ವಿದ್ಯಾನಿಲಯದ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥರಾಗಿದ್ದ ಪ್ರೊ.ಬಿ.ಎ. ಶ್ರೀಧರ ಅವರು ಇಪ್ಪತ್ತೈದು ವರ್ಷಗಳ ಹಿಂದೆ ಲಂಕೇಶ್ ಪತ್ರಿಕೆಯಲ್ಲಿ ನಿರಂತರವಾಗಿ ಗಾಂಧೀಜಿಯವರ ಚಿಂತನೆಗಳ ಕುರಿತು ಲೇಖನಗಳನ್ನು ಬರೆಯುತ್ತಾ ಕನ್ನಡಿಗರಿಗೆ ಗಾಂಧೀಜಿಯವರ ಮಹತ್ವದ ಚಿಂತನೆಗಳನ್ನು ಪರಿಚಯ ಮಾಡಿಕೊಟ್ಟವರಲ್ಲಿ ಪ್ರಮುಖರು. ಗಾಂಧೀಜಿಯವರು ಹೇಳಿದ ಮಾತುಗಳು ಇಂದಿಗೂ ಪ್ರಸ್ತುತ ಎನಿಸಿರುವ ಈ ಲೇಖನವನ್ನು ಅವರ ಬಾಪು ಚಿಂತನೆ ಕೃತಿಯಿಂದ ಆಯ್ದುಕೊಳ್ಳಲಾಗಿದೆ"

–ಪ್ರೊ. ಬಿ. ಎ. ಶ್ರೀಧರ

ಸ್ವಾತಂತ್ರ್ಯ ಬಂದ ನಂತರ ಹಳ್ಳಿಗಳ ಉದ್ಧಾರದ ಬಗ್ಗೆ ಅನೇಕ ಯೋಜನೆಗಳು ರೂಪಿತವಾಗಿ ಬಂದಿವೆ. ಆದರೆ, ಅವುಗಳಲ್ಲಿ ಒಂದೇ ಒಂದು ಯೋಜನೆಯೂ ಅಪೇಕ್ಷಿತದಂತಹ ಪ್ರಯೋಜನವನ್ನು ನೀಡಿಲ್ಲ. ಹಳ್ಳಿಗಳ ಸಾಮಾಜಿಕ, ಆರ್ಥಿಕ, ಮತ್ತು ರಾಜಕೀಯ ಪರಿಸರದಲ್ಲಿ ಯಾವ ಪರಿಣಾಮಕಾರಿಯಾದ ಬದಲಾವಣೆಯೂ ಕಾಣುತ್ತಿಲ್ಲ.

ದೆಹಲಿಯ ಯೋಜನಾ ಭವನದಲ್ಲಿ ಮತ್ತು ರಾಜ್ಯಗಳ ಕಾರ್ಯಸೌಧದಲ್ಲಿ ಕುಳಿತ ಪಂಡಿತರ ಮತ್ತು ಐ.ಎ.ಎಸ್. ದಾಬುಗಳಿಗೆ ಹಳ್ಳಿಗಳ ನಿಜವಾದ ಪರಿಸ್ಥಿತಿಯ ಗಂಧವಿಲ್ಲದೆ ಇರುವುದು ಹಾಗೂ ತಾವು ಸಿದ್ಧಪಡಿಸುವ ಯೋಜನೆಗಳ ಬಗ್ಗೆ ತಮಗೆ ನಂಬಿಕೆಯಾಗಲಿ, ನಿಷ್ಠೆಯಾಗಲಿ ಇಲ್ಲದಿರುವುದು ಅವುಗಳ ವಿಫಲತೆಗೆ ಮುಖ್ಯ ಕಾರಣವಾಗಿದೆ.

ದೇಶದ ಉದ್ದಗಲಕ್ಕೂ ಸುತ್ತಾಡಿದ ಹಾಗೂ ಹಳ್ಳಿಗಳ ಸಮಸ್ಯೆಗಳ ನಿಕಟ ಪರಿಚಯವಿದ್ದ ಗಾಂಧಿಯವರಿಗೆ ಮಾತ್ರ ಹಳ್ಳಿಗಳ ಕುರಿತಂತೆ ನಿಖರವಾದ ನಿಲುವುಗಳಿದ್ದವು. ದೇಶದ ಅಭಿವೃದ್ಧಿ ಕಾರ್ಯ ನಗರಗಳಿಂದ ಮತ್ತು ಆಧುನಿಕ ಯಂತ್ರೋಪಕರಣಗಳಿಂದ ಆರಂಭವಾಗುವ ಅಗತ್ಯವಿಲ್ಲ ಎಂದಿದ್ದ ಅವರು, ಹಳ್ಳಿಗಳ ಅಭಿವೃದ್ಧಿಯು ಯೋಜನೆಗಳ ಮುಖ್ಯ ಬಿಂದುವಾಗಿರಬೇಕೆಂದು ಅವರು ಪ್ರತಿಪಾದಿಸಿದರು. ಹಳ್ಳಿಗಳ ಉದ್ಧಾರ ಮತ್ತು ದೇಶದ ಪ್ರಗತಿಯ ಬಗ್ಗೆ ಗಾಂಧೀಜಿಯವರ ಕಲ್ಪನೆಗಳನ್ನು ಕಾರ್ಯರೂಪಕ್ಕೆ ತಂದಿದ್ದರೆ ಸಾಕಿತ್ತು, ದೇಶದ ಸಾಮಾಜಿಕ ಮತ್ತು ಆರ್ಥಿಕ ಚಿತ್ರಣ ಬದಲಾಗುತ್ತಿತ್ತು.

ಪಟ್ಟಣಗಳಿಂದ ಬಂದ ಬಹಳಷ್ಟು ಮಂದಿ ಅಥವಾ ಪಟ್ಟಣಗಳ ಬದುಕಿಗೆ ಒಗ್ಗಿಕೊಂಡವರು ಹಳ್ಳಿಗಳ ಬಗ್ಗೆ ತಮ್ಮ ಮನಸ್ಸನ್ನು ಹರಿಸದೇ ಇರುವುದು ಹಾಗೂ ಅವುಗಳನ್ನು ಹೇಗೆ ಸುಧಾರಿಸಬೇಕೆಂದು ಯೋಚಿಸದೆ ಇರುವುದು ಒಂದು ದೊಡ್ಡ ದುರಂತ. ದೇಶ ಉದ್ಧಾರವಾಗಬೇಕಾದರೆ, ಅದು ಹಳ್ಳಿಗಳಿಂದ ಆರಂಭವಾಗಬೇಕು. ಗ್ರಾಮೋದ್ಯೋಗಕ್ಕೆ ಪುನರುಜ್ಜೀವನ ಕೊಟ್ಟ ಹೊರತು ಹಳ್ಳಿಗಳು ಬದಲಾಗುವುದು ಸಾಧ್ಯವಿಲ್ಲ.

ಭಾರಿ ಕೈಗಾರಿಕೆಗಳನ್ನು ಆರಂಭಿಸುವುದರಿಂದ ಹದಗೆಟ್ಟಿರುವ ಹಳ್ಳಿಗಳನ್ನು ಉದ್ಧಾರ ಮಾಡಲು ಆಗುವುದಿಲ್ಲ. ರೈತನ ಗೃಹ ಕೈಗಾರಿಕೆಗಳು ಮತ್ತೆ ಕೆಲಸ ಮಾಡುವಂತಾಗಬೇಕು. ಮರೆತು ಹೋಗಿರುವ ಅವನ ಕುಶಲತೆಗೆ ಮತ್ತೆ ಜೀವ ತುಂಬಬೇಕು. ಅವನು ಹೆಚ್ಚು ಹೆಚ್ಚಾಗಿ ಹಳ್ಳಿಗಳ ಮೇಲೆ ಅವಲಂಬಿತನಾಗುವಂತೆ ಮಾಡಬೇಕು. ಆತ ನಗರಗಳ ಮೇಲೆ ಅವಲಂಬಿತವಾಗುವುದು ಹೆಚ್ಚಾಗುತ್ತಿದೆ. ಅದು ನಿಲ್ಲಬೇಕು. ಈ ಮೂಲ ತತ್ವವನ್ನು ಮರೆತು ಸಿದ್ಧಪಡಿಸುವ ಯಾವ ಅಭಿವೃದ್ಧಿ ಯೋಜನೆಯೂ ಯಶಸ್ವಿಯಾಗುವುದಿಲ್ಲ.

ಆಧುನಿಕ ತಂತ್ರಜ್ಞಾನ ಬಳಕೆಯಿಂದ ಇನ್ನು ಐವತ್ತು ವರ್ಷಗಳಲ್ಲಿ ಎಲ್ಲರಿಗೂ ಉದ್ಯೋಗ ಸಿಗಬಹುದು. ಆದರೆ, ಅದಕ್ಕಿಂತ ಮೊದಲು ನಾವು ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕು. ಹಾಗೆ ಮಾಡಬೇಕಾದರೆ ನಮಗೆ ಹಿಡಿದಿರುವ ಆಧುನಿಕ ತಂತ್ರಜ್ಞಾನದ ಹುಚ್ಚು ಬಿಡಬೇಕು. ಅದು ಬಡತನ ಮತ್ತು ನಿರುದ್ಯೋಗವನ್ನು ಹೆಚ್ಚಿಸುತ್ತದೆ ಹೊರತು, ಕಡಿಮೆ ಮಾಡುವುದಿಲ್ಲ. ಇದು ಹಳ್ಳಿಗಳ ಕುರಿತಂತೆ ಬಾಪುವಿಗೆ ಇದ್ದ ಕೆಲವು ಆಲೋಚನೆಗಳು. ■



downloaded from: www.kpscvaani.com

# ಪ್ರಿಯಾನಗರವಾದ ಕಾಳಘಟ್ಟ ಗ್ರಾಮ





ತುಕಾರಾಂರಾವ್ ಬಿ.ವಿ.

ಅಧಿಕಾರಿಗಳು ಪ್ರಾಮಾಣಿಕವಾಗಿ ಹಾಗೂ ಕಾಳಜಿ ವಹಿಸಿ ಕೆಲಸ ಮಾಡಿದರೆ, ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಯೂರಬಹುದು ಎಂಬುದಕ್ಕೆ ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕಿನ 'ಪ್ರಿಯಾ ನಗರ' ನಿದರ್ಶನವಾಗಿದೆ. ಹಿಂದೆ ಕಾಳಘಟ್ಟ ಲಂಬಾಣಿ ಹಟ್ಟಿಯಾಗಿದ್ದ ಈ ಗ್ರಾಮ ಜುಲೈ 1 ರಂದು ಕಂದಾಯ ಗ್ರಾಮವಾಗಿ ಉದ್ಘಾಟನೆಗೊಂಡು ಪ್ರಸ್ತುತ 'ಪ್ರಿಯಾ ನಗರ'ವಾಗಿದೆ.

ಕೆಲವು ತಿಂಗಳುಗಳ ಹಿಂದೆ ಚಿತ್ರದುರ್ಗ ಜಿಲ್ಲೆಗೆ ಜಿಲ್ಲಾಧಿಕಾರಿಯಾಗಿ ವರ್ಗಾವಣೆಗೊಂಡು ಬಂದ ವಿನೋತ್ ಪ್ರಿಯಾ ಅವರು, ಸರ್ಕಾರದ ನಿರ್ದೇಶನದಂತೆ ಗ್ರಾಮ ವಾಸ್ತವ್ಯ ಕೈಗೊಳ್ಳಲು ನಿರ್ಧರಿಸಿದರು. ಹೀಗಾಗಿ ಅವರು ಗ್ರಾಮ ವಾಸ್ತವ್ಯಕ್ಕೆ ಜಿಲ್ಲೆಯ ಗಡಿ ಭಾಗವಾದ ಹೊಳಲ್ಕೆರೆ ತಾಲ್ಲೂಕಿನ ಒಂದು ಕುಗ್ರಾಮ 'ಕಾಳಘಟ್ಟ ಲಂಬಾಣಿ ಹಟ್ಟಿ'ಯನ್ನು ಆಯ್ಕೆ ಮಾಡಿಕೊಂಡರು. ಜಿಲ್ಲಾಡಳಿತದ ವತಿಯಿಂದ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳೊಡಗೂಡಿ 2019 ರ ಫೆಬ್ರವರಿ 19 ರಂದು ಈ ಗ್ರಾಮದಲ್ಲಿ ಗ್ರಾಮ ವಾಸ್ತವ್ಯ ಮಾಡುವ ಮೂಲಕ ಗ್ರಾಮಸ್ಥರಿಂದ ಅಹವಾಲು ಸ್ವೀಕರಿಸಿದರು.



ಆ ಸಂದರ್ಭದಲ್ಲಿ ಅಲ್ಲಿನ ಗ್ರಾಮಸ್ಥರು ಇಟ್ಟ ಪ್ರಮುಖ ಬೇಡಿಕೆ ಎಂದರೆ, ನಮ್ಮ ಗ್ರಾಮಕ್ಕೆ ಸರಿಯಾದ ರಸ್ತೆ ಇಲ್ಲ, ಕುಡಿಯಲು ಶುದ್ಧ ನೀರು ದೊರಕುತ್ತಿಲ್ಲ, ಅನೇಕ ಅರ್ಹರಿಗೆ, ಪಿಂಚಣಿ ಯೋಜನೆಗಳು ದೊರಕುತ್ತಿಲ್ಲ, ಅಂಗನವಾಡಿ ಕೇಂದ್ರ ಬಿದ್ದು ಹೋಗುವಂತಿದೆ, ಇಂತಹ ಸಾಕಷ್ಟು ಅಹವಾಲುಗಳು ಗ್ರಾಮಸ್ಥರಿಂದ ಕೇಳಿ ಬಂದವು. ಹಾಗಾಗಿ ಸುಮಾರು 212 ಅರ್ಜಿಗಳು ಅಂದು ಸ್ವೀಕೃತಗೊಂಡಿದ್ದವು. ಒಂದು ಗ್ರಾಮಕ್ಕೆ ಬೇಕಾದ ಮೂಲಭೂತ ಸೌಕರ್ಯ ಇಲ್ಲವೆಂಬುದನ್ನು ಅರಿತ ಜಿಲ್ಲಾಧಿಕಾರಿಯವರು, ಆದಷ್ಟು ಶೀಘ್ರದಲ್ಲಿ ಗ್ರಾಮಸ್ಥರ ಬೇಡಿಕೆಗಳನ್ನು ಪರಿಶೀಲಿಸುವುದಾಗಿ ಭರವಸೆ ನೀಡಿ ಜಿಲ್ಲಾ ಕೇಂದ್ರಕ್ಕೆ ಮರಳಿದರು.

ತಮ್ಮ ಹಂತದಲ್ಲೇ ಕ್ರಮಕೈಗೊಳ್ಳಬಹುದಾದಂತಹ ಗ್ರಾಮಸ್ಥರ ಬೇಡಿಕೆಗಳನ್ನು ಸಂಬಂಧಪಟ್ಟ ಇಲಾಖಾ ಅಧಿಕಾರಿಗಳೊಂದಿಗೆ ಸಮಾಲೋಚಿಸಿ 4 ತಿಂಗಳ ಅವಧಿಯೊಳಗೆ ಗ್ರಾಮಸ್ಥರ ಬಹುಪಾಲು ಸಮಸ್ಯೆಗೆ ಪರಿಹಾರವನ್ನು ಒದಗಿಸಿಕೊಟ್ಟರು. ಹಾಗಾಗಿ ಕಾಳಘಟ್ಟ ಲಂಬಾಣಿ ಹಟ್ಟಿಗೆ ಇದೀಗ ಸುಸಜ್ಜಿತ ಡಾಂಬರ್ ರಸ್ತೆ, ಗ್ರಾಮಕ್ಕೆ ಶುದ್ಧ ಕುಡಿಯುವ ನೀರಿನ ಘಟಕ, ಅಂಗನವಾಡಿ ಕಟ್ಟಡ ನವೀಕರಣ, ಅಷ್ಟೇ ಅಲ್ಲ ಈ ಗ್ರಾಮದ ಅರ್ಹ 50 ಜನರಿಗೆ ವಿವಿಧ ಮಾಸಾಶನ ಮಂಜೂರು, ಹಲವು ಫಲಾನುಭವಿಗಳಿಗೆ ಹೆಲ್ತ್ ಕಾರ್ಡ್ ವಿತರಣೆ, ಅರ್ಹ ರೈತ ಫಲಾನುಭವಿಗಳಿಗೆ ಕೃಷಿ ಹೊಂಡ ನಿರ್ಮಾಣ ಹೀಗೆ ಅಭಿವೃದ್ಧಿಯ ಪರ್ವವನ್ನು ಕೈಗೊಂಡರು.

**ಗ್ರಾಮಕ್ಕೆ ದೊರಕಿದ ಅಭಿವೃದ್ಧಿ :**

ಜಿಲ್ಲಾಧಿಕಾರಿಯವರ ಗ್ರಾಮವಾಸ್ತವ್ಯದಿಂದಾಗಿ ರಾಜ್ಯ ಹೆದ್ದಾರಿ ಸಂಖ್ಯೆ 48 ರಲ್ಲಿ ಕಾಳಘಟ್ಟದಿಂದ ಕಾಳಘಟ್ಟ ಲಂಬಾಣಿ ಹಟ್ಟಿಗೆ 1. 10 ಕೋಟಿ ರೂ. ವೆಚ್ಚದಲ್ಲಿ 2.2 ಕಿ.ಮೀ. ಸಂಪರ್ಕ ರಸ್ತೆ ಪೂರ್ಣ, ರಾಜ್ಯ ಹೆದ್ದಾರಿ ಸಂಖ್ಯೆ 47 ಸಾಸಲು ಗ್ರಾಮದಿಂದ ಕಾಳಘಟ್ಟ ಲಂಬಾಣಿ ಹಟ್ಟಿಗೆ 1. 10 ಕೋಟಿ ರೂ. ವೆಚ್ಚದಲ್ಲಿ 2.2 ಕಿ.ಮೀ. ಕೂಡು ರಸ್ತೆ ನಿರ್ಮಾಣ ಪೂರ್ಣಗೊಂಡಿದೆ. 10 ಲಕ್ಷ ರೂ. ವೆಚ್ಚದಲ್ಲಿ ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಡಿ 10 ಲಕ್ಷ ರೂ. ವೆಚ್ಚದಲ್ಲಿ ಶುದ್ಧ ಕುಡಿಯುವ ನೀರಿನ ಘಟಕ ಕಾರ್ಯಾರಂಭ. 5 ಲಕ್ಷ ರೂ. ವೆಚ್ಚದಲ್ಲಿ ಶಾಂತಿಸಾಗರದಿಂದ ಗ್ರಾಮಕ್ಕೆ ಕುಡಿಯುವ ನೀರಿನ ವ್ಯವಸ್ಥೆ, ಪೈಪ್‌ಲೈನ್ ಇತರೆ ಕಾಮಗಾರಿಗೆ 15 ಲಕ್ಷ ರೂ. ಮಂಜೂರು. 13 ಜನರಿಗೆ ಸಂಧ್ಯಾ ಸುರಕ್ಷಾ ಯೋಜನೆ, 29 ಮಂದಿಗೆ ವೃದ್ಧಾಪ್ಯ, ಇಬ್ಬರಿಗೆ ಮನಸ್ವಿನಿ ಹಾಗೂ ಆರು ಫಲಾನುಭವಿಗಳಿಗೆ ವಿಧವಾ ವೇತನ ಮಂಜೂರಾಗಿದೆ. 340 ಫಲಾನುಭವಿಗಳಿಗೆ ಆಯುಷ್ಮಾನ್ ಭಾರತ್ ಯೋಜನೆಯಡಿ ಹೆಲ್ತ್ ಕಾರ್ಡ್, 28 ಫಲಾನುಭವಿಗಳಿಗೆ ಸ್ವಯಂ ಉದ್ಯೋಗಕ್ಕಾಗಿ ಸಾಲ ಸೌಲಭ್ಯ ಮಂಜೂರು ಸೇರಿದಂತೆ ಇನ್ನೂ ಹಲವು ಸೌಲಭ್ಯಗಳು ಗ್ರಾಮಕ್ಕೆ ದೊರಕಿವೆ.

**ಮಹಿಳೆಯ ಜೀವ ಉಳಿಸಿದ ಗ್ರಾಮ ವಾಸ್ತವ್ಯ :**

ಗ್ರಾಮ ವಾಸ್ತವ್ಯ ಸಂದರ್ಭದಲ್ಲಿ ಇದೇ ಗ್ರಾಮದ 'ಗೀತಾಬಾಯಿ' ಎಂಬುವವರು ತಮ್ಮ ಮೆದುಳಿನ ತೊಂದರೆಯಿದ್ದು, ಶಸ್ತ್ರ ಚಿಕಿತ್ಸೆ ಮಾಡಿಸಿಕೊಳ್ಳಲು ಲಕ್ಷಾಂತರ ರೂ. ಖರ್ಚಾಗುತ್ತದೆ. ನಾವು ಬಡವರು, ಇಷ್ಟೊಂದು ಖರ್ಚು ಮಾಡಲು ತಮಗೆ ಶಕ್ತಿ ಇಲ್ಲ, ಹಣದ ಸಹಾಯ ಮಾಡುವಂತೆ ಡಿಸಿ ಅವರಿಗೆ ಮನವಿ ಸಲ್ಲಿಸಿದ್ದರು. ಜಿಲ್ಲಾಧಿಕಾರಿಗಳು ಆರೋಗ್ಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿ, ತಕ್ಷಣವೇ ಚಿಕಿತ್ಸೆಗೆ ವ್ಯವಸ್ಥೆ ಮಾಡಿ ಎಂದು ತಾಕೀತು ಮಾಡಿದರು. ಆರೋಗ್ಯ ಇಲಾಖೆಯ ಅಧಿಕಾರಿಗಳು ಫಲಾನುಭವಿಯನ್ನು ಸಂಪರ್ಕಿಸಿ, 3 ಸಾವಿರ ರೂ. ಸಾರಿಗೆ ವೆಚ್ಚಕ್ಕೆ ನೀಡಿ, ಮಣಿಪಾಲ್‌ನ ಆಸ್ಪತ್ರೆಗೆ ಕಳುಹಿಸಿಕೊಟ್ಟರು. ಬಳಿಕ, ಸರ್ಕಾರದ ಯೋಜನೆಯಡಿ ಅವರಿಗೆ ಶಸ್ತ್ರಚಿಕಿತ್ಸೆ ಮಾಡಿಸಿದ್ದು, ಇದೀಗ ಈ ಮಹಿಳೆ ಗುಣಮುಖರಾಗಿದ್ದಾರೆ. ಸುಮಾರು 2 ಲಕ್ಷ ರೂ. ವೆಚ್ಚದ ಶಸ್ತ್ರಚಿಕಿತ್ಸೆ, ಗೀತಾ ಬಾಯಿಗೆ ಉಚಿತವಾಗಿ ದೊರೆತಂತಾಗಿದೆ. ನಿಜಕ್ಕೂ ಗ್ರಾಮ ವಾಸ್ತವ್ಯ ಒಬ್ಬ ಮಹಿಳೆಯ ಜೀವ ಉಳಿಯಲು ಕಾರಣವಾಗಿದ್ದು ಶ್ಲಾಘನೀಯವಾಗಿದೆ. ಅದೇ ರೀತಿ ಸ್ವಾಭಿಮಾನದ ಬದುಕು ಕಟ್ಟಿಕೊಳ್ಳಲು ಸ್ವಯಂ ಉದ್ಯೋಗಕ್ಕಾಗಿ ಸಾಲ ಸೌಲಭ್ಯ ನೀಡುವಂತೆ ಮನವಿ ಮಾಡಿದ್ದ ಶಾರದಾಬಾಯಿ ಎಂಬುವವರಿಗೆ, ಟೈಲರಿಂಗ್‌ಗಾಗಿ 25 ಸಾವಿರ ರೂ. ಸಾಲವನ್ನು ಬ್ಯಾಂಕ್‌ನಿಂದ ಮಂಜೂರು ಮಾಡಿಸಲಾಗಿದ್ದು, ಜೀವನದ ಬಂಡಿ ಎಳೆಯಲು ಆಸರೆಯೊಂದು ಆಕೆಗೆ ದೊರೆತಂತಾಗಿದೆ.




**ಅಭಿಮಾನದ ಪ್ರಿಯಾ ನಗರ :**

ಗ್ರಾಮ ವಾಸ್ತವ್ಯಕ್ಕೆ ತಮ್ಮ ಗ್ರಾಮವನ್ನು ಆಯ್ಕೆ ಮಾಡಿಕೊಂಡು, ಜನರ ಬಹು ಮುಖ್ಯ ಬೇಡಿಕೆಗಳನ್ನು ಈಡೇರಿಸಿದ ಜಿಲ್ಲಾಧಿಕಾರಿಗಳ ಮೇಲಿನ ಅಭಿಮಾನ ಗ್ರಾಮಸ್ಥರಲ್ಲಿ ಕಂಡುಬಂದಿತು. ಇದುವರೆಗೂ ಲಂಬಾಣಿ ಹಟ್ಟಿಯಾಗಿದ್ದ ತಮ್ಮ ಗ್ರಾಮವನ್ನು ಕಂದಾಯ ಗ್ರಾಮವಾಗಿಸಿದ್ದಕ್ಕೆ ಜೊತೆಗೆ ಹಲವು ಅಭಿವೃದ್ಧಿಪರ ಕಾರ್ಯ ಕೈಗೊಂಡಿದ್ದಕ್ಕಾಗಿ ಇಲ್ಲಿನ ಗ್ರಾಮಸ್ಥರು ತಮ್ಮ ಗ್ರಾಮಕ್ಕೆ 'ಪ್ರಿಯಾ ನಗರ' ಎಂದೇ ನಾಮಕರಣ ಮಾಡಿದ್ದು, ಇನ್ನು ಮುಂದೆ ಇದು ಕಂದಾಯ ಗ್ರಾಮವಾಗಿ ಎಲ್ಲ ದಾಖಲೆಗಳಲ್ಲಿ 'ಪ್ರಿಯಾ ನಗರ' ವಾಗಿಯೇ ದಾಖಲಾಗಲಿದೆ. ಜುಲೈ 01 ರಂದು ನೂತನ ಕಂದಾಯ ಗ್ರಾಮವಾದ 'ಪ್ರಿಯಾ ನಗರ'ವನ್ನು ಉದ್ಘಾಟನೆ ಮಾಡಲಾಯಿತು.

ಒಬ್ಬ ಅಧಿಕಾರಿ ಬದ್ಧತೆಯಿಂದ, ಪ್ರಾಮಾಣಿಕವಾಗಿ ಜನರ ಆಶೋತ್ತರಗಳಿಗೆ ಸ್ಪಂದಿಸಿದಲ್ಲಿ, ಅಲ್ಪಾವಧಿಯಲ್ಲಿಯೇ ಅನೇಕ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಸಾಧ್ಯ ಎಂಬುದಕ್ಕೆ ನೂತನ 'ಪ್ರಿಯಾ ನಗರ'ವೇ ನಿದರ್ಶನವಾಗಿದೆ. ■





downloaded from: www.kpscvaani.com



# ವರ್ಲಿ ಚಿತ್ರಕಲೆಯಲ್ಲಿ ಕಂಗೊಳಿಸುತ್ತಿರುವ ಸರ್ಕಾರಿ ಪ್ರೌಢಶಾಲೆ

ವಿನಾಯಕ. ಗೋ. ಭೀಮಪ್ಪನವರ

**ಮಾ**ತಿಗೆ, ಮೌನಕ್ಕೆ, ಅನೇಕ ಅರ್ಥಗಳನ್ನು ಕಲ್ಪಿಸಿಕೊಳ್ಳುವ ಶಕ್ತಿಯಿದೆ. ಅದೇ ರೀತಿ ಸಾವಿರ ಶಬ್ದಗಳಲ್ಲಿ ಹೇಳುವುದನ್ನು ಒಂದು ಚಿತ್ರ ಹೇಳುವಷ್ಟು ಶಕ್ತಿಯನ್ನು ಹೊಂದಿರುತ್ತದೆ. ಇಂದು ಚಿತ್ರಕಲೆಯಲ್ಲಿ ಅನೇಕ ವಿಧಗಳನ್ನು ನಾವು ಕಾಣುತ್ತೇವೆ. ಪ್ರಾಚೀನ ಬುಡಕಟ್ಟುಗಳ ಚಿತ್ರಕಲಾ ಪದ್ಧತಿಯನ್ನು ಉಳಿಸುವಲ್ಲಿ ಅನೇಕರು ಪ್ರಯತ್ನ ಮಾಡುತ್ತಿರುವುದು ಶ್ಲಾಘನೀಯವಾದರೂ ಅವರಿಗೆ ನಿರಂತರ ಪ್ರೋತ್ಸಾಹ ನೀಡಿದರೆ ಮುಂದಿನ ಪೀಳಿಗೆ ಅದನ್ನು ನೋಡಲು ಶಕ್ಯವಾಗುತ್ತದೆ. ಇಂತಹ ಒಂದು ಪ್ರಾಚೀನ ಬುಡಕಟ್ಟು ಚಿತ್ರಕಲಾ ಪದ್ಧತಿಯೇ ವರ್ಲಿ.

ಸಾಮಾನ್ಯವಾಗಿ ಇಂತಹ ಚಿತ್ರಕಲೆಯನ್ನು ನಾವು ಮಲೆನಾಡು ಪ್ರದೇಶದಲ್ಲಿ ಕಾಣುತ್ತೇವೆ. ವಿಶೇಷವಾಗಿ ಹೇಳಬೇಕೆಂದರೆ ಮುಂಬೈ ಪ್ರಾಂತ್ಯದ ವರ್ಲಿ ಎಂಬ ಪ್ರಾಚೀನ ಬುಡಕಟ್ಟು ಜನಾಂಗದವರಿಂದ ಈ ಕಲೆಯು ಬೆಳಕಿಗೆ ಬಂದುದರಿಂದ ಇದಕ್ಕೆ ವರ್ಲಿ ಚಿತ್ರಕಲೆ ಎಂದೇ ಹೇಳಲಾಗುತ್ತಿದೆ. ಕೇವಲ ಸುಣ್ಣ ಮತ್ತು ಸಾಮಾನ್ಯ ಕಡ್ಡಿ ಬಳಕೆಯಿಂದ ಇದನ್ನು ಚಿತ್ರಿಸಲಾಗುತ್ತದೆ. (ಕಡ್ಡಿಯ ಅಂಚನ್ನು ಜಜ್ಜಿ ಅಥವಾ ತುದಿಗೆ ಹತ್ತಿಯನ್ನು ಸುತ್ತಿ ಬ್ರಶ್‌ನಂತೆ ತಯಾರಿಸಲಾಗುತ್ತದೆ) ಮೊದಲು ಗೋಡೆಗೆ ಕೆಂಪು ಮಣ್ಣು(ಹುರಮಂಜು) ಬಳಿದ ನಂತರ ಚಿತ್ರಗಳನ್ನು ಬಿಡಿಸಲು ಕ್ಯಾನವಾಸ ತಯಾರಾಗುತ್ತದೆ. ಚಿತ್ರಗಳು ಸರಳವಾಗಿದ್ದರೂ ಅಮೋಘ ಸಂದೇಶವನ್ನು ನೀಡುತ್ತವೆ. ಅಂದಿನ ಜನಪದರ ಇತಿಹಾಸವನ್ನು ಮೆಲುಕು ಹಾಕುತ್ತದೆ.

ಇಂತಹ ಒಂದು ಅಮೋಘ ಕಲೆಯನ್ನು ಪ್ರೌಢಶಾಲಾ ಮಕ್ಕಳಿಗೆ ತಿಳಿಸಿದ ಹಾವೇರಿ ಜಿಲ್ಲೆಯ ಏಕೈಕ ಪ್ರೌಢಶಾಲೆಯೆಂದರೆ ರಟ್ಟೀಹಳ್ಳಿ ತಾಲ್ಲೂಕಿನ ನೆಶ್ವಿ ಗ್ರಾಮದ ಸರಕಾರಿ ಪ್ರೌಢಶಾಲೆ. ಮಲೆನಾಡಿನ ಅನೇಕ ಶಾಲೆಗಳ ಗೋಡೆ ಮೇಲೆ ಈ ಕಲೆ ಕಂಡು ಬಂದರೂ, ಉತ್ತರ ಕರ್ನಾಟಕದ ಭಾಗದಲ್ಲಿ ಇಂತಹ ಚಿತ್ರಕಲೆ ಕಂಡು ಬರುವುದಿಲ್ಲ.

ಚಿತ್ರಕಲಾ ಶಿಕ್ಷಕ ಪ್ರಶಾಂತ ಕಠಾರೆ ಇವರ ವಿಶೇಷ ಆಸಕ್ತಿ ಮತ್ತು ಶಾಲೆಗೆ ನವೀನ ರೂಪ ಕಲ್ಪಿಸಿ ಎಲ್ಲರ ಗಮನ ಸೆಳೆಯುವುದರ ಜೊತೆಗೆ ವಿದ್ಯಾರ್ಥಿಗಳಲ್ಲಿ ಹೊಸ ಶಕ್ತಿಯನ್ನು ನೀಡಬೇಕು ಎಂಬ ಸದುದ್ದೇಶದಿಂದ ಇಂದು ಶಾಲೆಯ ಎಲ್ಲ ಗೋಡೆಗಳಲ್ಲಿ ಇಂತಹ ಚಿತ್ರಗಳನ್ನು ಬಿಡಿಸಿದ್ದಾರೆ. ಶಾಲೆಯ ಗೋಡೆಯ ಪ್ರತಿ ಇಂಚೂ ಇಂದು ವರ್ಲಿ ಚಿತ್ರಕಲೆಯಿಂದ ಕಂಗೊಳಿಸಿ ಎಲ್ಲರ ಮನಸ್ಸಿನಲ್ಲಿ ನವ ಚೈತನ್ಯ ಮೂಡಿಸುತ್ತಿದೆ. ಅಲ್ಲದೇ ಯಾವುದೋ ಹೊಸ ಲೋಕಕ್ಕೆ ಕರೆದುಕೊಂಡು ಹೋದಂತೆ ಭಾಸವಾಗುತ್ತದೆ. ಇವರ ಈ ಕಾರ್ಯಕ್ಕೆ ಮುಖ್ಯ ಶಿಕ್ಷಕ ಕೆ.ಎನ್.ಹಂಚಿನ ಮತ್ತು ಶಿಕ್ಷಕ ಸಿಬ್ಬಂದಿ ಕೈಜೋಡಿಸಿದ್ದಾರೆ. ಶಿಕ್ಷಕರು ವಿದ್ಯಾರ್ಥಿಗಳೊಂದಿಗೆ ಸೇರಿ ಶಾಲೆಯನ್ನು ಸುಂದರವಾಗಿ ಮಾಡಿದ್ದಾರೆ.

**ವರ್ಲಿ ಕಲೆ:** ಇದು 10ನೇ ಶತಮಾನದ ಚಿತ್ರಕಲೆ. 1970 ರ ನಂತರ ಬೆಳಕಿಗೆ ಬಂದ ಕಲೆ. ಅಲ್ಲಿಯವರೆಗೂ ಯಾರಿಗೂ ಗೋಚರವಾಗಿದ್ದಿಲ್ಲ. ಮುಂಬೈ ಪ್ರಾಂತ್ಯದ ದಹನು, ತಲಸಾರಿ, ಜವಹಾರ, ಪಲ್ಗರ್, ಮೊಖಡಾ ಮುಂತಾದ ಪ್ರದೇಶದಲ್ಲಿ ಜನಿಸಿದ ಕಲೆ ಇದು. ಇಂದಿಗೂ ಈ ಪ್ರದೇಶದಲ್ಲಿ ಜೀವಂತಿಕೆಯನ್ನು ಪಡೆದಿದೆ.

ವರ್ಲಿ ಚಿತ್ರಕಲೆ ಮುಖ್ಯವಾಗಿ ತಾಯಿ, ಪ್ರಕೃತಿ, ಹಬ್ಬಗಳ ಆಚರಣೆ, ನಿತ್ಯ ಜೀವನ, ಬೇಟೆ, ದೇವತೆಗಳು, ಸುಗ್ಗಿ, ಟಾರ್ಪಾ ನೃತ್ಯ, ಸಂಗೀತ ಉಪಕರಣಗಳು, ಸರಳ ಜೀವನದ ಬಗ್ಗೆ ಆಧಾರಿತವಾಗಿದೆ. ಗುಹೆಯ ಗೋಡೆಗಳೇ ಕ್ಯಾನವಾಸ್ ಆಗಿದ್ದವು. ವೃತ್ತ, ತ್ರಿಭುಜ, ಆಯತ, ಚೌಕ ಮುಂತಾದ ಗಣಿತದ ಆಕೃತಿಗಳೇ ಚಿತ್ರಕಲೆಗೆ ಪ್ರೇರಕವಾಗಿದ್ದವು. ಎಲ್ಲ ಚಿತ್ರಗಳಲ್ಲಿ ಈ ಆಕೃತಿಗಳನ್ನು ನಾವು ಕಾಣಬಹುದು. ಇದನ್ನು ಆಧಾರವಾಗಿಟ್ಟುಕೊಂಡು ಇಂದಿನ ಚಿತ್ರಕಲಾ ಪದ್ಧತಿಯಲ್ಲಿ ಅಕ್ಷರಗಳ ಮತ್ತು ಸಂಖ್ಯೆಗಳ ಮೂಲಕ ಸರಳವಾಗಿ ಚಿತ್ರಗಳನ್ನು ರಚಿಸುವ ನವೀನ ಪದ್ಧತಿ ಬಂದಿದೆ. ■



# ಶ್ರೀಗಂಧ ಬೆಳೆಯಲು ನಿರ್ಬಂಧವಿಲ್ಲ

ಆರ್. ರೂಪಕಲಾ



**ಶ್ರೀ**ಗಂಧದ ಮರವನ್ನು ಬೆಳೆಯಲು ಅರಣ್ಯ ಇಲಾಖೆಯಿಂದ ಅನುಮತಿ ಪಡೆಯಬೇಕು, ಹಾಗೂ ಒಂದು ವೇಳೆ ಮರವನ್ನು ಬೆಳೆಸಿ ಕಡಿದರೆ (ಕಟಾವು) ಪ್ರಕರಣ ದಾಖಲಾಗುತ್ತದೆ ಎಂದು ಶ್ರೀಗಂಧ ಮರವನ್ನು ಬೆಳೆಯಲು ಹಿಂದೇಟು ಹಾಕುತ್ತಿದ್ದರು.

ಆದರೆ ಈಗ ಶ್ರೀಗಂಧದ ಮರವನ್ನು ಬೆಳೆಯಲು ಯಾವುದೇ ನಿರ್ಬಂಧಗಳಿಲ್ಲ. ಯಾರು ಬೇಕಾದರೂ ಬೆಳೆಯಬಹುದು. ಅರಣ್ಯ ಇಲಾಖೆಯು ರೈತರು ತಮ್ಮ ಜಮೀನಿನಲ್ಲಿ ಮರ ಬೆಳೆಸಲು ಹಾಗೂ ಬೆಳೆದಿರುವ ಮರಗಳನ್ನು ಕಟಾವು ಮಾಡಲು ಇರುವ ಹಾಲಿ ನಿಯಮಗಳನ್ನು ಸರಳೀಕರಣಗೊಳಿಸಿದೆ. ಹಾಗಾಗಿ ಇನ್ನು ಮುಂದೆ ರೈತರು ಶ್ರೀಗಂಧದ ಸಸಿಗಳನ್ನು ಪಡೆದು ತಮ್ಮ ಜಮೀನಿನಲ್ಲಿ ಯಾವುದೇ ಆತಂಕವಿಲ್ಲದೆ ಬೆಳೆಸುವ ಮೂಲಕ ಆರ್ಥಿಕವಾಗಿ ತಮ್ಮ ಆದಾಯವನ್ನು ಹೆಚ್ಚಿಸಿಕೊಳ್ಳಬಹುದಾಗಿದೆ.

ಆಸಕ್ತ ರೈತರು ಶ್ರೀಗಂಧದ ಸಸಿಗಳನ್ನು ಅರಣ್ಯ ಇಲಾಖೆ/ಖಾಸಗಿ ನರ್ಸರಿ/ಬೆಂಗಳೂರಿನ ಮರ ವಿಜ್ಞಾನ ತಾಂತ್ರಿಕ ಸಂಸ್ಥೆ ಹಾಗೂ ಯಶವಂತಪುರದಲ್ಲಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಗಳಿಂದ ಪಡೆಯಬಹುದಾಗಿದೆ. ಅಲ್ಲದೆ ಅರಣ್ಯ ಇಲಾಖೆಯ ಸಾರ್ವಜನಿಕ ಸಸಿಗಳ ವಿತರಣಾ ಯೋಜನೆ(ಆರ್‌ಎಸ್‌ಪಿಡಿ)ಯಡಿ ಆಯಾ ತಾಲೂಕಿನಲ್ಲಿರುವ ನರ್ಸರಿಗಳಲ್ಲಿ (ಗಿಡಗಳನ್ನು ಬೆಳೆಸಿದ್ದಲ್ಲಿ) ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು.

ಶ್ರೀಗಂಧದ ಮರಗಳನ್ನು ಬೆಳೆಸಲು ಕಲ್ಲು ಮಿಶ್ರಿತ ಕೆಂಪು ಮಣ್ಣು ಸೂಕ್ತ. ಜೌಗು ಪ್ರದೇಶ ಸೂಕ್ತವಲ್ಲ. ಸಸಿಗೆ 15 ರಿಂದ 38 ಡಿಗ್ರಿ ಸೆಲ್ಸಿಯಸ್ ಹವಾಮಾನ ಹಾಗೂ 700 ಮಿ.ಮೀ. ನಿಂದ 1100 ಮಿ.ಮೀ. ಮಳೆ ಅಗತ್ಯ. ಸಸಿಗಳನ್ನು 10x10 ಅಡಿ ಅಂತರದಲ್ಲಿ 2 ಅಡಿ





downloaded from: www.kpscvaani.com

ಆಳದ ಗುಂಡಿ ತೆಗೆದು ನೆಡಬೇಕು. ಗುಂಡಿಗಳಿಗೆ ಕೆಂಪು ಮಣ್ಣು, ಕೊಟ್ಟಿಗೆ ಗೊಬ್ಬರ, ಬೇವಿನ ಹಿಂಡಿ ಹಾಕುವುದು ಸೂಕ್ತ. ಪ್ರತಿ ಗುಳಿ(ಗುಣಿ)ಯಲ್ಲಿ ಶ್ರೀಗಂಧದ ಸಸಿಯ ಜೊತೆಯಲ್ಲಿ ತೊಗರಿ ಸಸಿಯನ್ನು ನಾಟಿ ಮಾಡಬೇಕು. ಜೊತೆಯಲ್ಲಿ ನಾಟಿ ಮಾಡಿದ ಸಸಿಯನ್ನು ನಿಯಮಿತವಾಗಿ ಕತ್ತರಿಸಿ ಎತ್ತರ ಬೆಳೆಯದಂತೆ ನೋಡಿಕೊಳ್ಳಬೇಕು. ಬೇಸಿಗೆಯಲ್ಲಿ ವಾರಕ್ಕೆ 1 ಸಾರಿ ಗಿಡವೊಂದಕ್ಕೆ 2 ಲೀಟರ್ ನೀರನ್ನು ಒದಗಿಸಬೇಕು. ಗಿಡದ ಬುಡದಲ್ಲಿ ಮಣ್ಣು ಅಗೆದು ಸೊಪ್ಪು ಅಥವಾ ಹುಲ್ಲನ್ನು ಹಾಕುವುದರಿಂದ "ಸ್ಪೈಕ್" ರೋಗವನ್ನು ತಡೆಗಟ್ಟಬಹುದು.

**ಗಂಧದ ಮರದಿಂದ ಆದಾಯ:**

ಮನೆಯ ಆವರಣ/ಜಮೀನಿನಲ್ಲಿ ಸ್ವಾಭಾವಿಕವಾಗಿ ಬೆಳೆಯುತ್ತಿರುವ ಶ್ರೀಗಂಧದ ಮರಗಳಿಗೆ ಸಾಧ್ಯವಾದಷ್ಟು ರಕ್ಷಣೆ ಒದಗಿಸಬೇಕು. ಬೆಳೆದ ಶ್ರೀಗಂಧದ ಮರ ಕಟಾವಿಗೆ ಬರಲು ಕನಿಷ್ಠ 15–20 ವರ್ಷಗಳು ಬೇಕು. ಸ್ವಂತವಾಗಿ ಒಂದು ಎಕರೆಯಲ್ಲಿ ಶ್ರೀಗಂಧ ಬೆಳೆದರೆ 15 ವರ್ಷದಲ್ಲಿ ಅಂದಾಜು 32 ಲಕ್ಷ ರೂ ಸಿಗುತ್ತದೆ. ಮರದ ಗಾತ್ರ 2 ರಿಂದ 3 ಅಡಿಯಿದ್ದಲ್ಲಿ ಕಟಾವು ಮಾಡಬಹುದಾಗಿದೆ. ಬೆಳೆದು ನಿಂತ ಶ್ರೀಗಂಧದ ಮರದ ಕಟಾವು ಮತ್ತು ವಿಲೇವಾರಿ ಮಾಡಲು ಹತ್ತಿರದ ವಲಯ ಅರಣ್ಯಾಧಿಕಾರಿ(ಪ್ರಾದೇಶಿಕ ವಲಯ)ಗಳನ್ನು ಸಂಪರ್ಕಿಸಿ, ನಮೂನೆ–12ನ್ನು ಭರ್ತಿ ಮಾಡಿ ಕೊಡಬೇಕು. ಹಾಗೂ ನಮೂನೆ–13ರಲ್ಲಿ ಒಪ್ಪಿಗೆ ಪತ್ರವನ್ನು ಸಲ್ಲಿಸಬೇಕು. ಸ್ವಂತ ಬೆಳೆದ ಶ್ರೀಗಂಧದ ಮರವನ್ನು ಯಾವುದೇ ಖಾಸಗಿ ಖರೀದಿದಾರರಿಗೆ ಮಾರಾಟ ಮಾಡುವಂತಿಲ್ಲ. ಸರ್ಕಾರಕ್ಕೆ ಅಥವಾ ಸರ್ಕಾರದಿಂದ ಅನುಮೋದಿತ ಸಂಸ್ಥೆಗಳಾದ ಬೆಂಗಳೂರಿನ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಹಾಗೂ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮಗಳಿಗೆ ಮಾತ್ರ ಮಾರಾಟ ಮಾಡಬಹುದು.



ಆಸಕ್ತ ರೈತರು ಶ್ರೀಗಂಧದ ಸಸಿಗಳನ್ನು ಅರಣ್ಯ ಇಲಾಖೆ/ಖಾಸಗಿ ನರ್ಸರಿ/ಬೆಂಗಳೂರಿನ ಮರ ವಿಜ್ಞಾನ ತಾಂತ್ರಿಕ ಸಂಸ್ಥೆ ಹಾಗೂ ಯಶವಂತಪುರದಲ್ಲಿರುವ ಕರ್ನಾಟಕ ಸಾಬೂನು ಮತ್ತು ಮಾರ್ಜಕ ಸಂಸ್ಥೆಗಳಿಂದ ಪಡೆಯಬಹುದಾಗಿದೆ. ಅಲ್ಲದೆ ಅರಣ್ಯ ಇಲಾಖೆಯ ಸಾರ್ವಜನಿಕ ಸಸಿಗಳ ವಿತರಣಾ ಯೋಜನೆ(ಆರ್‌ಎಸ್‌ಪಿಡಿ)ಯಡಿ ಆಯಾ ತಾಲೂಕಿನಲ್ಲಿರುವ ನರ್ಸರಿಗಳಲ್ಲಿ (ಗಿಡಗಳನ್ನು ಬೆಳೆಸಿದ್ದಲ್ಲಿ) ರಿಯಾಯಿತಿ ದರದಲ್ಲಿ ಮಾರಾಟ ಮಾಡಲಾಗುವುದು.

**ವೈಯಕ್ತಿಕ ಬಳಕೆಗೆ ಅವಕಾಶ:**

ಮೈಸೂರಿನ ಅಶೋಕಪುರಂನಲ್ಲಿರುವ ಶ್ರೀಗಂಧದ ಕೋಟೆಯಲ್ಲಿ ಅಪ್ಪಟ ಶ್ರೀಗಂಧವನ್ನು ಮಾರಾಟ ಮಾಡಲಾಗುತ್ತಿದ್ದು, ಸ್ವಂತ ಉಪಯೋಗಕ್ಕಾಗಿ ಶ್ರೀಗಂಧ ಬೇಕಾದವರು ಇದೇ ಸ್ಥಳದಲ್ಲಿರುವ ಪ್ರಾದೇಶಿಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಿ ಶ್ರೀಗಂಧದ ಮರವನ್ನು ಪಡೆಯಬಹುದು. ಸ್ವಂತ ಬೆಳೆದ ಶ್ರೀಗಂಧದ ಮರದಲ್ಲಿ 4 ಕೆ.ಜಿಯವರೆಗೆ ವೈಯಕ್ತಿಕ ಬಳಕೆಗೆ ಅವಕಾಶವಿದೆ. ಮರದ ಕಟಾವು, ಎಂಗಡಣೆ, ಸಾಗಾಟ ಹಾಗೂ ವಿಲೇವಾರಿ ಖರ್ಚು ವೆಚ್ಚಗಳನ್ನು ಮರ ಮಾಲೀಕರೇ ಭರಿಸಬೇಕಾಗುತ್ತದೆ. ಶ್ರೀಗಂಧ ಮರದ ತುಂಡು ಅಥವಾ ಅದರಿಂದ ಮಾಡಿರುವ ಕರಕುಶಲ ವಸ್ತುವನ್ನು ಹೊಂದಿರುವುದಕ್ಕೆ ಅಧಿಕೃತ ಬಿಲ್ ಇರಬೇಕು. ಶ್ರೀಗಂಧದ ಒಡೆತನಕ್ಕೆ ಮಿತಿಯಿದ್ದಲ್ಲಿ ಅಂತಹ ಮಿತಿಯಲ್ಲಿ ಅದರಿಂದ ಮಾಡಿದ ಕೆತ್ತನೆ ಮತ್ತು ಕರಕುಶಲ ವಸ್ತುಗಳು ಸೇರುತ್ತವೆ. ಕರ್ನಾಟಕದ ಹೊರಗೆ/ವಿದೇಶದಲ್ಲಿರುವವರಿಗೆ 4 ಕೆ.ಜಿ ಗಿಂತ ಹೆಚ್ಚಿನ ಶ್ರೀಗಂಧದ ತುಂಡುಗಳನ್ನು ಉಡುಗೊರೆಯಾಗಿ ನೀಡಬೇಕಾದರೆ ಅಧಿಕೃತ ರಶೀದಿ, ರಹದಾರಿ ಪತ್ರ ಮತ್ತು ಪ್ರಚಲಿತದಲ್ಲಿರುವ ಕಾನೂನು ಕ್ರಮಗಳನ್ನು ಅನುಸರಿಸಬೇಕು.

**ಶ್ರೀಗಂಧ ಖರೀದಿ:**

ಶ್ರೀಗಂಧದ ಕರಕುಶಲ ವಸ್ತುಗಳನ್ನು ಖರೀದಿಸುವಾಗ ಶ್ರೀಗಂಧದ ವಸ್ತುವು ಅಸಲಿಯೋ ಅಥವಾ ನಕಲಿಯೋ ಎಂದು ತಿಳಿಯುವುದಕ್ಕೆ ತೆಗೆದುಕೊಳ್ಳುವ ವಸ್ತುವನ್ನು ಸಂಪೂರ್ಣವಾಗಿ ಬಣ್ಣ, ವಾಸನೆ ಮತ್ತು ರಚನೆಯನ್ನು ಪರೀಕ್ಷಿಸಬೇಕು. ಶ್ರೀಗಂಧದ ತೈಲ ಲೇಪಿಸಿದ್ದಲ್ಲಿ, ಆ ಜಾಗವನ್ನು ಉಜ್ಜಿ ನೋಡಿದಾಗ ವ್ಯತ್ಯಾಸ ತಿಳಿಯುತ್ತದೆ. ಹಾಗಾಗಿ ಮೋಸಕ್ಕೆ ಒಳಗಾಗ ಬಾರದೆಂದರೆ ಅಧಿಕೃತ ಮಾರಾಟಗಾರರಿಂದಲೇ ಶ್ರೀಗಂಧ/ಶ್ರೀಗಂಧದ ಕರಕುಶಲ ವಸ್ತುಗಳನ್ನು ಖರೀದಿಸುವುದು ಸೂಕ್ತ.



downloaded from: www.kpscvaani.com



ಖರೀದಿ ಮಾಡಿದ ಶ್ರೀಗಂಧವನ್ನು ಕಾರಣಾಂತರಗಳಿಂದ ಸಾಗಾಣಿಕೆ ಮಾಡಬೇಕಾದ ಸಂದರ್ಭ ಬಂದರೆ, ಖರೀದಿ ಮಾಡಿದಾಗ ಪಡೆದ ರಶೀದಿ/ಬಿಲ್‌ಗಳನ್ನು ಹೊಂದಿರಬೇಕು. ಅಲ್ಲದೇ ಅಂಗಡಿಯಲ್ಲಿ ಶ್ರೀಗಂಧದ ಕರಕುಶಲ ವಸ್ತುಗಳನ್ನು ದಾಸ್ತಾನು ಮಾಡಿ ಮಾರಾಟ ಮಾಡುವುದಕ್ಕಾಗಿ ಹತ್ತಿರದ ಉಪ ಅರಣ್ಯ ಸಂರಕ್ಷಣಾಧಿಕಾರಿ, ಪ್ರಾದೇಶಿಕ ವಿಭಾಗದ ಕಚೇರಿಯಲ್ಲಿ ಅರ್ಜಿ ಸಲ್ಲಿಸಿ ಶ್ರೀಗಂಧದ ದಾಸ್ತಾನು ಪರವಾನಗಿ/ಪ್ರಾಪರ್ಟಿ ಮಾರ್ಕ್ ರಿಜಿಸ್ಟ್ರೇಷನ್ ಪರವಾನಗಿಯನ್ನು ಪಡೆಯಬೇಕು.

**ಮಾರಾಟಕ್ಕೆ ಅನುಸರಿಸಬೇಕಾದ ವಿಧಾನ:**

ಖಾಸಗಿ ಜಮೀನಿನಲ್ಲಿ ಬೆಳೆದಿರುವ ಶ್ರೀಗಂಧದ ಮರವನ್ನು ಮಾರಾಟ ಮಾಡಲಿಚ್ಛಿಸುವ ಮಾಲೀಕರು ತಮ್ಮ ಸಂಪೂರ್ಣ ವಿವರಗಳೊಂದಿಗೆ ನಮೂನೆ 12ರಲ್ಲಿ ಅರ್ಜಿಯನ್ನು ವಲಯ ಅರಣ್ಯಾಧಿಕಾರಿಗಳಿಗೆ ಸಲ್ಲಿಸಬೇಕು. ಕಟಾವು ಮಾಡಿದ ಶ್ರೀಗಂಧವನ್ನು ಸರ್ಕಾರಿ ಶ್ರೀಗಂಧದ ಡಿಪೋ ಅಥವಾ ರಾಜ್ಯ ಸರ್ಕಾರದ ಅನುಮೋದಿತ ಸಂಸ್ಥೆಗೆ ಮಾರಾಟ ಮಾಡಬಹುದು. ಅರ್ಜಿ ಸಲ್ಲಿಸಿದ 45 ದಿನಗಳೊಳಗೆ ದಾಖಲೆಗಳನ್ನು ಪರಿಶೀಲಿಸಿ, ಉಪ ಅರಣ್ಯ ಸಂರಕ್ಷಣಾಧಿಕಾರಿಗಳು ಕಟಾವಿಗೆ ಅನುಮತಿಯನ್ನು ನೀಡುವರು. ನಂತರ ಅರ್ಜಿದಾರರು ನಮೂನೆ 13ರಲ್ಲಿ ಒಪ್ಪಿಗೆ ಪತ್ರಕ್ಕೆ ಸಹಿ ಮಾಡಿ ಸಲ್ಲಿಸಬೇಕು. ಕಡಿದ ಪ್ರತಿ ತುಂಡಿಗೂ ಸಂಖ್ಯೆ ನೀಡಿ ಉದ್ದ ಹಾಗೂ ದಪ್ಪದ ಅಳತೆಯನ್ನು ದಾಖಲಿಸಿಕೊಂಡು ಲಾಟ್ ಮಾಡಬೇಕು. ಕಟಾವು, ಲಾಟ್ ಕಟ್ಟುವುದು ಮುಂತಾದ ವೆಚ್ಚಗಳನ್ನು ಮರದ ಮಾಲೀಕರೇ ಭರಿಸಬೇಕು.

ಶ್ರೀಗಂಧದ ಮರವನ್ನು ಸರ್ಕಾರಿ ಡಿಪೋಗೆ ನೀಡಲು ಬಯಸಿದಲ್ಲಿ ನಮೂನೆ 15ನ್ನು ಭರ್ತಿ ಮಾಡಿ ಸಲ್ಲಿಸಬೇಕು. ಸರ್ಕಾರಿ ಡಿಪೋದಲ್ಲಿ ಶ್ರೀಗಂಧವನ್ನು ವರ್ಗವಾರು ವಿಂಗಡಿಸಿ ನಿಯಮಾನುಸಾರ ಹಣ ಪಾವತಿಸುವರು. ಮರದ ಮಾಲೀಕರು ಶ್ರೀಗಂಧವನ್ನು ಸರ್ಕಾರಿ ಸ್ವಾಮ್ಯದ ಅನುಮೋದಿತ ಸಂಸ್ಥೆಗೆ ನೀಡಲು ಬಯಸಿದಲ್ಲಿ ನಮೂನೆ 15ಎ ಅನ್ನು ಭರ್ತಿ ಮಾಡಿ ಸಲ್ಲಿಸಬೇಕು. ಅರಣ್ಯ ಇಲಾಖೆ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳಿಗೆ ರೈತರು ಶ್ರೀಗಂಧದ ಮರವನ್ನು ನೀಡಿದಲ್ಲಿ ಮರ ತಲುಪಿದ 15 ದಿನಗಳೊಳಗೆ ಶೇಕಡ 10ರಷ್ಟು ಹಣವನ್ನು ನೀಡಲಾಗುವುದು. ಶ್ರೀಗಂಧದ ಮರವನ್ನು ಪರಿವರ್ತಿಸಿ ಅರಣ್ಯ ಇಲಾಖೆಯಿಂದ ಅವುಗಳ ವರ್ಗೀಕರಣವನ್ನು ದೃಢೀಕರಿಸಿದ ದಿನದಿಂದ 3 ವಾರಗಳಲ್ಲಿ ಉಳಿದ ಮೊಬಲಗನ್ನು ರೈತರಿಗೆ ಚೆಕ್ ಮೂಲಕ ವಿತರಿಸಲಾಗುವುದು. ಅಲ್ಲದೆ ಖಾಸಗಿ ಜಮೀನಿನಲ್ಲಿ ಕಟಾವು ಮಾಡಿದ ಮರಗಳನ್ನು ರೈತರು ಒಪ್ಪಿದಲ್ಲಿ ರೈತರಿಗೆ ಹೆಚ್ಚಿನ ಆದಾಯವನ್ನು ಒದಗಿಸುವ ದೃಷ್ಟಿಯಿಂದ ಇಲಾಖೆಯ ಡಿಪೋಗಳಲ್ಲಿ ಮಾರಾಟ ಮಾಡಲು ಅವಕಾಶ ಮಾಡಿಕೊಡಲಾಗುವುದು.


**ಮರಗಳ ಕಟಾವಿಗೆ ನಿಯಮಗಳು:**

ರೈತರು ತಮ್ಮ ಜಮೀನಿನಲ್ಲಿ ಬೆಳೆದಿರುವ ಮರಗಳನ್ನು ಕಟಾವು ಮಾಡುವುದಕ್ಕೆ ಇರುವ ಹಾಲಿ ನಿಯಮಗಳನ್ನು ಈಗ ಸರಳೀಕರಣಗೊಳಿಸಲಾಗಿದೆ. ಮರದ ಕಟಾವಿಗೆ ನಿಗದಿಪಡಿಸಲಾಗಿದ್ದ ಪದ್ಧತಿಗಳಿಂದಾಗಿ ಆಗುತ್ತಿರುವ ವಿಳಂಬವನ್ನು ತಪ್ಪಿಸುವ, ರೈತರಿಗೆ ಉಂಟಾಗಬಹುದಾದ ಅನಗತ್ಯ ಖರ್ಚು ಮತ್ತು ಸಮಯವನ್ನು ಉಳಿಸುವ ಹಾಗೂ ರೈತರ ಜಮೀನಿನಲ್ಲಿ ಶ್ರೀಗಂಧದ ಮರಗಿಡಗಳನ್ನು ಬೆಳೆಸಲು ಪ್ರೋತ್ಸಾಹಿಸುವ ಸಲುವಾಗಿ ನಿಯಮಗಳನ್ನು ಸರಳಗೊಳಿಸಲಾಗಿದೆ.

ಈ ನಿಯಮಗಳನ್ವಯ ಮರಗಳನ್ನು ಸಾಗಾಣಿಕೆ ಮಾಡಲು ಅವಶ್ಯಕತೆಯಿರುವ ರಹದಾರಿಯನ್ನು ತ್ವರಿತವಾಗಿ ನೀಡಲಾಗುವುದು. ಖಾಸಗೀ ಹಿಡುವಳಿ ಜಮೀನುಗಳಲ್ಲಿ ಶ್ರೀಗಂಧದ ಮರಗಿಡಗಳಿದ್ದರೆ ಕಂದಾಯ ಇಲಾಖೆಯ ಅಭಿಪ್ರಾಯ ಹಾಗೂ ಮೋಜಣಿಯ ಅವಶ್ಯಕತೆ ಇರುವುದಿಲ್ಲ. ಆದರೆ ಕಟಾವಿಗೆ ಕೋರಿರುವ ಜಮೀನಿನ ಅಕ್ಕಪಕ್ಕದಲ್ಲಿ ಸರ್ಕಾರಿ/ಅರಣ್ಯ ಭೂಮಿ ಇದ್ದರೆ ಮಾತ್ರ ಅತಿಕ್ರಮ ಒತ್ತುವರಿ ಆಗಿಲ್ಲದಿರುವುದರ ಬಗ್ಗೆ ಖಚಿತಪಡಿಸಿಕೊಳ್ಳಲು ಮೋಜಣಿಯ ಅವಶಕ್ಯತೆ ಇರುತ್ತದೆ.


ಶ್ರೀಗಂಧದ ಮರ ಕಳುವಾದರೆ ಕೂಡಲೇ ಹತ್ತಿರದ ಪೊಲೀಸ್ ಠಾಣೆ ಮತ್ತು ವಲಯ ಅರಣ್ಯಾಧಿಕಾರಿಗಳಿಗೆ ದೂರು ದಾಖಲಿಸಲು ಅವಕಾಶವಿದೆ. ಈ ಸಂದರ್ಭದಲ್ಲಿ ಮರದ ಕಳುವಿಗೆ ಮಾಲೀಕರು ಜವಾಬ್ದಾರರಾಗಿರುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲಾ ಸಾಮಾಜಿಕ ಅರಣ್ಯ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿಯನ್ನು ಸಂಪರ್ಕಿಸಬಹುದಾಗಿದೆ.



# ಗುಮ್ಮಟ ನಗರಿ ವಿಜಯಪುರ

ಡಾ. ಗುರಲಿಂಗಪ್ಪ ಅಂಕದ



ಗುಮ್ಮಟ ನಗರಿ ಎಂದೇ ಪ್ರಸಿದ್ಧಿಯಾದ ವಿಜಾಪುರಕ್ಕೆ ಪ್ರತಿದಿನ ಸಾವಿರಾರು ಪ್ರವಾಸಿಗರು ಇಲ್ಲಿನ ಐತಿಹಾಸಿಕ ಸ್ಮಾರಕಗಳನ್ನು ನೋಡಲು ಹಾಗು ಇವುಗಳ ಇತಿಹಾಸ, ಮಹತ್ವ ಅರಿಯಲು ಬರುತ್ತಾರೆ. ಭಾರತದಲ್ಲಿ ಅತೀ ದೊಡ್ಡ ಗುಮ್ಮಟವಿರುವ, 92 ಸಂರಕ್ಷಿತ ತಾಣಗಳಿರುವ ವಿಜಾಪುರ ಐತಿಹಾಸಿಕವಾಗಿ, ರಾಜಕೀಯವಾಗಿ, ಧಾರ್ಮಿಕವಾಗಿ ಪ್ರಮುಖ ಸ್ಥಾನ ಪಡೆದಿದೆ.

ಮುಂಚೆ ಇದನ್ನು ವಿಜಯದ ಸಂಕೇತವಾಗಿ "ವಿಜಯಪುರ" ಎಂದು ಕರೆಯುತ್ತಿದ್ದರು. ಕಾಲಕ್ರಮೇಣ ವಿಜಾಪುರ, ಬಿಜಾಪುರ ಎಂದೆಲ್ಲಾ ಕರೆಯತೊಡಗಿದರು. ಸದ್ಯ ರಾಜ್ಯ ಸರ್ಕಾರ ಮತ್ತೆ ಈ ನಗರಕ್ಕೆ 'ವಿಜಯಪುರ' ಎಂದು ನಾಮಕರಣ ಮಾಡಿದೆ. 10–12ನೇ ಶತಮಾನದಲ್ಲಿ ಕಲ್ಯಾಣದ ಚಾಲುಕ್ಯರು ಇದನ್ನು ಸ್ಥಾಪಿಸಿದರು. ನಂತರ ಕ್ರಿ.ಶ.1347 ರಲ್ಲಿ ಸ್ವತಂತ್ರ ಬಹಮನಿ ಸಾಮ್ರಾಜ್ಯವನ್ನು ಅಲ್ಲಾವುದ್ದಿನ್ ಬಹಮನಿ ಶಹಾ ಸ್ಥಾಪಿಸಿದನು. ಬಹಮನಿಯರ ಆಡಳಿತದ ಅವಧಿಯಲ್ಲಿ ವಿಜಾಪುರವು ಉತ್ತುಂಗ ಸ್ಥಿತಿಯಲ್ಲಿತ್ತು. ನಂತರ ಸುಮಾರು 200 ವರ್ಷಗಳ ಕಾಲ ಬಹಮನಿ ಸುಲ್ತಾನರು ಆಳಿದರು. ಕ್ರಿ.ಶ.1518ರಲ್ಲಿ ಈ ಸಾಮ್ರಾಜ್ಯ 5 ಭಾಗಗಳಲ್ಲಿ ವಿಂಗಡಿಸಲ್ಪಟ್ಟಿತು. ಇವುಗಳಲ್ಲಿ ವಿಜಾಪುರವೂ ಒಂದು. ಕ್ರಿ.ಶ. 1680 ರ ವರೆಗೆ ಆದಿಲ್ ಶಾಹಿ ಸಾಮ್ರಾಜ್ಯ ವಿಜಾಪುರವನ್ನು ಆಳಿತು. ನಂತರ ಮೊಘಲರ ಪಾಲಾಯಿತು. 18–19 ನೇ ಶತಮಾನದಲ್ಲಿ ಹೈದರಾಬಾದಿನ ನಿಜಾಮ, ಮಹಾರಾಷ್ಟ್ರದ ಪೇಶ್ವೆಗಳು, ಬ್ರಿಟೀಷರು ಹೀಗೆ ಬೇರೆ ಬೇರೆ ಆಡಳಿತಕ್ಕೆ ಒಳಪಟ್ಟ ನಾಡು ಇದು. ತದನಂತರ ರಾಜ್ಯಗಳ ಮರು ಹಂಚಿಕೆಯ ಸಮಯದಲ್ಲಿ ವಿಜಾಪುರವನ್ನು ಕರ್ನಾಟಕದ ಜಿಲ್ಲೆಯಾಗಿ ಪರಿಗಣಿಸಲಾಯಿತು. ಆದರೆ ಆದಿಲ್ ಶಾಹಿ ಆಡಳಿತಾವಧಿಯನ್ನೇ ವಿಜಾಪುರದ 'ಸ್ವರ್ಣಯುಗ' ಎಂದು ನಿಸ್ಸಂಶಯವಾಗಿ ಹೇಳಬಹುದು. ಏಕೆಂದರೆ ಇಂದು ನಾವು ಕಾಣುವ ಈ ಐತಿಹಾಸಿಕ ಸ್ಮಾರಕಗಳು ಆ ಕಾಲದಲ್ಲೇ ನಿರ್ಮಾಣಗೊಂಡವು.

ಜಿಲ್ಲಾ ಕೇಂದ್ರ ವಿಜಾಪುರದಲ್ಲಿ ಕಂಡಲ್ಲೆಲ್ಲಾ ಸ್ಮಾರಕಗಳೇ. ಚಪ್ಪಾಳೆ ತಟ್ಟಿದರೆ 7 ಬಾರಿ ಪ್ರತಿಧ್ವನಿಸುವ ಜಗತ್ತಿನಲ್ಲೇ ಅದ್ಭುತ ಎನಿಸಿಕೊಂಡ ಗೋಲಗುಮ್ಮಟ ಇಲ್ಲಿಯ ಪ್ರಮುಖ ಆಕರ್ಷಣೆ. ಮುಖ್ಯ ರಸ್ತೆಯ ಪ್ರವೇಶ ದ್ವಾರದಿಂದ ರಸ್ತೆಯ ಎರಡೂ ಪಕ್ಕದಲ್ಲಿರುವ ವಿಸ್ತಾರವಾದ ಹಸಿರು ಹಾಸಿಗೆಯಿಂದ ನಡೆದುಕೊಂಡು ಹೋದರೆ ಮೊದಲು ಕಾಣುವ ಸ್ಮಾರಕ ನಗಾರ ಖಾನ್ ಪ್ರಾಚ್ಯ ವಸ್ತುಸಂಗ್ರಹಾಲಯ. ಇಲ್ಲಿ ಆದಿಲ್ ಶಾಹಿ ಕಾಲದ ಪುರಾತನ ವಸ್ತುಗಳನ್ನು ಸಂಗ್ರಹಿಸಿಡಲಾಗಿದೆ. ಈ ಸಂಗ್ರಹಾಲಯದ ಹಿಂದೆ ಇರುವ ಒಂದು ಕಮಾನಿನಿಂದ ಕೆಲ ಮೆಟ್ಟಿಲುಗಳನ್ನೇರಿದ ತಕ್ಷಣ ಕಾಣುವುದೇ ಆಕಾಶದೆತ್ತರದ ಅದ್ಭುತ ಗೋಲಗುಮ್ಮಟ. ಮಹಮ್ಮದ್ ಆದಿಲ್ ಶಾಹಿ ಇದನ್ನು ಇರಾನ್‌ನ ವಾಸ್ತುಶಿಲ್ಪಿ ಮಲಿಕ್ ಸಂಡಲ್‌ನ ಮುಖಾಂತರ ಕ್ರಿ.ಶ.1656 ರಲ್ಲಿ ಕಟ್ಟಿಸಿದನು.

ಇದರ ನಾಲ್ಕು ಮೂಲೆಗಳಲ್ಲಿ ಅಷ್ಟಕೋನಾಕೃತಿಯ 7 ಅಂತಸ್ತಿನ ಗೋಪುರಗಳಿವೆ. ಮಧ್ಯದಲ್ಲಿ ವಿಶಾಲವಾದ ಗುಮ್ಮಟವಿದ್ದು ನಾಲ್ಕೂ ಬದಿಗೆ ದೊಡ್ಡದಾದ ಕಮಾನಿನ ಪ್ರವೇಶ ದ್ವಾರಗಳಿವೆ. ಪ್ರವೇಶದ್ವಾರದಿಂದ ಒಳಗೆ ಹೆಜ್ಜೆ ಇಡುತ್ತಲೇ ವಿಶಾಲವಾದ ನೆಲಮಾಳಿಗೆಯಲ್ಲಿ ಮಹಮ್ಮದ್ ಆದಿಲ್ ಶಾ ಪರಿವಾರದ ಗೋರಿಗಳು ಕಾಣಿಸುತ್ತವೆ. ಒಳಗಡೆ ತಂಪಾದ ವಾತಾವರಣ ಹಾಗೂ ಕಟ್ಟಡದ ಚಿಕ್ಕ ಚಿಕ್ಕ ಕಿಟಕಿಗಳಿಂದ ಬೆಳಕು ಅತೀ ಸುಂದರವಾಗಿ ಪ್ರವೇಶಿಸುವುದನ್ನು ನೋಡಬಹುದು. ನಾಲ್ಕೂ ಬದಿಯ ಅಷ್ಟಕೋನಾಕೃತಿಯ ಮಿನಾರಗಳಲ್ಲಿ ಸುತ್ತಿಕೊಂಡು ಮೇಲೆ ಹೋಗಲು ಮೆಟ್ಟಿಲುಗಳಿವೆ. ಪ್ರತಿ ಅಂತಸ್ತಿನಲ್ಲಿ ವಿಶ್ರಾಂತಿಗಾಗಿ ಆಸನದ ವ್ಯವಸ್ಥೆಗಳಿವೆ. ಮೆಟ್ಟಿಲುಗಳು ಇಕ್ಕಟ್ಟಾಗಿರುವುದರಿಂದ ನಿಧಾನವಾಗಿ ಸಾಗಿ 7 ಅಂತಸ್ತುಗಳನ್ನು ಏರಿದರೆ ಬೃಹತ್ ಗುಮ್ಮಟದ ಸುತ್ತಲೂ ವಿಶಾಲವಾದ ವರಾಂಡಕ್ಕೆ ತಲುಪುತ್ತೇವೆ. ಅಲ್ಲಿಂದ ನಗರದ ಪಕ್ಷಿನೋಟ ನೋಡಲು ಎರಡು ಕಣ್ಣುಗಳು ಸಾಲದು. ಆದರೆ ಈ ಗುಮ್ಮಟದ ವಿಶೇಷತೆ ಎಂದರೆ ಇಲ್ಲಿನ 'ಪಿಸುಗುಟ್ಟುವ ಗ್ಯಾಲರಿ'. ಇಲ್ಲಿ ಗುಮ್ಮಟದ ಒಂದು ಬದಿಯ ಗೋಡೆಗೆ ಪಿಸುಗುಟ್ಟುವ ಅಥವಾ ಬೆಂಕಿಕಡ್ಡಿ ಗೀರುವ ಶಬ್ದವನ್ನು ಗುಮ್ಮಟದ ಇನ್ನೊಂದು ಬದಿಯಲ್ಲಿ ಸ್ಪಷ್ಟವಾಗಿ ಕೇಳಬಹುದು ಹಾಗು ಒಂದು ಸರಿ ಜೋರಾಗಿ ಧ್ವನಿಮಾಡಿದರೆ 7 ಬಾರಿ ಪ್ರತಿಧ್ವನಿಸುತ್ತದೆ. ಸುಮಾರು 358 ವರ್ಷ ಇತಿಹಾಸ ಹೊಂದಿದ ಈ ಸ್ಮಾರಕ ಕಪ್ಪು ಶಿಲೆಯಿಂದ ನಿರ್ಮಿಸಲಾಗಿರುವುದರಿಂದ ಗಾಳಿ, ಬಿಸಿಲು, ಮಳೆಗೆ ಮೈಯೊಡ್ಡಿ ನಿಂತಿದೆ.



ಗೋಲಗುಮ್ಮಟದ ಸಮೀಪದಲ್ಲೇ ಇರುವ ಇಂಡೋ–ಸಾರ್ಸೆನಿಕ್ ಶೈಲಿಯ ದಕ್ಷಿಣ ಭಾರತದಲ್ಲೇ ಅತೀ ದೊಡ್ಡದಾದ ಜುಮ್ಮಾ ಮಸೀದಿಯನ್ನು ನೋಡಬಹುದು. ಅಲಿ ಆದಿಲ್ ಶಾಹಿ ಕ್ರಿ.ಶ. 1578ರಲ್ಲಿ ಇದನ್ನು ಕಟ್ಟಿಸಿದನು. ಇದರ ಬೃಹದಾಕಾರದ ಕಮಾನುಗಳು ಕಲಾತ್ಮಕವಾಗಿದ್ದು ಒಳಾವರಣದಲ್ಲಿ ಪವಿತ್ರ ಕುರಾನ್‌ನ ಸಾಲುಗಳನ್ನು ಕೆತ್ತಲಾಗಿದೆ. ಕ್ರಿ.ಶ. 1646ರಲ್ಲಿ ಅಸರ್ ಮಹಲ್ ಕಟ್ಟಲಾಯಿತು. ಇಲ್ಲಿ ಪ್ರವಾಸಿ ಮಹಮ್ಮದರ ಗಡ್ಡ–ಕೂದಲುಗಳನ್ನು ಸಂರಕ್ಷಿಸಲಾಗಿದೆ. ಇದರ ಎದುರಿಗೆ ಇರುವ ಹಸಿರು ಬಣ್ಣದ ಹೊಂಡದಲ್ಲಿ ಮಹಲ್‌ನ ಛಾಯೆ ನೋಡುವಂಥದ್ದು. ಇದರ ಸುತ್ತಲೂ ಅರಮನೆ ಹಾಗೂ ದರ್ಗಾಗಳಿವೆ. ಅಸರ್ ಮಹಲ್‌ನಿಂದ ಸ್ವಲ್ಪದೂರದಲ್ಲಿರುವುದೇ ಗಗನ್ ಮಹಲ್. ಗಗನ್ ಮಹಲ್ ಎಂದು ಕರೆಯಲು ಕಾರಣ ಇಲ್ಲಿರುವ ಆಕಾಶದೆತ್ತರದ ಹೊರಾಂಗಣ ರಂಗಮಂಚ, ಹಾಗೂ ಎದುರಿನ ಸುಂದರ ವಿಶಾಲವಾದ ಹಸಿರು ಹಾಸಿನ ಹುಲ್ಲು ನೈಸರ್ಗಿಕ ರಂಗಮಂಚದಂತಿದೆ.

ವಿಜಾಪುರದ ಇನ್ನೊಂದು ಪ್ರಸಿದ್ಧ ಕಟ್ಟಡವೇ ಈ ಬಾರಾಕಮಾನ್. ಅಂದರೆ 12 ಕಮಾನ್‌ಗಳು. ಅಲಿ ಆದಿಲ್





downloaded from: www.kpscvaani.com



ಶಾಹಿಯ ಗೋರಿಯನ್ನು ಸ್ಥಾಪಿಸಲು ಕಟ್ಟಿದ ಸ್ಮಾರಕ. ದೊಡ್ಡದಾದ ಕಲ್ಲುಗಳಿಂದ ಮಾಡಿದ ವೇದಿಕೆಯಲ್ಲಿ ನಿರ್ಮಿತವಾಗಿದೆ ಈ ಬಾರಾಕಮಾನ್. ಪ್ರಾರಂಭದಲ್ಲಿ ಇಲ್ಲಿ 12 ಕಮಾನುಗಳನ್ನು ನಾಲ್ಕೂ ಬದಿಗೆ ಹಾಗೂ 12 ಅಂತಸ್ತಿನ ಕಟ್ಟಡ ಕಟ್ಟುವುದು ಎಂದಾಗಿತ್ತು. ಇದು ಪೂರ್ಣಗೊಂಡಿದ್ದರೆ ಇದರ ನೆರಳು ಗೋಲಗುಮ್ಮಟದ ಮೇಲೆ ಬೀಳುತ್ತಿತ್ತೆಂದು ಹೇಳಲಾಗಿದೆ. ಆದರೆ ದುರಾದೃಷ್ಟವಶಾತ್ ಇದು ಪೂರ್ಣಗೊಳ್ಳಲಿಲ್ಲ. ಆದರೂ ಇದರ ಅಪೂರ್ಣ ಸೌಂದರ್ಯವೂ ನೋಡುವಂಥದ್ದೇ. ನಗರದ ಮಧ್ಯಭಾಗದಲ್ಲಿ ಎತ್ತರವಾದ ಪ್ರದೇಶದಲ್ಲಿ ನಿರ್ಮಿತ ಕಾವಲು ಗೋಪುರವೇ ಈ ಉಪಲಿ ಬುರುಜ. ಕಲ್ಲಿನಿಂದ ನಿರ್ಮಿತ ಈ ಸ್ಮಾರಕದ ಸುತ್ತಲೂ ಇರುವ ಮೆಟ್ಟಿಲುಗಳನ್ನು ಏರಿ ಮೇಲೆ ಬಂದರೆ ಕಾಣುವುದೇ ನಗರದ ಅದ್ಭುತ ಪಕ್ಷಿನೋಟ. ಗೋಪುರದ ಮೇಲೆ ಎರಡು ಧಾತು ನಿರ್ಮಿತ ತೋಪುಗಳನ್ನೂ ನೋಡಬಹುದು. ಉಪಲಿ ಬುರುಜದಿಂದ ಅನತಿ ದೂರದಲ್ಲಿರುವುದೇ 'ಮಲಿಕ್-ಎ-ಮೈದಾನ್ ತೋಪ್'. ಇದೊಂದು ಮಿಶ್ರಧಾತು ನಿರ್ಮಿತ ತೋಪಿನ ಹೆಸರು. ಇದನ್ನು ವಿಜಯದ ಸಂಕೇತವಾಗಿ ಅಹಮ್ಮದ್ ನಗರದಿಂದ ತರಲಾಗಿತ್ತು. ಇದು 14 ಫೂಟ್ ಉದ್ದ, 55 ಟನ್ ಭಾರ ಹೊಂದಿದ್ದು ಜಗತ್ತಿನ ಅತೀ ದೊಡ್ಡ ತೋಪು ಎನ್ನಲಾಗಿದೆ. ಸೈನಿಕರು ಇದರ ತೀವ್ರ ಧ್ವನಿಯಿಂದ ರಕ್ಷಿಸಿಕೊಳ್ಳಲು ಇದಕ್ಕೆ ಬೆಂಕಿ ಇಟ್ಟ ತಕ್ಷಣ ಪಕ್ಕದಲ್ಲೇ ಇರುವ ನೀರಿನ ಕೊಳದಲ್ಲಿ ಜಿಗಿಯುತ್ತಿದ್ದರೆನ್ನಲಾಗಿದೆ.

ಆದಿಲ್ ಶಾಹಿ ರಾಜರಿಗೆ ಜನರ ಮೇಲೆ ತುಂಬಾ ಕಾಳಜಿ. ಹಾಗಾಗಿ ಅವರು ಜನರಿಗೆಂದು ನಿರ್ಮಿಸಿದ ಕುಡಿಯುವ ನೀರಿನ ಬಾವಿಗಳೇ ತಾಜ್‌ಬಾವಡಿ ಮತ್ತು ಬೇಗಂ ತಾಲಾಬ್‌ಗಳು. ತಾಜ್ ಬಾವಡಿ ಇದು ಕಲ್ಲಿನಿಂದ ನಿರ್ಮಿತ ಆಯತಾಕಾರದ ಅತೀ ಸುಂದರ ಬಾವಿ.


ಗೋಲಗುಮ್ಮಟದ ನಂತರ 2ನೇ ಸ್ಥಾನ ಪಡೆದದ್ದೇ ಈ 'ಇಬ್ರಾಹಿಂ ರೋಜಾ'. ಕಲೆಗಳ ರಾಜಾ ಎಂದೇ ಪ್ರಸಿದ್ಧಿಯಾದ ಇದು ಇಂಡೋ-ಇಸ್ಲಾಮಿಕ್ ವಾಸ್ತು ಶಿಲ್ಪದ ಉತ್ತಮ ಉದಾಹರಣೆಗಳಲ್ಲೊಂದು ಎಂದರೆ ತಪ್ಪಾಗಲಾರದು. 2ನೇ ಇಬ್ರಾಹಿಂ ಆದಿಲ್ ಶಾಹ್ ತನ್ನ ಹೆಂಡತಿ ತಾಜಸುಲ್ತಾನಳ ನೆನಪಿಗಾಗಿ ಇದನ್ನು ಕಟ್ಟಿಸಿದನು. ಆದರೆ ಆತನೇ ಮೊದಲು ಮರಣ ಹೊಂದಿದ್ದರಿಂದ ಅವನ ಸಮಾಧಿಯನ್ನು ಈ ಸ್ಥಳದಲ್ಲಿ ಮಾಡಲಾಯಿತು. ಅವನ ಹೆಂಡತಿಯ ಸಮಾಧಿಯನ್ನೂ ಇದರ ಪಕ್ಕದಲ್ಲಿ ಮಾಡಲಾಗಿದೆ. ಇಲ್ಲಿ ಒಟ್ಟು ಎರಡು ಸ್ಮಾರಕಗಳಿವೆ. ಮಧ್ಯದಲ್ಲಿ ಸುಂದರವಾದ ಕಾರಂಜಿಯುಕ್ತ ಹೊಂಡವಿದೆ. ಈ ಸ್ಮಾರಕದ ಹೊರ ಗೋಡೆಯಲ್ಲಿ ಪವಿತ್ರ ಕುರಾನ್‌ನ ವಾಕ್ಯಗಳು ಹಾಗು ಸುಂದರ ಕೆತ್ತನೆಗಳಿವೆ. ಕಲ್ಲಿನಿಂದ ನಿರ್ಮಿತ ಕಿಟಕಿ-ಬಾಗಿಲುಗಳು ಹಾಗೂ ಛಾವಣಿಯಲ್ಲಿ ಕಲ್ಲಿನಿಂದ ನಿರ್ಮಿತವಾದ ನೇತಾಡುವ ಸರಪಳಿಗಳು ನಮ್ಮ ಪೂರ್ವಜರ ಕುಸುರಿ ಕೆಲಸದ ನೈಪುಣ್ಯವನ್ನು ಸಾರಿ ಹೇಳುತ್ತವೆ. ಇಬ್ರಾಹಿಂ ರೋಜಾದ ಮುಂದಿರುವ ವಿಶಾಲವಾದ ಹುಲ್ಲಿನ ಹಾಸಿಗೆ ನೋಡಲು ಬಲು ಸುಂದರವಾಗಿದೆ. ಆಗ್ರಾದ ತಾಜ್ ಮಹಲ್ ಕಟ್ಟಲು ಈ ಇಬ್ರಾಹಿಂ ರೋಜಾನೇ ಸ್ಫೂರ್ತಿ ಎಂದು ಹೇಳಲಾಗುತ್ತದೆ. ಒಂದು ವೇಳೆ ಇದನ್ನು ಬಿಳಿ ಕಲ್ಲಿನಲ್ಲಿ ಕಟ್ಟಿದ್ದರೆ ತಾಜ್ ಮಹಲ್ ಅನ್ನೂ ಮೀರಿಸುವಂತಹ ಕಟ್ಟಡವಾಗುತ್ತಿತ್ತು ಎನ್ನುವುದರಲ್ಲಿ ಎರಡು ಮಾತಿಲ್ಲ.

ವಿಜಾಪುರದಿಂದ ಅಥಣಿ ರಸ್ತೆಯಲ್ಲಿ ಅಷ್ಟೊಂದು ಪ್ರಸಿದ್ಧಿ ಪಡೆಯದ, ಆದರೆ ಇತಿಹಾಸದ ಪುಟಗಳಲ್ಲಿ ದಾಖಲಾದ ಸ್ಥಳವೊಂದಿದೆ. ಅದೇ ಈ ಸಾಠ್ ಕಬರ್. ಸಾಠ್ ಕಬರ್ ಎಂದರೆ 60 ಸಮಾಧಿಗಳು. 2ನೇ ಅಲಿ ಆದಿಲ್ ಶಹಾ ದೊರೆಯ ಸೇನಾಧಿಕಾರಿಯಾಗಿದ್ದ ಅಫ್ಜಲ್ ಖಾನ್ ಎಂಬಾತ ತನ್ನ ಮರಣದ ನಂತರ ತನ್ನ ಪತ್ನಿಯರು ಬೇರೊಬ್ಬರನ್ನು ಮದುವೆಯಾಗಬಾರದೆಂಬ ಕಾರಣಕ್ಕೆ ಅವರೆಲ್ಲರನ್ನೂ ಬಾವಿಗೆ ನೂಕಿ ಹತ್ಯಗೈದ ಸ್ಥಳವೇ ಈ ಸಾಠ್ ಕಬರ್. ನಂತರ 60 ಪತ್ನಿಯರ ಗೋರಿಗಳನ್ನು ಒಂದೇ ಮಂಟಪದಲ್ಲಿ ಸಾಲಾಗಿ ಇಲ್ಲಿ ನಿರ್ಮಿಸಲಾಗಿದೆ.

ಇವಿಷ್ಟೇ ಅಲ್ಲದೇ ವಿಜಾಪುರದಲ್ಲಿ ವೀಕ್ಷಿಸಲು ಇನ್ನೂ ಹಲವಾರು ಸ್ಥಳಗಳಿವೆ. ಭಾರತದ 2ನೇ ಅತೀ ಎತ್ತರದ (85 ಅಡಿ) ಶಿವನ ಮೂರ್ತಿಯಿರುವ ಶಿವಗಿರಿ, ಕುಮಟಗಿಯಲ್ಲಿರುವ ರಾಣಿಯರ ಜಲಮಂದಿರ (ಸ್ನಾನ ಗೃಹ), ನವರಸಪುರದಲ್ಲಿರುವ ಸಂಗೀತೋತ್ಸವ ನಡೆಯುವ ಸ್ಥಳ, ಖ್ವಾಜಾ ಅಮೀನ್ ದರ್ಗಾ, ಮಲ್ಲಿಕಾರ್ಜುನ ಆಶ್ರಮ, ಸಿದ್ಧೇಶ್ವರ ಆಶ್ರಮ, ಸಿದ್ಧೇಶ್ವರ ದೇವಸ್ಥಾನ, ಅಹಸ್ರಫಣೀ ಪಾರ್ಶ್ವನಾಥ ಮಂದಿರ, ಲಿಂಗದ ಗುಡಿ, ಹೀಗೆ ಇನ್ನೂ ಹಲವಾರು ನೋಡತಕ್ಕಂತಹ ಸ್ಥಳಗಳಿವೆ. ಇದಲ್ಲದೇ ವಿಜಾಪುರ ಜಿಲ್ಲೆಯಲ್ಲಿ ಆಲಮಟ್ಟಿ ಜಲಾಶಯ, ಬಸವನ ಬಾಗೇವಾಡಿಯ ಬಸವೇಶ್ವರ ದೇಗುಲ, ಮನಗುಳಿಯ ಕಲ್ಯಾಣಿ ಚಾಲುಕ್ಯರಕಾಲದ ರಾಮೇಶ್ವರ ದೇವಾಲಯ, ಐತಿಹಾಸಿಕ ಪ್ರಸಿದ್ಧಿ ಪಡೆದ ರಕ್ಕಸತಂಗಡಗಿ ಯುದ್ಧ ನಡೆದ ಸ್ಥಳ ತಾಳಿಕೋಟೆ ಇವು ಜಿಲ್ಲೆಯ ಇನ್ನಿತರ ಪ್ರವಾಸಿ ತಾಣಗಳು.

ಎಷ್ಟೋ ವರ್ಷಗಳ ವಿಜಾಪುರ ನಿವಾಸಿಗಳ ಕನಸಾದ ನಗರದ ಮಾಸ್ಟರ್ ಪ್ಲಾನ್ ಶುರುವಾಗಿದೆ. ಪ್ರವಾಸಿಗರನ್ನು ಆಕರ್ಷಿಸಲು ಕೇವಲ ಸ್ಮಾರಕಗಳಿದ್ದರೆ ಸಾಲದು ಅವುಗಳ ಸೌಂದರ್ಯ ವೃದ್ಧಿಸಲು ನಗರವು ಸ್ವಚ್ಛ ಹಾಗೂ ಸುಂದರವಾಗಿರಬೇಕು. ರಾಜ್ಯ ಸರ್ಕಾರ ವಿಜಾಪುರಕ್ಕೆ 'ವಿಜಯಪುರ' ಎಂದು ಮರುನಾಮಕರಣ ಮಾಡಿದ್ದು ಸಂತೋಷದ ವಿಷಯ. ಹೀಗೆ ವಿಜಯಪುರ ಜಿಲ್ಲೆಯು ಅತ್ಯುತ್ತಮ ವಾಸ್ತುಶಿಲ್ಪಗಳುಳ್ಳ ಸ್ಮಾರಕಗಳಿಂದಾಗಿ ಕರ್ನಾಟಕದಲ್ಲಷ್ಟೇ ಅಲ್ಲದೇ ಜಗತ್ತಿನಲ್ಲೇ ಹೆಸರುವಾಸಿಯಾಗಿದೆ.

ಪ್ರವಾಸಿಗರು ವಿಜಯಪುರಕ್ಕೆ ತಲುಪಲು ರೈಲು, ಬಸ್ಸುಗಳ ವ್ಯವಸ್ಥೆಯಿದ್ದು ಬೆಂಗಳೂರಿನಿಂದ 530 ಕಿ.ಮೀ. ಬೆಳಗಾವಿಯಿಂದ 200 ಕಿ.ಮೀ. ಅಂತರದಲ್ಲಿದೆ. ವಿಮಾನದ ಮೂಲಕ ಪ್ರಯಾಣ ಬಯಸುವವರಿಗೆ ಬೆಳಗಾವಿ ಹತ್ತಿರದ ವಿಮಾನ ನಿಲ್ದಾಣವಾಗಿದೆ. ■



ಅಸಾಧಾರಣ ಸಂಗೀತಗಾರರೂ, ಅನನ್ಯ ಸಾಹಿತಿಗಳೂ, ಅಪೂರ್ವ ವಾಗ್ಗೇಯಕಾರರೂ, ಅನುಪಮ ಕಲಾವಿದರೂ, ಅಪ್ರತಿಮ ಆಡಳಿತಗಾರರೂ ಆಗಿ ದೇಶ-ವಿದೇಶಗಳ ಇತರೇ ಮಹಾರಾಜರುಗಳಿಗೆ ಮಾದರಿಯಾಗಿದ್ದ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್ ಬಹದ್ದೂರರ ಜನ್ಮಶತಮಾನೋತ್ಸವ ನಿಮಿತ್ತ

# ಹೃದಯವಂತ ಮಹಾರಾಜ ಶ್ರೀ ಜಯಚಾಮರಾಜ ಒಡೆಯರ್

ಮಹಾಲಕ್ಷ್ಮಿ





downloaded from: www.kpscvaani.com



ಅದು ಸಾವಿರದ ಒಂಬೈನೂರ ಐವತ್ತರ ದಶಕದ ಕೊನೆ ಮತ್ತು ಅರವತ್ತರ ದಶಕದ ಆರಂಭ. ನಟ ರತ್ನಾಕರ, ಮಾಸ್ಟರ್ ಹಿರಣ್ಣಯ್ಯನವರ ಲಂಚಾವತಾರ, ದೇವದಾಸಿ, ಮಕ್ಕಲ್ ಟೋಪಿ, ನಡುಬೀದಿ ನಾರಾಯಣ, ಸದಾರಮೆ, ಭ್ರಷ್ಟಾಚಾರ, ಬ್ಲಾಕ್ ಮಾರ್ಕೆಟ್ ಮುಂತಾದ ನಾಟಕಗಳು ಕನ್ನಡ ನಾಡಿನಲ್ಲಿ ಹೊಸದೊಂದು ಅಲೆಯನ್ನು ಹುಟ್ಟಿಸಿದ್ದ ಕಾಲವದು. ಆ ಸಂದರ್ಭದಲ್ಲಿ ಮಾಸ್ಟರ್ ಹಿರಣ್ಣಯ್ಯನವರ ನಾಟಕಗಳನ್ನು ನೋಡಲಿಚ್ಛಿಸಿ ಮೈಸೂರು ಮಹಾರಾಜರೇ ಹಿರಣ್ಣಯ್ಯ ಮಿತ್ರ ಮಂಡಲಿಯನ್ನು ಅರಮನೆಗೆ ಆಹ್ವಾನಿಸಿ ನಾಟಕಗಳ ಪ್ರದರ್ಶನ ಏರ್ಪಡಿಸಿದ್ದರು. ಆಗೊಮ್ಮೆ "ಸದಾರಮೆ" ನಾಟಕವನ್ನು ವೀಕ್ಷಿಸಿ ಬಹಳ ಖುಷಿಯಿಂದ ಮಹಾರಾಜರು ಹೊರಟರು. ಅವರನ್ನು ಬೀಳ್ಕೊಡಲು ಹಿರಣ್ಣಯ್ಯರಾದಿಯಾಗಿ ಇಡೀ ಕಲಾವಿದರ ತಂಡ ಸಾಲಾಗಿ ನಿಂತಿದ್ದರು. ಮಹಾರಾಜರು ಹೊರಟಿದ್ದ ಕಾರು ಚಕ್ಕನೆ ಹಿರಣ್ಣಯ್ಯನವರ ಮುಂದೆ ನಿಂತಿತು. ಕೂಡಲೇ ಕಾರಿನ ಬಾಗಿಲು ತೆರೆದುಕೊಂಡಾಗ ಅಲ್ಲಿದ್ದ ಮಹಾರಾಜರ ಪಾದಗಳಿಗೆ ಹಿರಣ್ಣಯ್ಯನವರು ತಮಗರಿವಿಲ್ಲದೆಯೇ ಹಣೆಯಿಟ್ಟು ನಮಸ್ಕರಿಸಿದರು. ಆಗ ಇನ್ನೂ 'ಸದಾರಮೆ'ಯ ಕಳ್ಳನ ಪಾತ್ರದಲ್ಲೇ ಇದ್ದ ಹಿರಣ್ಣಯ್ಯನವರ ಮುಖದಲ್ಲಿದ್ದ ಕಪ್ಪು ಬಣ್ಣ ಮಹಾರಾಜರ ಪಾದಗಳಿಗೆ ಮೆತ್ತಿಕೊಂಡಿತು. ತಕ್ಷಣ ತನ್ನಿಂದ ಮಹಾ ಪ್ರಮಾದವಾಯಿತೆಂಬಂತೆ ಹಿರಣ್ಣಯ್ಯನವರು ತಮ್ಮ ಇಡೀ ಶರೀರವನ್ನು ಒಂದು ಹಿಡಿ ಮಾಡಿಕೊಂಡು ತಲೆ ತಗ್ಗಿಸಿದರು. ಆದರೆ ಒಂದಿನಿತೂ ಬೇಸರಿಸಿಕೊಳ್ಳದ ಮಹಾರಾಜರು "ಇದನ್ನು ತೊಳೆದರೆ ಹೋಗುತ್ತೆ, ಆದರೆ ನೀವು ನಿಮ್ಮ ಅಭಿನಯ ಕಲೆಯನ್ನು ನನ್ನ ಹೃದಯದಲ್ಲಿ ಒತ್ತಿಬಿಟ್ಟಿದ್ದೀರಿ ಅದೆಂದಿಗೂ ಹೋಗದು" ಎಂದು ಅವರ ನಟನೆಯನ್ನು ಮುಕ್ತ ಮನಸ್ಸಿನಿಂದ ಪ್ರಶಂಸಿಸಿ ಅಲ್ಲಿಂದ ಹೊರಟರು. ಅಂಥ ಹೃದಯ ವೈಶಾಲ್ಯದ ಮಹಾರಾಜರು ಬೇರಾರೂ ಅಲ್ಲ, ಅವರೇ ಶ್ರೀ ಜಯಚಾಮರಾಜ ಒಡೆಯರ್.

ವಿಶ್ವದ ಭೂಪಟದಲ್ಲಿ ಭಾರತಕ್ಕೊಂದು ಮಹತ್ವದ ಸ್ಥಾನವಿದೆ. ಹಾಗೆಯೇ ಭಾರತದ ಭೂಪಟದಲ್ಲಿ ಕರ್ನಾಟಕಕ್ಕೊಂದು ಅದರದೇ ಆದ ವಿಶಿಷ್ಟ ಸ್ಥಾನ ಉಂಟು. ಅಂತೆಯೇ ಇಂಥ ಮಹತ್ವದ ಕರ್ನಾಟಕವನ್ನು ಆಳಿದ ಮಹಾರಾಜರುಗಳಲ್ಲಿ ಯದುಕುಲದ ಮೈಸೂರು ಅರಸರು ದೇಶದಲ್ಲೇ ಮೊದಲ ಸ್ಥಾನ ಪಡೆದವರು. ಭಾರತದಲ್ಲಿ ಬೇಕಾದಷ್ಟು ರಾಜವಂಶಗಳು ತಲೆಯೆತ್ತಿ ಮೆರೆದಿವೆ. ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಸುಮಾರು 550 ಸಂಸ್ಥಾನಗಳಿದ್ದವು. ಇವನ್ನು ರಾಜಮಹಾರಾಜರು, ನವಾಬರು ಆಳುತ್ತಿದ್ದರು. ಆದರೆ ನಿಜವಾಗಿ ಪ್ರಜೆಗಳ ಹಿತರಕ್ಷಣೆಯನ್ನು ಕಾಯಕ ಮಾಡಿಕೊಂಡಿದ್ದ ಏಕೈಕ ಸಂಸ್ಥಾನವೆಂದರೆ ಅದು ಮೈಸೂರು ಸಂಸ್ಥಾನ ಮಾತ್ರವಾಗಿತ್ತು.

1399 ರಲ್ಲಿ ಯದುರಾಯನಿಂದ ಆರಂಭಗೊಂಡು 1947ರ ತನಕ ಐದೂವರೆ ಶತಕಗಳ ಕಾಲ ಈ ನಾಡನ್ನು ವೈಭವದಿಂದ ಆಳಿ ಆಲಂಗಿಸಿಕೊಂಡು ಪ್ರಜಾಪಾಲಕರಾಗಿ ಮೆರೆದವರು ಯದುಕುಲದ ಅರಸರು. ಈ ಸುದೀರ್ಘ ಅವಧಿಯಲ್ಲಿ ಮೈಸೂರು ಅರಸೊತ್ತಿಗೆಯು ಇಪ್ಪತ್ತೈದು ಅರಸರನ್ನು ಕಂಡಿದೆ. ಇವರ ಪೈಕಿ ಶ್ರೀ ಜಯಚಾಮರಾಜ ಒಡೆಯರ್ ಅವರೇ ಕೊನೆಯವರು. ಒಂದು ರೀತಿಯಲ್ಲಿ ಸತ್ಯ, ಧರ್ಮಗಳ ಕಾಲವೂ ಇವರ ಜೊತೆಯಲ್ಲಿಯೇ ಕೊನೆಗೊಂಡಿತೆಂದು ಹೇಳಬಹುದು. ಮೊದಲ ದೊರೆ ಯದುರಾಯನಿಂದ ಹಿಡಿದು ಎಲ್ಲಾ ದೊರೆಗಳೂ ತಮ್ಮದೇ ಆದ ಒಂದೊಂದು ವಿಶಿಷ್ಟ ವ್ಯಕ್ತಿತ್ವಗಳನ್ನು ಹೊಂದಿದ್ದು ತಮ್ಮ ನಿಸ್ಪೃಹ ಸೇವೆಯಿಂದ ತಾವೂ ಬೆಳಗಿ ನಾಡನ್ನೂ ಬೆಳಗಿಸಿದ್ದರು. ಪ್ರಜೆಗಳ ಕಷ್ಟ-ನಷ್ಟಗಳನ್ನು ಅರಿತು, ಅವರ ಸುಖ-ದುಃಖಗಳಲ್ಲಿ ಬೆರೆತು ಅವರ ಕಂಬನಿ ಒರೆಸುವಲ್ಲಿ ಮೈಸೂರು ಅರಸೊತ್ತಿಗೆ ಇಡೀ ವಿಶ್ವಕ್ಕೆ ಮಾದರಿಯಾಗಿತ್ತು. ಬ್ರಿಟಿಷರು ನಮ್ಮನ್ನು ಆಳುತ್ತಿದ್ದ ಕಾಲದಲ್ಲಿಯೇ ಪ್ರಜಾತಂತ್ರ ವ್ಯವಸ್ಥೆಯನ್ನು ಜಾರಿಗೆ ತಂದವರಿವರು. ಇವರು ಅಂದು ಸ್ಥಾಪಿಸಿದ ಪ್ರಜಾಪ್ರತಿನಿಧಿ ಸಭೆಯೇ ಮುಂದೆ ಸ್ವತಂತ್ರ ಭಾರತದ





ರಾಜಕೀಯಕ್ಕೆ ನಾಂದಿಯಾಯಿತು. ಪ್ರಜೆಗಳ ಪಾಲಿಗೆ ಪ್ರತ್ಯಕ್ಷ ದೈವದಂತೆಯೇ ಇದ್ದ ಶ್ರೀ ಜಯಚಾಮರಾಜ ಒಡೆಯರ್‌ರವರ ಕಾಲವೂ ಅಷ್ಟೇ ಸುವರ್ಣಯುಗವಾಗಿತ್ತು. ಹಿಂದಿನವರು ಅದನ್ನು ನೆನೆಸುತ್ತಲೇ ಈಗಿನವರಿಗೆ ಮಹಾರಾಜರಾಳ್ವಿಕೆಯ ಸಿಹಿಬುತ್ತಿಯನ್ನು ಬಿಚ್ಚಿ ಹಂಚುವುದನ್ನು ಕಂಡಾಗ ಅಬ್ಬಾ! ಆ ಕಾಲ ಎಷ್ಟೊಂದು ಸುಭಿಕ್ಷವಾಗಿತ್ತೆಂದು ಆಶ್ಚರ್ಯವಾಗುತ್ತದೆ.

ಮಹಾರಾಜರಾಗಷ್ಟೇ ಇರದೆ ಸ್ವತಃ ಸಾಹಿತಿಯೂ, ಕೀರ್ತನಕಾರರೂ, ಸಂಗೀತಗಾರರೂ, ವಾಗ್ಗೇಯಕಾರರೂ, ಸಂಸ್ಕೃತ ಪಂಡಿತರೂ, ಜ್ಯೋತಿಷ್ಯಶಾಸ್ತ್ರಜ್ಞರೂ, ಉಪನ್ಯಾಸಕರೂ, ಶಿಕ್ಷಣತಜ್ಞರೂ, ಛಾಯಾಚಿತ್ರಕಾರರೂ, ಸಂಶೋಧಕರೂ, ವೇದಾಂತಿಗಳೂ, ತತ್ವಜ್ಞಾನಿಗಳೂ, ದಾರ್ಶನಿಕರೂ ಆಗಿ ಒಟ್ಟಾರೆ ಮಹಾನ್ ಮಾನವತಾವಾದಿಯಾಗಿದ್ದ ಶ್ರೀ ಜಯಚಾಮರಾಜ ಒಡೆಯರ್ ಅವರ ಹುಟ್ಟು ಈ ನಾಡಿನ ಭಾಗ್ಯವೆಂದೇ ಹೇಳಬಹುದು. ಮಹಾರಾಜ ರಾಜರ್ಷಿ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್‌ರವರ ಸಹೋದರ ಯುವರಾಜ ಕಂಠೀರವ ನರಸಿಂಹರಾಜ ಒಡೆಯರ್ ಹಾಗೂ ಯುವರಾಣಿ ಕೆಂಪು ಚೆಲುವಾಜಮ್ಮಣ್ಣಿಯವರ ಸುಪುತ್ರರಾಗಿ 1919 ರ ಜುಲೈ 18 ರಂದು ಶ್ರೀ ಜಯಚಾಮರಾಜ ಒಡೆಯರ್ ಜನಿಸಿದಾಗ ಬಂಡಿ ಬಂಡಿಗಳಲ್ಲಿ ಮೂಟೆಗಟ್ಟಲೆ ತುಂಬಿದ ಸಿಹಿಯನ್ನು ಸಕ್ಕರೆ ನಾಡಿನ ತುಂಬಾ ಊರು ಊರಿಗೆ, ಕೇರಿ ಕೇರಿಗೆ ಹಂಚಲ್ಪಟ್ಟಿದ್ದನ್ನು ಈಗಲೂ ಕಣ್ಣಿಗೆ ಕಟ್ಟಿದಂತೆ ಹಿರಿಯರು ನೆನಪಿಸಿಕೊಳ್ಳುತ್ತಾರೆ. ಒಡೆಯರ ಜನನ ಆಗ ಅಂಥ ಸಿಹಿ ಸಂಭ್ರಮವಾಗಿತ್ತು. ವಿಜಯಲಕ್ಷ್ಮಮ್ಮಣ್ಣಿ, ಸುಜಯಕಾಂತಮ್ಮಣ್ಣಿ ಹಾಗೂ ಜಯಚಾಮುಂಡಮ್ಮಣ್ಣಿ ಅವರುಗಳು ಇವರ ಒಡಹುಟ್ಟಿದ ಸಹೋದರಿಯರು. ಕಿರಿಯ ಸಹೋದರಿ ಜಯಚಾಮುಂಡಮ್ಮಣ್ಣಿ ಭರತಪುರದ ರಾಜರಿಗೆ

**ಮೈಸೂರು ಅರಸೊತ್ತಿಗೆ ದೇಶಕ್ಕೆ ಮಾದರಿಯಾಗಿತ್ತು. ಬ್ರಿಟಿಷರು ನಮ್ಮನ್ನು ಆಳುತ್ತಿದ್ದ ಕಾಲದಲ್ಲಿಯೇ ಪ್ರಜಾತಂತ್ರ ವ್ಯವಸ್ಥೆಯನ್ನು ಜಾರಿಗೆ ತಂದವರಿವರು. ಇವರು ಅಂದು ಸ್ಥಾಪಿಸಿದ ಪ್ರಜಾಪ್ರತಿನಿಧಿ ಸಭೆಯೇ ಮುಂದೆ ಸ್ವತಂತ್ರ ಭಾರತದ ರಾಜಕೀಯಕ್ಕೆ ನಾಂದಿಯಾಯಿತು.**

ಮದುವೆಯಾಗಿದ್ದು 1954 ಜುಲೈ 26ರಂದು ನಿಧನಹೊಂದಿದರು.

'ಬೆಳೆವ ಸಿರಿ ಮೊಳಕೆಯಲ್ಲೇ ನೋಡಾ' ಎಂಬಂತೆ ಬಾಲಚಂದ್ರನಂತೆ ಮುದ್ದು ಮುದ್ದಾಗಿದ್ದ ಬಾಲಕ ಜಯಚಾಮರಾಜ ಒಡೆಯರ್ ತಮ್ಮ ಬಾಲಲೀಲೆಗಳಲ್ಲೇ ಮುಂದಿನ ತಮ್ಮ ಭವಿಷ್ಯದ ಚಿತ್ತಾರಗಳನ್ನು ಬಿಡಿಸುವಂತೆ ಬಹಳ ಚೂಟಿಯಾಗಿದ್ದರು. ಹಾಗಾಗಿ ಬಾಲ್ಯದಿಂದಲೇ ಓದಿನ ಜೊತೆಗೆ ಕಲೆ, ಸಾಹಿತ್ಯ, ಸಂಗೀತ, ಕ್ರೀಡೆ, ಯೋಗ.... ಹೀಗೆ ಎಲ್ಲವನ್ನೂ ಕಲಿಯತೊಡಗಿದರು. ಯೋಗದಲ್ಲಿ ವಿಶೇಷ ಆಸಕ್ತಿ ಹೊಂದಿದ್ದ ಅವರಿಗೆ ವಿದ್ವಾನ್ ಕೃಷ್ಣಮಾಚಾರ್ಯರು ಯೋಗಾಸನದ ಗುರುಗಳಾಗಿದ್ದರು. ಹಾಗೆಯೇ ಸಂಗೀತ ಮತ್ತು ಆಧ್ಯಾತ್ಮದಲ್ಲಿ ಆಸಕ್ತಿ ಬೆಳೆಯಲು ತಾಯಿ ಕೆಂಪು ಚೆಲುವಾಜಮ್ಮಣ್ಣಿ ಕಾರಣವಾದರೆ ಮಾನವೀಯ ಮೌಲ್ಯಗಳ ಮಾರ್ಗದರ್ಶನ ಅವರಿಗೆ ಅಜ್ಜಿ ವಾಣಿವಿಲಾಸ ಸನ್ನಿಧಾನದ ಕೆಂಪನಂಜಮ್ಮಣ್ಣಿಯವರಿಂದ ಬಂದ ಬಳುವಳಿಯಾಗಿತ್ತು.





downloaded from: www.kpscvaani.com

ನುಡಿಸುತ್ತಿದ್ದ ಈ ವಾದ್ಯವೃಂದಕ್ಕೆ ಒಡೆಯರು ಕರ್ನಾಟಕ ಸಂಗೀತವನ್ನೂ ಸೇರಿಸಿ ಪೂರ್ವ–ಪಶ್ಚಿಮದ ರಾಗ ಸಂಗಮ ಮಾಡಿದ್ದು, ಇದರಿಂದ ಇದರ ಇಂಪು ಇನ್ನಷ್ಟು ಹೆಚ್ಚಾಗಿ ಕೇಳುಗರು ರೋಮಾಂಚನಗೊಳ್ಳುವಂತಾಯಿತು. ಹಾಗಾಗಿ ಇಂದಿಗೂ ಸಹ ಪ್ಯಾಲೇಸ್ ಬ್ಯಾಂಡ್ ಅರ್ಥಾತ್ ಪೊಲೀಸ್ ಬ್ಯಾಂಡ್ ತನ್ನ ಆಕರ್ಷಣೆಯನ್ನು ಉಳಿಸಿಕೊಂಡಿದೆ. ಇದರ ಸಂಗೀತದ ಖದರ್ರೇ ಖದರ್. ಅದು ಬೇರೆ ಯಾವ ವಾದ್ಯವೃಂದಕ್ಕೂ ಬರಲಾರದು.

ನಾಟಕ ಕಲೆಗೆ ಉತ್ತೇಜನ ನೀಡಲೆಂದೇ 'ಶ್ರೀ ಜಯಚಾಮರಾಜೇಂದ್ರ ಕರ್ನಾಟಕ ನಾಟಕ ಸಭಾ' ವನ್ನು ಸ್ಥಾಪಿಸಿದ್ದ ಒಡೆಯರು ತನ್ಮೂಲಕ ಕಲಾ ಸೇವೆಗೂ ಹೆಚ್ಚಿನ ಮನ್ನಣೆ ನೀಡಿದ್ದರು. ಗುಬ್ಬಿ ಕಂಪನಿ, ಕೊಟ್ಟೂರು ಬಸಪ್ಪನವರ ಕಂಪನಿ, ಎಂ.ಸಿ. ಮಹದೇವಸ್ವಾಮಿಯವರ ಕನ್ನಡ ಥಿಯೇಟರ್, ಶ್ರೀ ಚಾಮುಂಡೇಶ್ವರಿ ಕಂಪನಿಗಳು ಸೇರಿದಂತೆ ನಾಡಿನ ಉತ್ತರ ಕರ್ನಾಟಕದ ಅನೇಕ ನಾಟಕ ಕಂಪನಿಗಳು ಇವರ ಕಾಲದಲ್ಲಿ ಉನ್ನತ ಸ್ಥಿತಿಯಲ್ಲಿದ್ದವು. ಇದಕ್ಕೆ ಒಡೆಯರ್‌ರವರ ಪ್ರೋತ್ಸಾಹ ಮುಖ್ಯವಾಗಿತ್ತು. ಹಾಗೆಯೇ ನಟನೆಯಷ್ಟೇ ನೃತ್ಯಕ್ಕೂ ಪ್ರಾಧಾನ್ಯತೆ ನೀಡಿದ್ದ ಇವರ ಪ್ರೋತ್ಸಾಹದಿಂದಾಗಿ ಅನೇಕ ಮಂದಿ ನೃತ್ಯ ಕಲಾವಿದರು ಬೆಳೆದು ಬೆಳಕು ಕಂಡಿದ್ದರು. ರಾಜನರ್ತಕಿ ನಾಟ್ಯಮಯೂರಿ ಜಟ್ಟಿ ತಾಯಮ್ಮನವರಂತಹ ಸುಪ್ರಸಿದ್ಧ ನೃತ್ಯಗಾರ್ತಿಯರು ಇವರ ಆಸ್ಥಾನದಲ್ಲಿದ್ದರು.

ಶಿಲ್ಪ ಮತ್ತು ಚಿತ್ರಕಲೆಗೂ ಮಹತ್ತರ ಕಾಣಿಕೆಯನ್ನು ನೀಡಿರುವ ಜಯಚಾಮರಾಜ ಒಡೆಯರ್ ಅರಮನೆಯ ಕೋಟೆಯೊಳಗೆ ಮತ್ತು ಮೈಸೂರಿನ ರಾಮಾನುಜಾ ರಸ್ತೆಯಲ್ಲಿ ಹೊಯ್ಸಳ ಶೈಲಿಯಲ್ಲಿ ಅನೇಕ ಚೆಂದದ ದೇವಾಲಯಗಳನ್ನು ನಿರ್ಮಿಸಿದ್ದು ಇವುಗಳಲ್ಲಿ ಶ್ರೀ ಭುವನೇಶ್ವರಿ ದೇವಸ್ಥಾನ, ಶ್ರೀ ಕಾಮಕಾಮೇಶ್ವರಿ ದೇವಸ್ಥಾನ, ಶ್ರೀ ಗಾಯಿತ್ರಿ ದೇವಸ್ಥಾನಗಳು



ಪ್ರಮುಖವಾಗಿವೆ. ಖ್ಯಾತ ಶಿಲ್ಪಿಗಳಾದ ಶಿಲ್ಪ ಸಿದ್ಧಾಂತಿ ಸಿದ್ದಲಿಂಗಸ್ವಾಮಿ, ಶಿಲ್ಪಕಲಾ ರತ್ನ ಆಪ್ಪಾಜಿಸ್ವಾಮಿ, ಶಿಲ್ಪಕಲಾ ನಿಪುಣ ನಾಗೇಂದ್ರ ಸ್ಥಪತಿ, ಕಶ್ಯಪ ಶಿಲ್ಪಿ ಬಸವಣ್ಣ ಮತ್ತು ಹೆಸರಾಂತ ಚಿತ್ರಕಲಾವಿದರಾದ ಸ್ಥಪತಿ ನಂಜುಂಡಸ್ವಾಮಿ, ವೈ.ನಾಗರಾಜು, ರಾಮನರಸಯ್ಯ, ಶಂಕರರಾಜು, ಎಸ್.ಎನ್.ಸ್ವಾಮಿ ಮುಂತಾದವರು ಒಡೆಯರ್‌ರವರ ಪ್ರೀತಿ ಪಾತ್ರ ಪ್ರತಿಭೆಗಳಾಗಿದ್ದರು.

ಭಾರತೀಯ ಸಂಸ್ಕೃತಿಯ ರಾಯಭಾರಿಯಾಗಿ, ಸ್ಕಾಲರ್ ಮಹಾರಾಜರೆನಿಸಿ 1942ರಲ್ಲಿ ಕಾಶಿ ವಿಶ್ವವಿದ್ಯಾನಿಲಯದಿಂದ ಎಲ್.ಎಲ್.ಬಿ. ಪದವಿ, 1945ರಲ್ಲಿ ಬ್ರಿಟಿಷ್ ಚಕ್ರಾಧಿಪತ್ಯದ ಜಿಸಿಎಸ್ಐ, 1958ರಲ್ಲಿ ಜಿಸಿಬಿ ಗೌರವಗಳನ್ನು ಹಾಗೂ 1945ರಲ್ಲಿ ಅಣ್ಣಾಮಲೈ ವಿಶ್ವವಿದ್ಯಾನಿಲಯದಿಂದ ಡಿ.ಲಿಟ್ ಪದವಿಗೆ ಪಾತ್ರರಾಗಿ ವಿದ್ವತ್ತಿನ ಮೇರು ಪರ್ವತವಾಗಿದ್ದ ಶ್ರೀ ಜಯಚಾಮರಾಜ ಒಡೆಯರ್‌ರವರು ಉತ್ತಮ ವಾಗ್ಮಿಗಳೂ ಆಗಿದ್ದರು. ದೇಶದಲ್ಲಷ್ಟೇ ಅಲ್ಲದೆ ವಿದೇಶಗಳಲ್ಲೂ ತಮ್ಮ ವಿದ್ವತ್‌ಪೂರ್ಣ ಭಾಷಣಗಳಿಂದ ಎಲ್ಲರ ಮೆಚ್ಚಿನ ಮಹಾರಾಜರಾಗಿದ್ದರು. ಸ್ವಾತಂತ್ರ್ಯ ಹೋರಾಟ ದೇಶದಲ್ಲಿ ತೀವ್ರವಾಗಿ ನಡೆಯುತ್ತಿದ್ದಾಗಲೇ ಮೈಸೂರಿನಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಕಾರಣರಾಗಿ ಒಡೆಯರ್‌ರವರು ತಮ್ಮ ಆಶ್ರಯದಲ್ಲೇ ಕೆ.ಸಿ. ರೆಡ್ಡಿಯವರ ನೇತೃತ್ವದ ಸಚಿವ ಸಂಪುಟದ ರಚನೆಗೂ ಕಾರಣಕರ್ತರಾಗಿ ಇತಿಹಾಸ ನಿರ್ಮಿಸಿದ್ದರು.

1947 ಆಗಸ್ಟ್ 15 ರಂದು ದೇಶ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯದ ಗಾಳಿ ಕುಡಿದಾಗ ಸಿಂಹಾಸನದಿಂದ ಕೆಳಗಿಳಿದ ಜಯಚಾಮರಾಜ ಒಡೆಯರ್, ಬದಲಾದ ವ್ಯವಸ್ಥೆಗೆ ಬಹುಬೇಗ ಹೊಂದಿಕೊಂಡರು. ಸ್ವಾತಂತ್ರ್ಯ ನಂತರ ಭಾರತದ ಅದೆಷ್ಟೋ ಸಂಸ್ಥಾನಗಳ ಮಹಾರಾಜರು ಪ್ರಭುತ್ವವನ್ನು ತ್ಯಜಿಸಿದ್ದರು. ಆಗ ಮಹಾರಾಜರ ಜಂಬೂ ಸವಾರಿಯ ವಿಶ್ವವಿಖ್ಯಾತ ಮೈಸೂರು ದಸರಾ ಕೂಡ ಜನತಾ ದಸರೆಯಾಗಿ ಮಾರ್ಪಾಡು ಹೊಂದಿತು. 1948 ರಿಂದ 1956 ರವರೆಗೆ ರಾಜ ಪ್ರಮುಖರಾಗಿದ್ದ ಒಡೆಯರು ನಂತರ ಏಕೀಕೃತ ಕರ್ನಾಟಕದ ಮೊದಲ ರಾಜ್ಯಪಾಲರಾಗಿ, ಭಾರತದ ಮೊದಲ ರಾಷ್ಟ್ರಪತಿಗಳಾದ ಡಾ. ರಾಜೇಂದ್ರ ಪ್ರಸಾದ್‌ರ ಸಮ್ಮುಖದಲ್ಲಿ 1956ರ ನವೆಂಬರ್ 1 ರಂದು ಪ್ರಮಾಣವಚನ ಸ್ವೀಕರಿಸಿದರು. ಒಂದು ರೀತಿಯಲ್ಲಿ ಅವರ ಪ್ರಭುತ್ವ ಹೋದರೂ ಮತ್ತೊಂದು ರೀತಿಯಲ್ಲಿ ಅವರು ತಾವು ಬದುಕಿರುವ ತನಕವೂ ಪ್ರಭುಗಳಾಗಿಯೇ ಬದುಕಿದ್ದರು. ಏಕೆಂದರೆ ಅವರು ಕೇವಲ ಮಹಾರಾಜರಾಗಿರಲಿಲ್ಲ. ಅದಕ್ಕೂ ಮೀರಿದ ಪ್ರಭುತ್ವವನ್ನು ಅವರು ಸಂಪಾದಿಸಿಕೊಂಡಿದ್ದರು. ರಾಷ್ಟ್ರಕವಿ ಕುವೆಂಪುರವರು ಜಯಚಾಮರಾಜ ಒಡೆಯರ್‌ರವರ ಕುರಿತು ಒಂದು ಕಡೆ ಹೇಳಿರುವ ಮಾತುಗಳವು – "ಎಲ್ಲರೂ ಸಿಂಹಾಸನವನ್ನೇರಿ ಮಹಾರಾಜರಾದರೆ ಇವರು ಸಿಂಹಾಸನದಿಂದ ಇಳಿದು ಮಹಾರಾಜರಾಗಿದ್ದಾರೆ" ಇದು ಬೆಳಕಿನಷ್ಟೇ ಸತ್ಯ.

ಇಂಥ ಯುಗಪುರುಷ ಜಯಚಾಮರಾಜ ಒಡೆಯರ್‌ರವರು 1974 ರ ಸೆಪ್ಟೆಂಬರ್ 23 ರಂದು ಬೆಂಗಳೂರು ಅರಮನೆಯಲ್ಲಿ ಕೊನೆಯುಸಿರೆಳೆದಾಗ ಇಡೀ ವಿಶ್ವವೇ ಕಂಬನಿಗರೆದಿತ್ತು.



downloaded from: www.kpscvaani.com

# ಆರೋಗ್ಯವಂತ ಕಂದಮ್ಮನಿಗೆ ಬೇಕು ಎದೆಹಾಲು

ತಾಯಿಯ ಹಾಲು ಮಗುವಿಗೆ ಅತ್ಯುತ್ತಮ ಪೋಷಣೆಯಾಗಿದೆ. ಮಕ್ಕಳಲ್ಲಿ ಇಂದು ಅಪೌಷ್ಟಿಕತೆ ಹೆಚ್ಚಾಗಿ ಕಂಡು ಬರುತ್ತಿದೆ. ತಾಯಿಯ ಹಾಲಿನಲ್ಲಿರುವ ಪೋಷಕಾಂಶಗಳು ಶಿಶುಗಳ ಮರಣದ ಪ್ರಮುಖ ಕಾರಣವಾಗಿರುವ ಅತಿಸಾರ ಮತ್ತು ನ್ಯೂಮೋನಿಯಾಗಳಂತಹ ಕಾಯಿಲೆಗಳಿಂದ ಶಿಶುಗಳಿಗೆ ರಕ್ಷಣೆ ನೀಡುತ್ತವೆ. ಆದ್ದರಿಂದ ಸ್ತನ್ಯಪಾನವನ್ನು "ಜೀವ ಉಳಿಸುವ ಏಕೈಕ ಮಾರ್ಗ"ವಾಗಿ ನಾವು ಸ್ಪಷ್ಟವಾಗಿ ನೋಡಬಹುದು.

ಪ್ರಪಂಚದಾದ್ಯಂತದ ಶಿಶುಗಳ ಆರೋಗ್ಯವನ್ನು ಸುಧಾರಿಸಲು, ಸ್ತನ್ಯಪಾನವನ್ನು ಪ್ರೋತ್ಸಾಹಿಸಲು 120 ದೇಶಗಳು ಪ್ರತಿ ವರ್ಷ ಆಗಸ್ಟ್ 1 ರಿಂದ 7 ರ ವರೆಗೆ "ವಿಶ್ವ ಸ್ತನ್ಯಪಾನ ಸಪ್ತಾಹ"ವನ್ನು ಆಚರಿಸುತ್ತವೆ. ವಿಶ್ವ ಸ್ತನ್ಯಪಾನ ಸಪ್ತಾಹ ಎನ್ನುವುದು ಸ್ತನ್ಯಪಾನಕ್ಕೆ ಸಂಬಂಧಿಸಿದ ವಿಷಯಗಳ



ವಿಶ್ವ ಆರೋಗ್ಯ ಸಂಸ್ಥೆ ಮತ್ತು ಯುನಿಸೆಫ್‌ನ ನೀತಿ ತಯಾರಕರು ಸ್ತನ್ಯಪಾನವನ್ನು ರಕ್ಷಿಸಲು, ಉತ್ತೇಜಿಸಲು ಮತ್ತು ಬೆಂಬಲಿಸಲು ಆಗಸ್ಟ್ 1990ರಲ್ಲಿ ಇನ್ನೋಸೆಂಟಿ (INNOCENTI) ಘೋಷಣೆಯನ್ನು ರೂಪಿಸಿದರು.

ಮೊದಲ 6 ತಿಂಗಳವರೆಗೆ ಮಗುವಿಗೆ ತಾಯಿಯಿಂದ ಕಡ್ಡಾಯ ಸ್ತನ್ಯಪಾನ ಮಾಡುವ ಗುರಿಯನ್ನು ಸಾಧಿಸಲು ವಿಶ್ವ ಒಕ್ಕೂಟಕ್ಕಾಗಿ ಸ್ತನ್ಯಪಾನ ಕ್ರಿಯೆ (WABA), ವಿಶ್ವ ಆರೋಗ್ಯ ಸಂಸ್ಥೆ (WHO) ಮತ್ತು ಯುನಿಸೆಫ್ (ವಿಶ್ವ ಸಂಸ್ಥೆಯ ಅಂತರರಾಷ್ಟ್ರೀಯ ಮಕ್ಕಳ ತುರ್ತು ನಿಧಿ) ಗಳ ಜಂಟಿ ಆಶ್ರಯದಲ್ಲಿ ಸ್ತನ್ಯಪಾನ ಸಪ್ತಾಹವನ್ನು 2019 ರ ಆಗಸ್ಟ್ 1 ರಿಂದ 7 ರ ವರೆಗೆ ಪ್ರಪಂಚದಾದ್ಯಂತ ಆಚರಿಸಲಾಗುತ್ತಿದ್ದೆ.

ಮೊತ್ತ ಮೊದಲ ಬಾರಿಗೆ ವಿಶ್ವ ಒಕ್ಕೂಟದ ವತಿಯಿಂದ 1992ರಲ್ಲಿ ವಿಶ್ವ ಸ್ತನ್ಯಪಾನ ಸಪ್ತಾಹವನ್ನು ಆಚರಿಸಲಾಯಿತು. ನಂತರ ಇದನ್ನು 120 ಕ್ಕೂ ಹೆಚ್ಚು ದೇಶಗಳಲ್ಲಿ ಯುನಿಸೆಫ್, ಡಬ್ಲ್ಯೂ.ಎಚ್.ಓ., ಮತ್ತು ವಿವಿಧ ಸಂಘಗಳು ಮತ್ತು ಸರ್ಕಾರಗಳ ವತಿಯಿಂದ ಆಚರಿಸಲಾಗುತ್ತಿದೆ.

**ವಿಶ್ವ ಸ್ತನ್ಯಪಾನ ಸಪ್ತಾಹದ ಅಗತ್ಯತೆ:**

ತಾಯಿ ಮತ್ತು ಮಗುವಿನ ಆರೋಗ್ಯಕರ ಜೀವನವನ್ನು ಉತ್ತೇಜಿಸಲು ವಿಶ್ವ ಆರೋಗ್ಯ ಸಂಸ್ಥೆ ಮತ್ತು ಅಮೆರಿಕನ್ ಅಕಾಡೆಮಿ ಆಫ್ ಪೀಡಿಯಾಟ್ರಿಕ್ಸ್(AAP) ಸ್ತನ್ಯಪಾನದ ಮಹತ್ವವನ್ನು ಒತ್ತಿ ಒತ್ತಿ ಹೇಳಿವೆ. ಮೊದಲ 6 ತಿಂಗಳವರೆಗೆ ತಮ್ಮ ಮಗುವಿಗೆ ಕಡ್ಡಾಯ ಸ್ತನ್ಯಪಾನವನ್ನು ಮಾಡಿಸಬೇಕೆಂದು ಎಲ್ಲ ತಾಯಂದಿರಿಗೆ ಶಿಫಾರಸ್ಸು ಮಾಡಲಾಗುತ್ತದೆ. ನಂತರ ಒಂದು, ಎರಡು ಅಥವಾ ಹೆಚ್ಚಿನ ವರ್ಷಗಳವರೆಗೆ ಸ್ತನ್ಯಪಾನದ ಜೊತೆಗೆ ಹೆಚ್ಚುವರಿ ಪೌಷ್ಟಿಕಾಂಶದ ಪೂರಕ ಆಹಾರವನ್ನು ನೀಡಬಹುದು.

ತಾಯಂದಿರು ತಮ್ಮ ಮಗುವಿಗೆ ಸ್ತನ್ಯಪಾನ ನೀಡುವಂತೆ ಸಮಯೋಚಿತ ಬೆಂಬಲ ಮತ್ತು ಆರೋಗ್ಯ ಶಿಕ್ಷಣವನ್ನು ಪಡೆಯುವುದು ಬಹಳ ಅವಶ್ಯಕ. ನಿರಂತರ ಬೆಂಬಲ ಮತ್ತು ತಿಳುವಳಿಕೆ ಸಾಮಾಜಿಕ ಜೀವನದಲ್ಲಿ ಕ್ರಮೇಣ ಮತ್ತು ಶಾಶ್ವತ ಬದಲಾವಣೆಗಳನ್ನು ತರಬಹುದು ಮತ್ತು ಅಂತಿಮವಾಗಿ ಆರೋಗ್ಯಕರ ಮತ್ತು ರೋಗ ಮುಕ್ತ ಸಾಮಾಜಿಕ ಜೀವನ ನಡೆಸಲು ಸಹಕಾರಿಯಾಗಬಲ್ಲದು. ನಿರಂತರ ಸ್ತನ್ಯಪಾನವನ್ನು ಉಳಿಸಿಕೊಳ್ಳಲು ಕುಟುಂಬ, ಸಮುದಾಯದ ಮುಖಂಡರು, ತರಬೇತಿ ಪಡೆದ ಆರೋಗ್ಯ ಕಾರ್ಯಕರ್ತರು, ಹಾಲುಣಿಸುವ ಸಲಹೆಗಾರರು, ಸ್ನೇಹಿತರು ಮತ್ತು ಪಾಲುದಾರರು ಸಾಂಪ್ರದಾಯಿಕವಾಗಿ ಬೆಂಬಲಿಸಬಹುದು.

**ವಿಶ್ವ ಸ್ತನ್ಯಪಾನ ಸಪ್ತಾಹದ ಲಾಂಛನ ಹಾಗೂ ಘೋಷವಾಕ್ಯ:**

ಲಾಂಛನ (ಲೋಗೋ) ದಲ್ಲಿ ಇಬ್ಬರು ವಯಸ್ಕರು ಮತ್ತು ಶಿಶುಗಳ ವಿಶ್ವ ಸ್ತನ್ಯಪಾನ ಸಪ್ತಾಹದ-ಸುಸ್ಥಿರ ಅಭಿವೃದ್ಧಿ ಅಭಿಯಾನದ ತ್ರಿಕೋನವಿದೆ. ಇದು ಸ್ತನ್ಯಪಾನವನ್ನು ರಕ್ಷಿಸಲು, ಉತ್ತೇಜಿಸಲು ಮತ್ತು ಬೆಂಬಲಿಸಲು ಒಟ್ಟಾಗಿ ಕೆಲಸ ಮಾಡುವ ಮಹತ್ವವನ್ನು ಬಲಪಡಿಸುತ್ತದೆ. ತ್ರಿಕೋನವನ್ನು ಎರಡೂ ಕಡೆ ಅಂಕಿ-ಅಂಶಗಳಿರುವ ರೂಪರೇಖೆಗಳಿಂದ ಸುತ್ತುವರಿಯಲಾಗುತ್ತದೆ. ಇದು ತ್ರಿಕೋನವನ್ನು ರಕ್ಷಿಸಲು ಅಗತ್ಯವಿರುವ ಪಾಲುದಾರರ ವಿಶಾಲ ಮೈತ್ರಿಯನ್ನು ಪ್ರತಿನಿಧಿಸುತ್ತದೆ.

WABA | WORLD BREASTFEEDING WEEK 2019

"ಪೋಷಕರನ್ನು ಸಶಕ್ತಗೊಳಿಸಿ: ಸ್ತನ್ಯಪಾನವನ್ನು ಸಕ್ರೀಯಗೊಳಿಸಿ"("EMPOWER PARENTS: ENABLE BREASTFEEDING")ಎಂಬುದು ಈ ಬಾರಿಯ ವಿಶ್ವಸ್ತನ್ಯಪಾನ ಸಪ್ತಾಹದ ಘೋಷ ವಾಕ್ಯವಾಗಿದೆ. ಔಪಚಾರಿಕ ಮತ್ತು ಅನೌಪಚಾರಿಕ ಕ್ಷೇತ್ರಗಳಲ್ಲಿ ಪೋಷಕ-ಸ್ನೇಹಿ ಕೆಲಸದ ಸ್ಥಳಗಳನ್ನು ರಚಿಸಲು ಸಹಭಾಗಿತ್ವವು ಸಹಾಯ ಮಾಡುತ್ತದೆ. ಇದು ವಿಶ್ವ ಸ್ತನ್ಯಪಾನ ಸಪ್ತಾಹ-2019ರ ಘೋಷಣೆಯನ್ನು ಪ್ರತಿಬಿಂಬಿಸುತ್ತದೆ.

**ಇಂತಹ ಸಂದರ್ಭಗಳಲ್ಲಿ ಸ್ತನ್ಯಪಾನ ಮಾಡಬಾರದು:**

- ನೀವು ಎಚ್.ಐ.ವಿ ಪಾಸಿಟಿವ್ ಆಗಿದ್ದರೆ, ಎದೆ ಹಾಲಿನ ಮೂಲಕ ನಿಮ್ಮ ಶಿಶುವಿಗೆ ನೀವು ಎಚ್.ಐ.ವಿ ವೈರಸ್ ಅನ್ನು ಹರಡಬಹುದು.
- ನೀವು ಸಕ್ರೀಯ, ಚಿಕಿತ್ಸೆ ಪಡೆಯದ ಕ್ಷಯರೋಗವನ್ನು ಹೊಂದಿದ್ದರೆ.
- ನೀವು ಕ್ಯಾನ್ಸರ್‌ಗಾಗಿ ಔಷಧ ಚಿಕಿತ್ಸೆ (ಕೀಮೋಥೆರಪಿ) ಪಡೆಯುತ್ತಿದ್ದರೆ.
- ನೀವು ಕೊಕೇನ್ ಅಥವಾ ಗಾಂಜಾನಂತಹ ಮಾದಕ ದ್ರವ್ಯಗಳನ್ನು ಬಳಸುತ್ತಿದ್ದರೆ.
- ನಿಮ್ಮ ಮಗುವಿಗೆ ಗ್ಯಾಲಕ್ಟೋಸೀಮಿಯಾ ಎಂಬ ಅಪರೂಪದ ಸ್ಥಿತಿ ಇದ್ದಾಗ ಎದೆ ಹಾಲಿನಲ್ಲಿರುವ ಗ್ಯಾಲಕ್ಟೋಸ್ ಎಂಬ ನೈಸರ್ಗಿಕ ಸಕ್ಕರೆಯನ್ನು ಸಹಿಸಲಾಗುವುದಿಲ್ಲ.
- ನೀವು ಅರ್ಧತಲೆ ನೋವು(ಮೈಗ್ರೇನ್), ಪಾರ್ಕಿನ್‌ಸನ್ ಕಾಯಿಲೆ ಅಥವಾ ಸಂಧಿವಾತದಂತಹ ಕೆಲವು ಕಾಯಿಲೆಗಳಿಗೆ ಔಷಧಗಳನ್ನು ತೆಗೆದುಕೊಳ್ಳುತ್ತಿದ್ದರೆ.
- ನೀವು ಇತರೆ ಬೇರೆ ಯಾವುದೇ ರೀತಿಯ ವೈದ್ಯರು ಬರೆದುಕೊಟ್ಟ ಔಷಧಗಳನ್ನು ತೆಗೆದುಕೊಳ್ಳುತ್ತಿದ್ದರೆ ಸ್ತನ್ಯಪಾನ ಮಾಡಲು ಪ್ರಾರಂಭಿಸುವ ಮೊದಲು ನಿಮ್ಮ ವೈದ್ಯರೊಂದಿಗೆ ಮಾತನಾಡಿ ನಿರ್ಧಾರ ತೆಗೆದುಕೊಳ್ಳಬೇಕು.



**ಎದೆ ಹಾಲಿನ ಮಹತ್ವ:**

ಎದೆ ಹಾಲು ಶಿಶುಗಳಿಗೆ ಸ್ವಾಭಾವಿಕ ಮೊದಲ ಆಹಾರವಾಗಿದೆ. ಇದು ಶಿಶುವಿಗೆ ಜೀವನದ ಮೊದಲ ತಿಂಗಳುಗಳಿಗೆ ಅಗತ್ಯವಿರುವ ಎಲ್ಲಾ ಶಕ್ತಿ ಮತ್ತು ಪೋಷಕಾಂಶಗಳನ್ನು ಒದಗಿಸುತ್ತದೆ. ಮೊದಲ ದ್ವಿತೀಯಾರ್ಧದಲ್ಲಿ ಮಗುವಿನ ಪೌಷ್ಟಿಕಾಂಶದ ಅಗತ್ಯಗಳಲ್ಲಿ ಅರ್ಧ ಅಥವಾ ಹೆಚ್ಚಿನದನ್ನು ಒದಗಿಸುತ್ತದೆ. ಎದೆ ಹಾಲು ಸಂವೇದನಾ ಮತ್ತು ಅರಿವಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ ಮತ್ತು ಶಿಶುವನ್ನು ಸಾಂಕ್ರಾಮಿಕ ಮತ್ತು ದೀರ್ಘಕಾಲದ ಕಾಯಿಲೆಗಳಿಂದ ರಕ್ಷಿಸುತ್ತದೆ.

ಕಡ್ಡಾಯ ಸ್ತನ್ಯಪಾನವು ಬಾಲ್ಯದ ಸಾಮಾನ್ಯ ಕಾಯಿಲೆಗಳಾದ ಅತಿಸಾರ ಮತ್ತು ನ್ಯೂಮೋನಿಯಾದಿಂದಾಗಿ ಸಂಭವಿಸುವ ಮರಣವನ್ನು ಕಡಿಮೆ ಮಾಡುತ್ತದೆ ಮತ್ತು ಅನಾರೋಗ್ಯದ ಸಮಯದಲ್ಲಿ ತ್ವರಿತವಾಗಿ ಚೇತರಿಸಿಕೊಳ್ಳಲು ಸಹಾಯ ಮಾಡುತ್ತದೆ. ಹಾಗೂ ಎದೆ ಹಾಲು ಶಿಶುಗಳಿಗೆ ಸೂಕ್ತವಾದ ಪೋಷಣೆಯನ್ನು ನೀಡುತ್ತದೆ. ಇದು ಜೀವಸತ್ವಗಳು, ಪ್ರೋಟೀನ್, ಮತ್ತು ಕೊಬ್ಬಿನ ಮಿಶ್ರಣವನ್ನು ಹೊಂದಿದೆ. ಮಗುವಿನ ಬೆಳವಣಿಗೆಗೆ ಬೇಕಾದ ಆಹಾರವನ್ನು ಸುಲಭವಾಗಿ ಜೀರ್ಣವಾಗುವ ರೂಪದಲ್ಲಿ ಒದಗಿಸುತ್ತದೆ.

ಎದೆ ಹಾಲಿನಲ್ಲಿ ಪ್ರತಿಕಾಯಗಳು ಇದ್ದು, ಅದು ಮಗುವಿಗೆ ವೈರಸ್ ಮತ್ತು ಬ್ಯಾಕ್ಟೀರಿಯಾಗಳ ವಿರುದ್ಧ ಹೋರಾಡಲು ಸಹಾಯ ಮಾಡುತ್ತದೆ. ತಾಯಿಯ ಮೊದಲ ಹಾಲಿನಲ್ಲಿ "ಕೋಲೋಸ್ಟ್ರಮ್" ಎಂಬ ಅಂಶವಿದ್ದು ಇದು ಮಗುವಿನ ರೋಗ ನಿರೋಧಕ ಶಕ್ತಿಯನ್ನು ಹೆಚ್ಚಿಸುತ್ತದೆ. ನವಜಾತ ಶಿಶುವಿನ ಜೀರ್ಣಾಂಗವ್ಯೂಹವನ್ನು ಅಭಿವೃದ್ಧಿಪಡಿಸಲು ಮತ್ತು ಎದೆ ಹಾಲನ್ನು ಸ್ವತಃ ಜೀರ್ಣಿಸಿಕೊಳ್ಳಲು ಕೊಲೋಸ್ಟ್ರಮ್ ಸಹಾಯ ಮಾಡುತ್ತದೆ.



**ಸ್ತನ್ಯಪಾನದಿಂದ ತಾಯಿಗೆ ಆಗುವ ಪ್ರಯೋಜನಗಳು:**

- ಸ್ತನ್ಯಪಾನವು ತಾಯಂದಿರ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಕೊಡುಗೆ ನೀಡುತ್ತದೆ.
- ಅಂಡಾಶಯದ ಕ್ಯಾನ್ಸರ್ ಮತ್ತು ಸ್ತನ ಕ್ಯಾನ್ಸರ್‌ಗಳ ಅಪಾಯವನ್ನು ಕಡಿಮೆ ಮಾಡುತ್ತದೆ. ಇದರಿಂದ ಕುಟುಂಬ ಮತ್ತು ರಾಷ್ಟ್ರೀಯ ಸಂಪನ್ಮೂಲಗಳನ್ನು ಹೆಚ್ಚಿಸುತ್ತದೆ.
- ಸ್ತನ್ಯಪಾನವು ಹೆಚ್ಚುವರಿ ಕ್ಯಾಲೋರಿಗಳನ್ನು ಸುಡುತ್ತದೆ, ಆದ್ದರಿಂದ ಇದು ಗರ್ಭಧಾರಣೆಯ ತೂಕವನ್ನು ವೇಗವಾಗಿ ಕಳೆದುಕೊಳ್ಳಲು ಸಹಾಯ ಮಾಡುತ್ತದೆ.
- ಇದು ಆಕ್ಸಿಟೋಸಿನ್ ಎಂಬ ಹಾರ್ಮೋನ್ ಅನ್ನು ಬಿಡುಗಡೆ ಮಾಡುತ್ತದೆ. ಇದು ನಿಮ್ಮ ಗರ್ಭಾಶಯವು ಗರ್ಭಧಾರಣೆಯ ಪೂರ್ವದ ಗಾತ್ರಕ್ಕೆ ಮರಳಲು ಸಹಾಯ ಮಾಡುತ್ತದೆ ಮತ್ತು ಜನನದ ನಂತರ ಗರ್ಭಾಶಯದ ರಕ್ತಸ್ರಾವವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ.
- ಇದು ನಿಮ್ಮ ಆಸ್ಟಿಯೋಪೋರೋಸಿಸ್ ಅಪಾಯವನ್ನು ಕಡಿಮೆ ಮಾಡುತ್ತದೆ.

ಎದೆ ಹಾಲು ಮಗುವಿಗೆ ಅಸ್ತಮಾ ಅಥವಾ ಅಲರ್ಜಿಯನ್ನು ಹೊಂದುವ ಅಪಾಯವನ್ನು ಕಡಿಮೆ ಮಾಡುತ್ತದೆ. ಯಾವುದೇ ಪೂರಕ ಆಹಾರವಿಲ್ಲದೇ ಮೊದಲ 6 ತಿಂಗಳು ಪ್ರತ್ಯೇಕವಾಗಿ ಸ್ತನ್ಯಪಾನ ಮಾಡುವ ಶಿಶುಗಳಿಗೆ ಕಿವಿ ಸೋಂಕು, ಉಸಿರಾಟದ ಕಾಯಿಲೆಗಳು ಮತ್ತು ಅತಿಸಾರದ ಕಾಯಿಲೆಗಳು ಕಡಿಮೆಯಾಗುತ್ತವೆ. ಈ ಮಕ್ಕಳು ವೈದ್ಯರಲ್ಲಿಗೆ ಹೋಗುವುದು ಹಾಗೂ ಆಸ್ಪತ್ರೆಗೆ ದಾಖಲಾಗುವುದೂ ಕೂಡ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗುತ್ತದೆ.

**ಸ್ತನ್ಯಪಾನ ಮಾಡುವುದರ ಪ್ರಯೋಜನಗಳು:**

ಸ್ತನ್ಯಪಾನ ಮಾಡುವುದರಿಂದ ಮಗುವಿಗೆ ವಿವಿಧ ಆರೋಗ್ಯ ಪ್ರಯೋಜನಗಳನ್ನು ಒದಗಿಸುತ್ತದೆ. ಎಲ್ಲಾ ಪ್ರಮುಖ ಪೋಷಕಾಂಶಗಳನ್ನು ಪೂರೈಸುತ್ತದೆ. ಮಗುವಿನ ಆರೋಗ್ಯಕರ ಬೆಳವಣಿಗೆಗೆ ತಾಯಿಯನ್ನು ಪ್ರೋತ್ಸಾಹಿಸುತ್ತದೆ. ಮಾರಕ ಆರೋಗ್ಯ ಸಮಸ್ಯೆಗಳಾದ ನವಜಾತ ಕಾಮಾಲೆ, ನ್ಯೂಮೋನಿಯಾ, ಕಾಲರಾ ಮತ್ತು ಇನ್ನಿತರ ಕಾಯಿಲೆಗಳಿಂದ ಮಗುವನ್ನು ಕಾಪಾಡುತ್ತದೆ.





downloaded from: www.kpscvaani.com





ಸ್ತನ್ಯಪಾನವು ಮಗುವಿಗೆ ಆಹಾರ ನೀಡುವ ಸುರಕ್ಷಿತ ಮಾರ್ಗವಾಗಿದ್ದು, ಮಗುವಿನ ಐಕ್ಯೂ ಸ್ಕೋರ್‌ನ್ನು ಹೆಚ್ಚಿಸುತ್ತದೆ. ಅಲ್ಲದೆ ತಾಯಿ ಮತ್ತು ಮಗುವಿನ ದೈಹಿಕ ನಿಕಟತೆ, ಚರ್ಮದಿಂದ ಚರ್ಮದ ಸ್ಪರ್ಶತೆ ಮತ್ತು ಕಣ್ಣಿನ ಸಂಪರ್ಕ ಎಲ್ಲವೂಗಳ ಬಂಧವನ್ನು ಬೆಸೆಯಲು ಸಹಾಯ ಮಾಡುತ್ತದೆ. ಮಧುಮೇಹ, ಬೊಜ್ಜು ಮತ್ತು ಕೆಲವು ಕ್ಯಾನ್ಸರ್ ಅಪಾಯವನ್ನು ಕಡಿಮೆ ಮಾಡುತ್ತದೆ ಎಂದು ಭಾವಿಸಲಾಗಿದೆಯಾದರೂ, ಹಠಾತ್ ಶಿಶು ಮರಣ ಸಿಂಡ್ರೋಮ್ ತಡೆಗಟ್ಟುವಲ್ಲಿ ಸ್ತನ್ಯಪಾನವು ಮಹತ್ವದ ಪಾತ್ರ ವಹಿಸುತ್ತದೆ.

**ಸ್ತನ್ಯಪಾನ ಮಾಡುವಾಗ ಎದುರಾಗುವ ಕೆಲವು ಸಾಮಾನ್ಯ ಸಮಸ್ಯೆಗಳು:**

ಸ್ತನ್ಯಪಾನ ಮಾಡಿದ ಮೊದಲ ವಾರಗಳಲ್ಲಿ ನೀವು ಸ್ವಲ್ಪ ನೋವನ್ನು ನಿರೀಕ್ಷಿಸಬಹುದು. ಸ್ತನದಲ್ಲಿಯ ಹಾಲಿನ ನಾಳಗಳನ್ನು ಖಾಲಿ ಮಾಡಲು ನೀವು ಪ್ರತಿ ಸ್ತನದಿಂದ ಶಿಶುವಿಗೆ ಸಂಪೂರ್ಣವಾಗಿ ಹಾಲುಣಿಸಿ. ಇಲ್ಲದಿದ್ದರೆ ನಿಮ್ಮ ಸ್ತನಗಳು ಊದಿಕೊಳ್ಳಬಹುದು ಮತ್ತು ನೋವಾಗಬಹುದು. ನಿಮ್ಮ ಮೊಲೆತೊಟ್ಟುಗಳನ್ನು ಒಣಗಿಸಿ ಮತ್ತು ಪ್ರತಿಬಾರಿಯೂ ಹಾಲುಣಿಸಿದಾಗಲೂ ಗಾಳಿಯಾಡುವಂತೆ ಅವಕಾಶ ಕೊಡುವುದರಿಂದ ಮೊಲೆ ತೊಟ್ಟುಗಳು ಒಣಗಲು ಸಹಾಯವಾಗುತ್ತದೆ.

ಸಾಬೂನುಗಳು, ಸುಗಂಧದ್ರವ್ಯ, ಕ್ರೀಮ್‌ಗಳು ಅಥವಾ ಆಲ್ಕೋಹಾಲ್ ಹೊಂದಿರುವ ಲೋಷನ್‌ಗಳನ್ನು ಬಳಸುವುದರಿಂದ ಮೊಲೆತೊಟ್ಟುಗಳು ಇನ್ನಷ್ಟು ಒಣಗಿ ಬಿರುಕುಗೊಳ್ಳುತ್ತವೆ. ಮಗುವಿಗೆ ಹಾಲುಣಿಸಿದ ನಂತರ ಮೊಲೆತೊಟ್ಟುಗಳಿಗೆ ಶುದ್ಧವಾದ ಲ್ಯಾನೋಲಿನ್ ಅನ್ನು ನಿಧಾನವಾಗಿ ಲೇಪಿಸಬಹುದು. ಆದರೆ ಪುನಃ ಹಾಲುಣಿಸುವ ಮೊದಲು ಲ್ಯಾನೋಲಿನ್ ಅನ್ನು ನಿಧಾನವಾಗಿ ತೊಳೆಯಬೇಕು.

ಕೆಲವು ಮಹಿಳೆಯರು ಸಣ್ಣ ಸ್ತನಗಳನ್ನು ಹೊಂದಿದ್ದರೆ ಸ್ತನ್ಯಪಾನ ಮಾಡಲು ಸಾಧ್ಯವಿಲ್ಲ ಎಂದು ತಪ್ಪಾಗಿ ಭಾವಿಸುತ್ತಾರೆ. ಆದರೆ ಸಣ್ಣ ಎದೆಯ ಮಹಿಳೆಯರು ದೊಡ್ಡ ಎದೆಯ ಮಹಿಳೆಯರಂತೆಯೇ ಮಗುವಿಗೆ ಬೇಕಾಗುವಷ್ಟು ಹಾಲನ್ನು ಉಣಿಸಬಹುದು. ಉತ್ತಮ ಪೋಷಣೆ, ಸಾಕಷ್ಟು ವಿಶ್ರಾಂತಿ ಮತ್ತು ಉತ್ತಮ ಜಲೀಕರಣವೂ ಸಹ ಹೆಚ್ಚು ಹಾಲು ಉತ್ಪಾದಿಸಲು ಸಹಾಯ ಮಾಡುತ್ತದೆ.

ಕೆಲಸಕ್ಕೆ ಹೋಗುವ ತಾಯಂದಿರು, ತಾವಿಲ್ಲದ ವೇಳೆಯಲ್ಲಿ ಮಗುವಿಗೆ ತಮ್ಮ ಎದೆ ಹಾಲನ್ನೇ ಉಣಿಸಲು ಈಗ ಸಾಧ್ಯವಿದೆ. ಅದಕ್ಕಾಗಿ ನೀವು ನಿಮ್ಮ ಎದೆ ಹಾಲನ್ನು ಕೈಯಿಂದ ಅಥವಾ ಪಂಪ್ ಸಹಾಯದಿಂದ ಹಾಲನ್ನು ತೆಗೆದು ರೆಫ್ರಿಜರೇಟರಿನಲ್ಲಿ 2 ದಿನಗಳವರೆಗೆ ಸುರಕ್ಷಿತವಾಗಿ ಇಟ್ಟು ಬಳಸಬಹುದು. ಈ ಪದ್ಧತಿಯನ್ನು ನೀವು ಕೆಲಸಕ್ಕೆ ಹಿಂತಿರುಗುವುದಕ್ಕೂ ಮುಂಚಿತವಾಗಿ ಮಗುವಿಗೆ ಅಭ್ಯಾಸ ಮಾಡಿಸುವುದು ಒಳಿತು.

ತಾಯಂದಿರಿಗೆ ಸ್ತನ್ಯಪಾನದ ಕುರಿತು ಸ್ವಲ್ಪ ಸಹಾಯ ಮತ್ತು ತರಬೇತಿಯ ಅಗತ್ಯವಿರುತ್ತದೆ. ಈ ಸಹಾಯವನ್ನು ದಾದಿಯರು, ವೈದ್ಯರು, ಕುಟುಂಬ ಸದಸ್ಯರು ಅಥವಾ ಸ್ನೇಹಿತರಿಂದ ಪಡೆಯಬಹುದು. ■



downloaded from: www.kpscvaani.com

# ಜಿಐ ಸ್ಥಾನಮಾನ ಸಮುದಾಯದ ಪೇಟೆಂಟ್



ಕೆ.ಎಸ್.ರಾಜಮಣ್ಣಾರ್

ಪ್ರಾದೇಶಿಕ ವಿಶೇಷ ಅಸ್ತಿತ್ವದ ಗುಣಲಕ್ಷಣಗಳನ್ನು ಹೀರಿಕೊಂಡು ಬೆಳೆಯುವ ಅಪರೂಪದ ತಳಿಗಳನ್ನು ಸಂರಕ್ಷಣೆ ಮಾಡಿ, ಬ್ರ್ಯಾಂಡ್ ಇಮೇಜ್ ಸೃಷ್ಟಿಸಿ ಅವುಗಳನ್ನು ಕಾಪಾಡುವ ಮಾರುಕಟ್ಟೆಯ ಹೊಸ ಸ್ವರೂಪ ನೀಡುವ ಪರಿಕಲ್ಪನೆ ಹೊಸದಾಗಿ ಆರಂಭವಾಗಿದೆ.

ಪ್ರಕೃತಿ ತನ್ನ ಒಡಲಲ್ಲಿ ಅಸಂಖ್ಯಾತ ಪ್ರಯೋಗಗಳನ್ನು ಮಾಡಿದೆ. ಆದರೆ ಅದು ಎಂದಿಗೂ ಲಾಭ, ನಷ್ಟದ ಲೆಕ್ಕಾಚಾರ ಹಾಕಿಲ್ಲ. ನಂಜನಗೂಡು ರಸಬಾಳೆ, ಕೊಡಗಿನ ಕಿತ್ತಳೆ, ದೇವನಹಳ್ಳಿಯ ಚಕ್ಕೋತ, ಮೈಸೂರಿನ ವೀಳ್ಯದೆಲೆ ಮುಂತಾದ ತೋಟಗಾರಿಕಾ ಉತ್ಪನ್ನಗಳಿಗೆ ಪ್ರಕೃತಿಯೇ ಜಿಐ ಸ್ಥಾನಮಾನ, ಪೇಟೆಂಟ್ ನೀಡಿದೆ. ಸರ್ಕಾರಿ ಸಂಸ್ಥೆಗಳು ನೀಡುವ ಪ್ರಮಾಣ ಪತ್ರ, ನೋಂದಣಿ ಪತ್ರ ಕೇವಲ ಔಪಚಾರಿಕ. ಸಂಸತ್ತಿನಲ್ಲಿ ಜಿಐ ಕಾಯ್ದೆ 1999 ರಲ್ಲಿಯೇ ಅಂಗೀಕಾರ ಪಡೆದರೂ ಅಂತಿಮವಾಗಿ 2003 ರಲ್ಲಿ ಇದು ಜಾರಿಗೆ ಬಂದಿದೆ. ಜಿಐ ಕಿರೀಟ ತೊಡಿಸಿಕೊಂಡ ತಳಿಗಳು ಇಡೀ ಸಮುದಾಯದ ಹಕ್ಕು. ಅದರ ಮಾಲೀಕತ್ವವನ್ನು ಯಾರೊಬ್ಬರೂ ಪಡೆದುಕೊಳ್ಳುವಂತಿಲ್ಲ ಎಂದು ಸುಪ್ರೀಂಕೋರ್ಟ್ ಸಹ ಮುದ್ರೆ ಒತ್ತಿರುವುದು ಇದರ ಮಹತ್ವವನ್ನು ಪ್ರತಿಬಿಂಬಿಸಿದೆ.

ಇತ್ತೀಚೆಗೆ ತೋಟಗಾರಿಕೆ, ಕೈಗಾರಿಕೆ ಉತ್ಪನ್ನಗಳು ಜಿಐ ಕಿರೀಟ ತೊಡಿಸಿಕೊಳ್ಳುವುದು ಸರ್ವೇ ಸಾಮಾನ್ಯವಾಗಿದೆ. ಇದರಿಂದ ಏನು ಪ್ರಯೋಜನ? ರೈತರಿಗೆ ಮತ್ತು ಗ್ರಾಹಕರಿಗೆ ಆಗುವ ಲಾಭಗಳೇನು? ನಷ್ಟವೇನು? ಎಂಬ ಚರ್ಚೆಯೂ ನಡೆಯುತ್ತಿದೆ. ಹಾಗೆ ನೋಡಿದರೆ ಬೇರೆ ರಾಜ್ಯಗಳಿಗೆ ಹೋಲಿಕೆ ಮಾಡಿದರೆ ರಾಜ್ಯದ ಹೆಚ್ಚಿನ ತೋಟಗಾರಿಕೆ ಮತ್ತು ಕೈಗಾರಿಕೆ ಉತ್ಪನ್ನಗಳು ಕಿರೀಟ ತೊಡಿಸಿಕೊಂಡಿವೆ ಎಂಬುದು ನಿಜಕ್ಕೂ ಹೆಮ್ಮೆಯ ಮತ್ತು ಅಭಿಮಾನದ ಸಂಗತಿ.

ಜಿಐ ಎಂದರೆ ಭೌಗೋಳಿಕ ಸನ್ನದು (ಪ್ರಾದೇಶಿಕ ಅಸ್ತಿತ್ವದ ಗುಣಲಕ್ಷಣ ಹೀರಿಕೊಂಡಿರುವ ತಳಿ - ಜಿಯಾಗ್ರಫಿಕಲ್ ಇಂಡಿಕೇಷನ್). ಹಾಗಾದರೆ ಜಿಐ ಕಿರೀಟವನ್ನು ಏಕೆ ತೊಡಿಸಲಾಗುತ್ತಿದೆ? ಇದಕ್ಕಾಗಿ ಕೃಷಿ ಇಲಾಖೆಯ ಅಧಿಕಾರಿಗಳು ಏಕೆ ಕಷ್ಟ ಪಡಬೇಕು ಎಂಬ ಪ್ರಶ್ನೆಯೂ ಕಾಡುತ್ತದೆ. ಕಿರೀಟ ತೊಡಿಸಿಕೊಳ್ಳುವುದು ಸುಲಭದ ಮಾತಲ್ಲ. ಸಾಕ್ಷಿ ಪುರಾವೆಗಳನ್ನು ಸಂಗ್ರಹ ಮಾಡಿ ವೈಜ್ಞಾನಿಕವಾಗಿ ಸ್ಥಳೀಯವಾಗಿ ಮಹತ್ವ ಪಡೆದುಕೊಂಡಿದೆ ಎಂಬುದನ್ನು ಅನುಮಾನಕ್ಕೆ ಎಡೆ ಮಾಡಿಕೊಡದಂತೆ ಸಾಬೀತುಪಡಿಸಲು ಏಳು ಕೆರೆ ನೀರು ಕುಡಿಯಬೇಕು.



# ಸರಳ ಸುಂದರಿ ರಂಗನಾಯಕಿ

ಗುಡಿಹಳ್ಳಿ ನಾಗರಾಜ್



**ಯಾವುದೇ ಪಾತ್ರವನ್ನು ಔಚಿತ್ಯಪೂರ್ಣವಾಗಿ ಅಭಿನಯಿಸುತ್ತಿದ್ದ, ಒಪ್ಪುತ್ತಿದ್ದ ರಂಗನಾಯಕಮ್ಮ ಹೆಸರು ಅನ್ವರ್ಥವಾಗುವಂತೆ ಬದುಕಿದವರು. ಅವರು ತಮ್ಮ ಎಂಬತ್ತನೇ ವಯಸ್ಸಿನಲ್ಲಿ ಜೂನ್ 9 ರಂದು ಅವರು ಇಹಲೋಕವನ್ನು ತ್ಯಜಿಸಿದರು. ಅವರ ಸ್ಮರಣಾರ್ಥ ಈ ಲೇಖನ.**

ಇವರ ಹೆಸರು ರಂಗನಾಯಕಮ್ಮ, ಅರ್ಧ ಶತಮಾನಕ್ಕೂ ಮಿಕ್ಕಿ ರಂಗದ ಮೇಲೆ ನಾಯಕಿಯಾಗಿ ಮೆರೆದ ಇವರಿಗೆ ಇದು ಅನ್ವರ್ಥನಾಮ. ಹುಟ್ಟಿದಾಗ ತಂದೆ ತಾಯಿ ಇಟ್ಟ ಹೆಸರಲ್ಲ. ಅವರು ನಿರ್ಮಲ ಎಂದು ಕರೆದಿದ್ದರು. ಎಂಟು ವರ್ಷದ ಬಾಲಕಿ ಸುಬ್ಬಯ್ಯ ನಾಯ್ಡು ಅವರ ನಾಟಕ ಕಂಪೆನಿಯನ್ನು ಬಾಲನಟಿ(ಟ)ಯಾಗಿ ಸೇರಿದರು. ಬಾಲಕಿಯ ಚುರುಕುತನ, ನಾಟಕದ ಬದ್ಧತೆ ಗಮನಿಸಿ ಸ್ವತಃ ಸುಬ್ಬಯ್ಯ ನಾಯ್ಡು ಅವರೇ, 'ನೀನು ರಂಗದ ಮೇಲೆ ನಾಯಕಿ ಆಗು. ಇನ್ನು ಮುಂದೆ ನಿನ್ನ ಹೆಸರು ರಂಗನಾಯಕಿ' ಎಂದು ಹರಸಿದರು. ಅವರ ಹಾರೈಕೆ ಸುಳ್ಳಾಗಲಿಲ್ಲ. ಕನ್ನಡದ ಹಲವು ಹೆಸರಾಂತ ನಾಟಕ ಕಂಪನಿಗಳು ಹಾಗೂ ಗ್ರಾಮೀಣ ರಂಗಭೂಮಿಯಲ್ಲಿ ಅರ್ಧ ಶತಮಾನಕ್ಕೂ ಮಿಕ್ಕಿದ ಕಾಲ ಎಲ್ಲ ಪಾತ್ರಗಳಲ್ಲೂ ಮನೋಜ್ಞವಾಗಿ ಅಭಿನಯಿಸಿ ನಿಜ ಅರ್ಥದ ರಂಗನಾಯಕಿಯೇ ಆದರು. ಹುಟ್ಟಿದಾಗಲೇ ತಂದೆ ತಾಯಿ ಆ ಹೆಸರು ಇಟ್ಟಿದ್ದರೇನೋ ಎಂಬಷ್ಟು ರಂಗನಾಯಕಿ ಪ್ರತೀತಿಯಾಯಿತು.

1940ರಲ್ಲಿ ಬೆಂಗಳೂರಿನಲ್ಲಿ ಟಿ.ಕೇಶವನ್ ಮತ್ತು ಶಾರದಮ್ಮ ದಂಪತಿಗೆ ಜನಿಸಿದ ನಿರ್ಮಲ, ರಂಗ ಪ್ರವೇಶಿಸಿದ್ದು ಸಂಗೀತದ ಮೂಲಕ. ತಂದೆಯೇ ಮೂಲ ಪ್ರೇರಣೆ. ಶಾಲೆಯಲ್ಲಿ ಸಂಗೀತ ಹೇಳಿಕೊಡುತ್ತಿದ್ದ ಕೇಶವನ್ ತಮ್ಮ ಪತ್ನಿ ತೀರಿ ಹೋದ ಮೇಲೆ ಮೂವರು ಮಕ್ಕಳನ್ನು ಕಟ್ಟಿಕೊಂಡು ನಾಟಕ ಕಂಪನಿಗೆ ನಡೆದು ಬಿಟ್ಟರು. 2-3 ವರ್ಷ ಕಳೆದ ಮೇಲೆ ಮಗನ ವಿದ್ಯಾಭ್ಯಾಸಕ್ಕೆ ಅನುವಾಗಲಿ ಎಂದು ಮತ್ತೆ ಬೆಂಗಳೂರಿಗೆ ವಾಪಸ್ ಬಂದರಾದರೂ, ರಂಗನಾಯಕಮ್ಮ ಮಾತ್ರ ಕಂಪನಿಯಲ್ಲೇ ಉಳಿದರು. ಮುಂದೆ ರಂಗನಾಯಕಮ್ಮನ ತಮ್ಮನೂ ನಾಟಕ ಕಂಪನಿಗೆ ಮರಳಿದರು. ಅವರು ಬೇರಾರೂ ಅಲ್ಲ, ಚಿತ್ರರಂಗದಲ್ಲಿ ಹೆಸರು ಮಾಡಿರುವ ಡಿಂಗ್ರಿ ನಾಗರಾಜ್.

**ನಾಯ್ಡು ಕಂಪನಿಯಲ್ಲಿ ಬಾಲಪಾತ್ರ:**

ಸುಬ್ಬಯ್ಯ ನಾಯ್ಡು ಕಂಪನಿಯ 'ಬೇಡರ ಕಣ್ಣಪ್ಪ' 'ಕೃಷ್ಣಲೀಲೆ', 'ಭೂಕೈಲಾಸ', 'ಜಗಜ್ಯೋತಿ ಬಸವೇಶ್ವರ', 'ಭಕ್ತ ಅಂಬರೀಶ' ಮುಂತಾದ ನಾಟಕಗಳಲ್ಲಿ ಬಾಲ ಪಾತ್ರಗಳಲ್ಲಿ ಅಭಿನಯಿಸಿದ ರಂಗನಾಯಕಮ್ಮ ಒಂದು ವರ್ಷದ ನಂತರ ಆ ಕಂಪನಿ ತೊರೆದು ಗುಬ್ಬಿ ವೀರಣ್ಣ ನಾಟಕ ಕಂಪನಿ ಸೇರಿದರು. ಮುಂದಿನ 25 ವರ್ಷಗಳ ಕಾಲ ಗುಬ್ಬಿ ವೀರಣ್ಣ ಕಂಪನಿಯೇ ಅವರ ಆಖಾಡ. ಬಾಲ ಪಾತ್ರಗಳಿಂದ ನಾಯಕಿ, ಖಳನಾಯಕಿ, ತಾಯಿ ಪಾತ್ರದವರೆಗೆ ಎಲ್ಲ ರೀತಿಯ ಪಾತ್ರಗಳಲ್ಲಿ ಅಭಿನಯಿಸಿ ಹೆಸರು ಮಾಡಿದರು. 'ಕುರುಕ್ಷೇತ್ರ', 'ಸಾಹುಕಾರ', 'ಕಾಲಚಕ್ರ, 'ಅಕ್ಷದಾರಿ', 'ಯಡೆಯೂರು ಸಿದ್ಧಲಿಂಗೇಶ್ವರ ಮಹಾತ್ಮೆ', 'ಸದಾರಮೆ', 'ಆದರ್ಶಪುತ್ರ', 'ಮಹಾತಾಯಿ' ಮುಂತಾದ ನಾಟಕಗಳಲ್ಲಿ ಯಾವುದೇ ಪಾತ್ರಗಳಿಗೆ ರಂಗನಾಯಕಮ್ಮ ಯಾವಾಗಲೂ ರೆಡಿ. ನಾಯಕಿಯ ಪಾತ್ರವೇ ಬೇಕೆಂದಿಲ್ಲ. ಅವರ ಖಾಸಗಿ ಬದುಕೂ ಅಷ್ಟೇ. ಎಂತಹದೇ ಸಂದರ್ಭಕ್ಕೆ ಹೊಂದಿಕೊಂಡು ಹೋಗುವ ಗುಣ. ಹಾಗಾಗಿಯೇ ತುಂಬ ಸರಳವಾದ ಜೀವನವನ್ನೇ ಅವರ ಬದುಕಿನುದ್ದಕ್ಕೂ ಕಾಪಾಡಿಕೊಂಡು ಬಂದರು.

ತಂದೆಯ ಗುರು ಸ್ಥಾನವನ್ನು ಗುಬ್ಬಿ ಕಂಪನಿಯಲ್ಲಿ ಪಿಟೀಲು ಶಂಕರಯ್ಯ ತುಂಬಿದ್ದರು. ಈ ಮಧ್ಯೆ ನಟ ಹಾಗೂ ಸಂಘಟಕ ಕೆ.ನಂಜಪ್ಪ ಅವರನ್ನು ರಂಗನಾಯಕಮ್ಮ ವರಿಸಿದರು. ನಟಿಯಾಗಿ ಹೆಸರು ಮಾಡಿದ ಹಲವರು ಕಾಣುವ ದೊಡ್ಡ ಕನಸು ಸ್ವಂತ ನಾಟಕ ಕಂಪನಿ ಮಾಡಬೇಕೆಂಬುದು. ಅದೇ ಆಸೆ ಹೊತ್ತು ಗುಬ್ಬಿ ಕಂಪನಿ ತೊರೆದು ಬಂದ ರಂಗನಾಯಕಮ್ಮ ಪತಿಯೊಂದಿಗೆ ಲೋಕನಾಥ ಮಿತ್ರ ಮಂಡಲಿ ಎಂಬ ನಾಟಕ ಕಂಪನಿ ಶುರು ಮಾಡೇಬಿಟ್ಟರು. 'ಮದುವೆ ಮಾರ್ಕೆಟ್', 'ರಾಜಸೂಯ ಯಾಗ', 'ಬಡುಗಡೆ' ಮುಂತಾದ ನಾಟಕಗಳ ಪ್ರದರ್ಶನದ ಮೂಲಕ ನಂಜನಗೂಡು, ಚಾಮರಾಜನಗರ, ಚನ್ನಪಟ್ಟಣ ಮುಂತಾದ ನಾಲ್ಕಾರು ಕಡೆ ಕ್ಯಾಂಪ್ ಮಾಡಿ ನಷ್ಟದೊಂದಿಗೆ ಎರಡೇ ವರ್ಷಕ್ಕೆ ಮುಚ್ಚಬೇಕಾಯಿತು.

ಆದರೆ 'ನಾಯಕಿ' 'ರಂಗ' ತೊರೆಯಲಿಲ್ಲ. ಪತಿ ನಂಜಪ್ಪ ಉತ್ತರ ಕರ್ನಾಟಕದ ನಾಟಕ ಕಂಪನಿಗಳ ಮ್ಯಾನೇಜರ್ ಆಗಿ ಹೋದರೆ, ಬೆಂಗಳೂರಿನಲ್ಲಿ ನೆಲೆ ನಿಂತ ರಂಗನಾಯಕಮ್ಮ ಹೊನ್ನಪ್ಪ ಭಾಗವತರ್, ಸುಳ್ಳದ (ಸುಳ್ಳ ಅಲ್ಲ) ದೇಸಾಯಿ, ಮಹಾಂತೇಶ ಶಾಸ್ತ್ರಿ, ಯೋಗನರಸಿಂಹ, ಮಹದೇವಸ್ವಾಮಿ, ಸ್ತ್ರೀ ನಾಟಕ ಮಂಡಳಿ, ಮಾಸ್ಟರ್ ಹಿರಣ್ಣಯ್ಯ ಮಿತ್ರ ಮಂಡಳಿಯಲ್ಲಿ ಉದ್ದಕ್ಕೂ ನಿವೃತ್ತಿ ವಯಸ್ಸನ್ನು ದಾಟಿದ ನಂತರವೂ ಅಭಿನಯಿಸುತ್ತಲೇ ಬಂದರು. ಈ ಮಧ್ಯೆ ಹಳ್ಳಿ ಪಟ್ಟಣಗಳ ಪೌರಾಣಿಕ ನಾಟಕಗಳಿಗೂ ಅವರಿಗೆ ಆಹ್ವಾನ ಇರುತ್ತಿತ್ತು. ಅವರ ಸುದೀರ್ಘ ರಂಗಸೇವೆಗೆ 1990ರಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, 2005ರಲ್ಲಿ ರಾಜ್ಯೋತ್ಸವ ಪ್ರಶಸ್ತಿ ಅವರನ್ನು ಅರಸಿ ಬಂದಿವೆ. ರಾಜ್ಯ ಸರ್ಕಾರ ಸ್ಥಾಪಿಸಿರುವ ಕನ್ನಡ





ರಂಗಭೂಮಿಯ ಅತ್ಯುನ್ನತ ಪ್ರಶಸ್ತಿಯಾದ ಗುಬ್ಬಿ ವೀರಣ್ಣ ಪ್ರಶಸ್ತಿ ಮುಡಿಗೇರಿದೆ. ಅಷ್ಟೇ ಪ್ರತಿಷ್ಠಿತವಾದ ಡಾ.ರಾಜಕುಮಾರ್ ಅವರ ಸಹೋದರ ಎಸ್.ಪಿ.ವರದರಾಜ್ ಹೆಸರಿನ ಪ್ರಶಸ್ತಿಯೂ ಅವರಿಗೆ ಲಭಿಸಿದೆ.

**ಜೇಬಲ್ಲಿದ್ದ ಅಷ್ಟೂ ದುಡ್ಡು ಕೊಟ್ಟ ವೀರಣ್ಣ...**

ರಂಗನಾಯಕಮ್ಮ ತಮ್ಮ ಸುದೀರ್ಘ ರಂಗ ಜೀವನದ ನಾಲ್ಕೈದು ಪ್ರಸಂಗಗಳನ್ನು ಆಗಾಗ ನೆನಪಿಸಿಕೊಳ್ಳುತ್ತಿರುತ್ತಾರೆ. ಅವರ ರಂಗವ್ಯಕ್ತಿತ್ವದ ವಿಶೇಷವೂ ಇದಾದ್ದರಿಂದ ಒಂದೆರಡು ಪ್ರಸಂಗಗಳನ್ನು ಇಲ್ಲಿ ಪ್ರಸ್ತಾಪಿಸಲೇಬೇಕು. ಗುಬ್ಬಿ ಕಂಪೆನಿಯ ತೀರ್ಥಹಳ್ಳಿ ಕ್ಯಾಂಪ್‌ನಲ್ಲಿ 'ದಶಾವತಾರ' ನಾಟಕಕ್ಕೆ ಭರ್ಜರಿ ಕಲೆಕ್ಷನ್. ಉತ್ತರೆ, ಚಂಚಲಕುಮಾರಿ ಪಾತ್ರಗಳನ್ನು ಮಾಡಿಕೊಂಡಿದ್ದ ರಂಗನಾಯಕಮ್ಮನಿಗೆ ಒಂದು ದಿನ ಏಕಾಏಕಿ ಪ್ರಹ್ಲಾದನ ಪಾತ್ರ ಮಾಡು ಎಂದರು. ಆ ಪಾತ್ರಕ್ಕೆ ನಾನು ದಪ್ಪ ಆಗ್ತೀನಿ ಎಂದೆ. ಕಯಾದು ಪಾತ್ರದ ಜಯಾನು ದಪ್ಪ, ಹಿರಣ್ಯಕಶಿಪುನೂ ದಪ್ಪ, ನೀನು ಮಾಡಿದರೆ ಏನು ತಪ್ಪು ಎಂದು ಅಪ್ಪಾವ್ರು (ಗುಬ್ಬಿ ವೀರಣ್ಣನವರನ್ನು ತಪ್ಪಿಯೂ ರಂಗನಾಯಕಮ್ಮ ಹೆಸರಿಡಿದು ಕರೆದವರಲ್ಲ) ಹುರಿದುಂಬಿಸಿದರು. 'ಹರಿಯಲ್ಲದಿನ್ನುಂಟೆ ಬೇರೆ ಪರದೈವ...' ಎಂದು ಹಾಡುತ್ತ ಪ್ರಹ್ಲಾದನಾಗಿ ಪ್ರವೇಶಿಸಿದೆ. ನಾಟಕ ಪೂರ್ತಿ ವೀಕ್ಷಿಸಿದ ವೀರಣ್ಣನವರು ನಾಟಕ ಮುಗಿದ ಮೇಲೆ ಭೇಷ್ ಮರಿ ಎಂದು ಪ್ರಶಂಸಿಸಿ ಜೇಬಿನಲ್ಲಿ ಎಷ್ಟಿತ್ತೋ ಅಷ್ಟು ದುಡ್ಡನ್ನು ತೆಗೆದು ಕೈಗೆ ಕೊಟ್ಟರು. (ಅದು ವೀರಣ್ಣನವರ ಶೈಲಿ).

ಗುಬ್ಬಿ ವೀರಣ್ಣ ಕಂಪನಿಯಲ್ಲಿ ರಂಗನಾಯಕಮ್ಮ ಇನ್ನೂ ಸೀತೆ ಪಾತ್ರದಲ್ಲಿ ಅಭಿನಯಿಸಿರಲಿಲ್ಲ. ಕೊಟ್ಟೂರು ಕ್ಯಾಂಪ್‌ನಲ್ಲಿ ಆ ಅವಕಾಶವೂ ಆಕಸ್ಮಿಕ ಎನ್ನುವಂತೆ ಬಂತು. ಆರಂಭದಲ್ಲಿ



downloaded from: www.kpscvaani.com



ಪರಿಸರ ಸಂರಕ್ಷಣೆಗೆ

# ಸಾರಜನಕದ ನಿರ್ವಹಣೆ

ನಾಗರತ್ನ ಜಿ. ಎಸ್



ಹೆಚ್ಚುತ್ತಿರುವ ಜನಸಂಖ್ಯೆಗೆ ಪೋಷಕಾಂಶಯುಕ್ತ ಆಹಾರ ಪೂರೈಸುವುದು ಸವಾಲಾಗಿದೆ. ಇಂತಹ ಸಂದರ್ಭದಲ್ಲಿ ಪರಿಸರದಲ್ಲಿನ ಸಾರಜನಕದ ನಿರ್ವಹಣೆ ಮೂಲಕ ಉತ್ತಮ ಫಲಸು ಪಡೆದು ಆಹಾರ ಅಭಾವದ ಸಮಸ್ಯೆ ನೀಗಿಸುವುದರ ಜೊತೆಗೆ ಪರಿಸರ ಮಾಲಿನ್ಯವನ್ನೂ ಕೂಡ ತಗ್ಗಿಸಬಹುದಾಗಿದೆ. ಆಮ್ಲಜನಕ ಜೀವನಾಧಾರ. ಆದರೆ ಸಾರಜನಕ ಕೂಡ ಅಷ್ಟೇ ಮುಖ್ಯ. ಅದರ ಸಮರ್ಥ ನಿರ್ವಹಣೆಗೆ ವಿಶ್ವದಾದ್ಯಂತ ಅನೇಕ ಸಂಶೋಧನೆಗಳು ನಡೆಯುತ್ತಿವೆ. ವಿಜ್ಞಾನಿಗಳ ಸಲಹೆಗಳನ್ನು ಕೃಷಿ ಚಟುವಟಿಕೆಯಲ್ಲಿ ಅಳವಡಿಸಿಕೊಳ್ಳುವ ಮೂಲಕ ಹೆಚ್ಚಿನ ಇಳುವರಿ ಪಡೆದು ಆದಾಯ ವೃದ್ಧಿಸಿಕೊಳ್ಳಬಹುದಾಗಿದೆ. ಸಾರಜನಕದ ಸಾರ ಸಮರ್ಥವಾಗಿ ಸೃಜಿಸಿ ಸಮತೋಲನ ಸಾಧಿಸಬಹುದಾಗಿದೆ.

ಉತ್ತಮ ಫಸಲಿಗೆ ಬೆಳೆ ಮತ್ತು ಮಣ್ಣಿನ ರಕ್ಷಣೆ ಅತಿ ಮುಖ್ಯ. ಫಲವತ್ತಾದ ಮಣ್ಣು ಮತ್ತು ಉತ್ತಮ ರಸಗೊಬ್ಬರದಲ್ಲಿ ಸಾರಜನಕ (ನೈಟ್ರೋಜನ್) ಮತ್ತು ಗಂಧಕದ (ಸಲ್ಫರ್) ಪಾತ್ರ ಪ್ರಧಾನವಾಗಿರುತ್ತದೆ. ಹಾಗೆಂದ ಮಾತ್ರಕ್ಕೆ ಬೇರೆ ಪೋಷಕಾಂಶಗಳ ಬಗ್ಗೆ ಹೆಚ್ಚು ಗಮನಹರಿಸಬೇಕಾಗಿಲ್ಲ ಎಂದೇನೂ ಅಲ್ಲ. ಇತರ ಅಂಶಗಳೂ ಅಗತ್ಯ. ಕೃಷಿಯಲ್ಲಿ ಇತರ ಪೋಷಕಾಂಶಗಳ ಮಹತ್ವವೂ ಹೆಚ್ಚು. ಸಾರಜನಕ ಜೀವಚಕ್ರದಲ್ಲಿ ಸಹ ಪ್ರಮುಖವಾಗಿದೆ. ಹೀಗಾಗಿ ಇದರ ಸಮರ್ಥ ಬಳಕೆ ಬಗೆಗೆ ಜಗತ್ತಿನ ಹಲವೆಡೆ ಅಧ್ಯಯನ ನಡೆದಿದೆ.

ಸಸ್ಯಗಳಿಗೆ ಅಗತ್ಯ ಪೋಷಕಾಂಶದ ಪೈಕಿ ಎನ್.ಪಿ.ಕೆ ಅತಿ ಮುಖ್ಯ. ಎನ್ ಎಂದರೆ ನೈಟ್ರೋಜೆನ್, ಪಿ ಎಂದರೆ ಫಾಸ್ಪರಸ್ ಮತ್ತು ಕೆ ಎಂದರೆ ಪೊಟ್ಯಾಷಿಯಂ. ಜರ್ಮನ್ ವಿಜ್ಞಾನಿ ಜಸ್ಟಸ್ ವೋನ್ ಲೀಬಿಗ್ ಆರೋಗ್ಯವಂತ ಗಿಡದ ಬೆಳವಣಿಗೆಯನ್ನು ಅಳೆಯಲು ಇವು ಪ್ರಮುಖ ಅಂಶಗಳಾಗಿವೆ ಎಂಬ ಸೂತ್ರ ನೀಡಿದ್ದರು. ಹಾಗಾಗಿ ಎನ್‌ಪಿಕೆ ರಸಗೊಬ್ಬರ ಮಾರುಕಟ್ಟೆಯಲ್ಲಿ ಹೆಚ್ಚಾಗಿ ಸಿಗುತ್ತಿತ್ತು. ಎಲೆಗಳ ಆರೋಗ್ಯಕ್ಕೆ ಸಾರಜನಕ, ಆರೋಗ್ಯಕರ ಬೇರು ಮತ್ತು ಹೂವಿಗೆ ರಂಜಕ, ಒಟ್ಟಾರೆ ಗಿಡದ ಆರೋಗ್ಯಕ್ಕೆ ಪೊಟ್ಯಾಶ್ ಅಗತ್ಯ. ಆದರೆ ಈ ಸೂತ್ರವನ್ನು ಸರಿಯಾಗಿ ಅರ್ಥೈಸದೇ ಎನ್‌ಪಿಕೆ ರಸಗೊಬ್ಬರದ ಯಥೇಚ್ಛ ಬಳಕೆಯಿಂದಾಗಿ ಸಮಸ್ಯೆಗಳು ಉಂಟಾಗಿವೆ. ಹೀಗಾಗಿ ಸಾರಜನಕ, ಗಂಧಕ, ರಂಜಕ ಹೀಗೆ ಅಗತ್ಯ ಪೋಷಕಾಂಶಗಳನ್ನು ಎಷ್ಟು ನೀಡಬೇಕು ಮತ್ತು ಹೇಗೆ ನೀಡಬೇಕು ಎಂಬ ಬಗ್ಗೆ ತಿಳಿದು ಅದರಂತೆ ಅವುಗಳನ್ನು ಪೂರೈಸಿದರೆ ಉತ್ತಮ ಫಸಲು ಪಡೆದು ಮಣ್ಣಿನ ಫಲವತ್ತತೆ ಕಾಪಾಡಬಹುದು. ಜೊತೆಗೆ ಪರಿಸರ ಮಾಲಿನ್ಯವನ್ನೂ ಕೂಡ ಕಡಿಮೆ ಮಾಡಬಹುದು.

ಸಸ್ಯಗಳ ಪೋಷಕಾಂಶಗಳ ಪೈಕಿ ಸಾರಜನಕ ಅತಿ ಮುಖ್ಯ. ಸಾರಜನಕವನ್ನು ಜಡ ಅನಿಲ ಎಂದೇ ಕರೆಯುತ್ತಾರೆ. ಅದು ಜಡ ಅನಿಲವಾದರೂ, ಮಣ್ಣಿನಲ್ಲಿ ಸಾರಜನಕದ ಕೊರತೆ ಇದ್ದರೆ ಉತ್ತಮ ಫಸಲು ಸಿಗುವುದಿಲ್ಲ. ಅನಿಲವೇನೋ ಜಡ, ಆದರೆ ಅದು ಬೆಳೆಗೆ ಚೇತನ ನೀಡುತ್ತದೆ. ಆಮ್ಲಜನಕ ಜೀವನಾಧಾರವಾದರೂ, ಅದರ ತೀವ್ರತೆ ಹೆಚ್ಚಾದರೆ ಅಪಾಯಕಾರಿ. ಅಂತಹ ಸಂದರ್ಭಗಳಲ್ಲಿ ಆಮ್ಲಜನಕದ ತೀವ್ರತೆ ಕಡಿಮೆ ಮಾಡಿ ಜೀವಿಗಳಿಗೆ ಉಸಿರಾಡಲು ಅನುಕೂಲ ಮಾಡಿಕೊಡುವ ಅನಿಲ ಸಾರಜನಕ.

ಸಾರಜನಕದ ಕೊರತೆ ಇದ್ದರೆ ಹೂಗಳ ಸಂಖ್ಯೆ ಕಡಿಮೆಯಾಗುತ್ತದೆ. ಕೆಳಭಾಗದ ಎಲೆಗಳು ತುದಿಯಿಂದ ತಳಭಾಗಕ್ಕೆ ತಿಳಿ ಹಸಿರು ಅಥವಾ ಹಳದಿ ಬಣ್ಣಕ್ಕೆ ತಿರುಗಿ ನಂತರ ಒಣಗಿ ಉದುರುತ್ತವೆ. ಎಲೆ ವರ್ಣ ಫಲಕಕ್ಕೆ ಎಲೆಗಳನ್ನು ಹೋಲಿಸಿ ಸಾರಜನಕ ನಿರ್ವಹಣೆ ಮಾಡಬಹುದು. ಭತ್ತ, ಗೋಧಿ ಬೆಳೆಗಳ ಎಲೆಗಳ ನಿರ್ವಹಣೆಗೆ ಈ ಫಲಕವನ್ನು ಬಳಸಲಾಗುತ್ತಿದೆ. ಇತರ ಬೆಳೆಗಳಿಗೂ ಇದನ್ನು ಬಳಸುವ ಬಗ್ಗೆ ವಿಜ್ಞಾನಿಗಳು ಸಂಶೋಧನೆ ನಡೆಸುತ್ತಿದ್ದಾರೆ.

ಭೂಮಿ ಮತ್ತು ವಾತಾವರಣಕ್ಕೆ ತಕ್ಕಂತೆ ಸಾರಜನಕ ಅಗತ್ಯವಿರುವ ಪರಿಮಾಣ ಬದಲಾಗುತ್ತದೆ. ಒಂದೇ ಪ್ರದೇಶದಲ್ಲಿನ ಭೂಮಿಯೇ ಆದರೂ ಅಗತ್ಯವಿರುವ ಸಾರಜನಕದ ಪ್ರಮಾಣ ಭಿನ್ನವಾಗಿರುತ್ತದೆ. ಬೆಳೆದ ಬೆಳೆ, ಸೂಕ್ಷ್ಮಾಣು ಚಟುವಟಿಕೆ, ಬೆಳೆಗೆ ತಕ್ಕ ರಸಗೊಬ್ಬರ ಮೊದಲಾದವು ಒಂದೇ ಪ್ರದೇಶದ ಭೂಮಿಗೆ ಬೇಕಾಗುವ ಸಾರಜನಕ ಪ್ರಮಾಣವನ್ನು ನಿರ್ಧರಿಸುತ್ತವೆ. ಹೀಗಾಗಿ ಒಂದೇ ಎಕರೆ ಭೂಮಿಯಲ್ಲಿನ ಮಣ್ಣಿಗೂ ಕೂಡ ಬೇರೆ ಬೇರೆ ಪ್ರಮಾಣದ ಪೋಷಕಾಂಶಗಳನ್ನು ನೀಡಬೇಕಾಗುತ್ತದೆ.

ಇನ್ನು ಸಾರಜನಕ ನೀಡುವ ಪ್ರಮಾಣ ಕೂಡ ಬೆಳೆಯಿಂದ ಬೆಳೆಗೆ, ಋತುವಿನಿಂದ ಋತುವಿಗೆ ಭಿನ್ನವಾಗಿರುತ್ತದೆ. ಉದಾಹರಣೆಗೆ ಗೋಧಿ ಬೆಳೆ ವಸಂತ ಮಾಸದಲ್ಲಿ ಸಾರಜನಕವನ್ನು ಸಮರ್ಪಕವಾಗಿ ಹೀರಿಕೊಂಡರೆ, ಜೋಳಕ್ಕೆ ಬೇಸಿಗೆ ಮಧ್ಯಭಾಗದಲ್ಲಿ ಹೆಚ್ಚು ಸಾರಜನಕ ಅಗತ್ಯವಿರುತ್ತದೆ. ಇನ್ನು ನೀರುಣಿಸಿದಾಗ ಅದರ ಮೂಲಕ ಸಾರಜನಕ ಹೊರಹೋಗದಂತೆ ಕೂಡ ಎಚ್ಚರಿಕೆ ವಹಿಸಬೇಕಾಗುತ್ತದೆ.

ಮಣ್ಣು ಸಾರಜನಕವನ್ನು ಹೇಗೆ ಬಳಸಿಕೊಳ್ಳುತ್ತದೆ ಎಂಬುದನ್ನು ಮೊದಲು ತಿಳಿಯೋಣ. ಮಣ್ಣಿನಲ್ಲಿರುವ ಶೇಕಡ 95 ರಷ್ಟು ಸಾರಜನಕ ಜೈವಿಕ ರೂಪದಲ್ಲಿದ್ದು ಅದನ್ನು ಗಿಡಗಳು ಹೀರಿಕೊಳ್ಳಲು ಸಾಧ್ಯವಾಗುವುದಿಲ್ಲ. ಉಷ್ಣಾಂಶ, ತೇವಾಂಶ ಮತ್ತು ಆಮ್ಲಜನಕದ ಪ್ರಮಾಣ ಹೆಚ್ಚಿದ್ದಾಗ ಮಣ್ಣಿನಲ್ಲಿನ ಸೂಕ್ಷ್ಮಾಣುಜೀವಿಗಳು ಈ ಜೈವಿಕ ರೂಪದ ಸಾರಜನಕ ಸಸ್ಯಗಳ ಬಳಕೆಯ ರೂಪಕ್ಕೆ ತರಲು ನೆರವಾಗುತ್ತವೆ. ಅಂದರೆ, ಖನಿಜೀಕರಣ ಪ್ರಕ್ರಿಯೆ ಸಾಧ್ಯವಾಗುತ್ತದೆ. ಖನಿಜೀಕರಣ ಪ್ರಕ್ರಿಯೆಗೆ ಒಳಪಟ್ಟು ಲಭ್ಯವಾಗುವ ಸಾರಜನಕವನ್ನು ಗಿಡಮರಗಳು ಬೇರುಗಳಿಂದ ಹೀರಿಕೊಳ್ಳುತ್ತವೆ. ಆರೋಗ್ಯವಂತ ಮಣ್ಣಿನಲ್ಲಿ ಜೊತೆ ಜೊತೆಗೆ ಖನಿಜೀಕರಣದ ವಿರುದ್ಧ ಪ್ರಕ್ರಿಯೆಯೂ ನಡೆಯುತ್ತದೆ. ಅಂದರೆ ಹೆಚ್ಚು ಇಂಗಾಲ ಮತ್ತು ಕಡಿಮೆ ಸಾರಜನಕದ ಅಂಶಗಳುಳ್ಳ ಬೆಳೆ ಉಳಿಕೆ ಇದ್ದಲ್ಲಿ ಅದರಲ್ಲಿನ ಅತ್ಯಲ್ಪ ಸಾರಜನಕ ಸಂಪೂರ್ಣವಾಗಿ ಇಲ್ಲವಾಗಿ ಮತ್ತೆ ಖನಿಜೀಕರಣ ಪ್ರಕ್ರಿಯೆ ನಡೆಯುತ್ತದೆ. ಇದರಿಂದಾಗಿ ಮತ್ತೆ ಗಿಡಗಳು ಬಳಸಿಕೊಳ್ಳಬಹುದಾದ ಸಾರಜನಕ ಸಿಗುತ್ತದೆ.

ಸಾರಜನಕವನ್ನು ಹೀರಿಕೊಂಡ ಸಸ್ಯಗಳು ಅದನ್ನು ಪ್ರೊಟೀನ್ ನಿರ್ಮಾಣದ ಮೂಲವಸ್ತುವಾದ ಅಮೈನೋ ಆ್ಯಸಿಡ್ ಆಗಿ ಪರಿವರ್ತಿಸುತ್ತದೆ. ಇದು ಕೋಶ ವಿಭಾಗದಲ್ಲಿ, ಕಿಣ್ವಗಳ ಉತ್ಪತ್ತಿಯಲ್ಲಿ ಸಹಕರಿಸುತ್ತದೆ. ಹೀಗೆ ಮಣ್ಣು ಮತ್ತು ಸಸ್ಯ ಎರಡರಲ್ಲೂ ಸಾರಜನಕದ ಅಂಶ ಅತ್ಯಗತ್ಯ.

ಸಸ್ಯದ ಮೇಲೆ ಅವಲಂಬಿತವಾಗಿರುವ ಜೀವಿಗಳು ಅದನ್ನು ನೇರವಾಗಿ ಅಥವಾ ಪರೋಕ್ಷವಾಗಿ ಪಡೆಯುತ್ತವೆ. ನಂತರ ಜೀವಿಗಳಿಂದ ಹೊರಬರುವ ತ್ಯಾಜ್ಯದಲ್ಲೂ ಸಾರಜನಕದ ಅಂಶವಿದ್ದು ಅವು ಭೂಮಿಯನ್ನೇ ಸೇರುತ್ತದೆ. ಮತ್ತೆ ಪ್ರಕ್ರಿಯೆ ಪುನರಾವೃತ್ತಿಯಾಗುತ್ತದೆ. ಇಡೀ ಜೀವಚಕ್ರದಲ್ಲಿ ಸಾರಜನಕ ಮಹತ್ತರ ಪಾತ್ರ ವಹಿಸುತ್ತದೆ.

ಮಣ್ಣಿನ ಫಲವತ್ತತೆ ಕಾಪಾಡುವಲ್ಲಿ ಅದರಲ್ಲಿನ ಸೂಕ್ಷ್ಮಾಣು ಜೀವಿಗಳ ಚಟುವಟಿಕೆಯ ಪಾತ್ರ ಪ್ರಮುಖವಾಗಿರುತ್ತದೆ. ಮಣ್ಣಿನಲ್ಲಿನ ಸೂಕ್ಷ್ಮಜೀವಿಗಳ ಚಟುವಟಿಕೆ ನಂತರ ಅದರಲ್ಲಿರುವ ಸಾರಜನಕದ ಪ್ರಮಾಣ ತಿಳಿದು ಹೆಚ್ಚುವರಿ ಸಾರಜನಕ ಪೂರೈಸಬೇಕು. ಕೆಲವೊಮ್ಮೆ ಸೂಕ್ಷ್ಮಾಣುಜೀವಿಗಳ ಚಟುವಟಿಕೆಯ ಪರಿಣಾಮವಾಗಿ ಮಣ್ಣಿನಲ್ಲಿನ ಸಾರಜನಕ ಅಂಶ ಸಂಪೂರ್ಣವಾಗಿ ಕಾಣೆಯಾಗುತ್ತದೆ. ಇನ್ನು ಕೆಲವೊಮ್ಮೆ ವಾತಾವರಣದಲ್ಲಿ ಆಮ್ಲಜನಕದ ಕೊರತೆ ಉಂಟಾದರೆ ನೈಟ್ರೈಟ್‌ನಲ್ಲಿನ ಆಮ್ಲಜನಕವನ್ನು ಈ ಜೀವಿಗಳು ಬಳಸಿಕೊಳ್ಳುತ್ತವೆ. ಇದರಿಂದ ಕೂಡ ಮಣ್ಣಿನಲ್ಲಿನ ಬಳಕೆ ಯೋಗ್ಯ ಸಾರಜನಕದ ಪ್ರಮಾಣ ಕಡಿಮೆಯಾಗುತ್ತದೆ.

ಸಾರಜನಕವನ್ನು ಪ್ರಮುಖವಾಗಿ ಯೂರಿಯಾ ಗೊಬ್ಬರದ ರೂಪದಲ್ಲಿ ನೀಡಲಾಗುತ್ತದೆ. ಆದರೆ ಮಣ್ಣಿನ ಮೇಲ್ಪದರದಲ್ಲಿ ಸಿಂಪಡಿಸುವ ಯೂರಿಯಾ ಕೂಡ ಗಾಳಿಯಲ್ಲಿ ಆವಿಯಾಗಿ ಹೋಗುತ್ತದೆ. ಇನ್ನು ಕೆಲವೊಮ್ಮೆ ನೀರಿನೊಂದಿಗೆ ಹರಿದು ಹೋಗುತ್ತದೆ. ಹೀಗಾಗಿ ಯೂರಿಯಾವನ್ನು ಒಮ್ಮೆಲೇ ಸಿಂಪಡಿಸದೇ ಅಗತ್ಯಕ್ಕೆ ತಕ್ಕಂತೆ ಕಾಲಕಾಲಕ್ಕೆ ನೀಡಬೇಕು. ಇದನ್ನು ಮಣ್ಣಿನ ಆಳದಲ್ಲಿರಿಸಬಹುದು ಅಥವಾ ತೇವಯುಕ್ತ ಮಣ್ಣಿನ ಜೊತೆ ಮಿಶ್ರಣ ಮಾಡಬಹುದು. ಬೇವು ಲೇಪಿತ ಯೂರಿಯಾ ಸಿಂಪಡಿಸುವುದರಿಂದ ಸಾರಜನಕ ಹಂತ ಹಂತವಾಗಿ ಬಿಡುಗಡೆಯಾಗಿ ದೀರ್ಘಕಾಲದವರೆಗೆ ಮಣ್ಣಿನಲ್ಲಿ ಸಾರಜನಕ ದೊರೆಯುತ್ತದೆ. ಬೇವು ಲೇಪಿತ ಯೂರಿಯಾ ಬಳಕೆಯಿಂದ ಇಳುವರಿ ಹೆಚ್ಚಾಗಿ ದೊರೆತಿರುವುದು ಭಾರತೀಯ ಕೃಷಿ ತೋಟಗಾರಿಕಾ ಸಂಸ್ಥೆ ನಡೆಸಿರುವ ಅಧ್ಯಯನಗಳಿಂದ ಸಾಬೀತಾಗಿದೆ.





downloaded from: www.kpscvaani.com

ಕೆಲವು ಸಸ್ಯಗಳು ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಅಗತ್ಯ ಪೋಷಕಾಂಶಗಳನ್ನು ಹುಡುಕುತ್ತವೆ. ಹಾಗೆಯೇ ಸಾರಜನಕದ ಪ್ರಮಾಣ ಕಡಿಮೆ ಆದಲ್ಲಿ ಅವುಗಳು ಬೇರುಗಳನ್ನು ವಿಸ್ತರಿಸುವ ಮೂಲಕ ಪೋಷಕಾಂಶ ಹುಡುಕುವ ಪ್ರಯತ್ನ ಮಾಡುತ್ತವೆ. ಸಾರಜನಕ ಅರಸಿ ಮರಗಿಡಗಳ ಬೇರುಗಳು ಇನ್ನೂ ಆಳಕ್ಕಿಳಿದು ವಿಸ್ತರಿಸಿ ಪಕ್ಕದ ಸಸ್ಯಗಳಿಗೆ ಅಪಾಯ ತಂದೊಡ್ಡುವ ಸಾಧ್ಯತೆಯೂ ಇದೆ. ಗಿಡ ಬೇರೂರಬೇಕು ಎಂಬುದೇನೋ ನಿಜ. ಆದರೆ ಹೀಗೆ ಆಕ್ರಮಿಸಿಕೊಳ್ಳುವುದು ಅಪಾಯಕಾರಿ. ಹೀಗಾದಲ್ಲಿ ಮಣ್ಣಿನಲ್ಲಿರುವ ಇತರ ಪೋಷಕಾಂಶಗಳಿಗೂ ಹಾನಿಯಾಗುವ ಸಾಧ್ಯತೆ ಇದೆ. ಇನ್ನು ಕೆಲವೊಮ್ಮೆ ಈ ಸಸ್ಯಗಳು ಮೇಲ್ಮುಖವಾಗಿ ಸಾರಜನಕ ಅರಸುತ್ತವೆ. ಅಂದರೆ ಎಲೆಗಳಲ್ಲಿನ ಸಾರಜನಕ ಸೆಳೆದು ಎಲೆಗಳು ಹಳದಿ ಬಣ್ಣಕ್ಕೆ ತಿರುಗುತ್ತದೆ. ಹಾಗಾಗಿ ಬೇರುಗಳಿಗೆ ಸಾರಜನಕ ಸುಲಭವಾಗಿ ಲಭಿಸುವಂತೆ ಅದನ್ನು ಸಿಂಪಡಿಸಬೇಕಿದೆ.

ಆದರೆ ಸಾರಜನಕ ಅತಿಯಾದರೂ ಅಪಾಯಕಾರಿ. ಸಾರಜನಕದ ಯಥೇಚ್ಛ ಬಳಕೆಯಿಂದ ಗಿಡಗಳು ದಟ್ಟವಾಗಿ ಬೆಳೆಯುತ್ತವೆ ಎಂದು ಅದನ್ನು ಹೆಚ್ಚಾಗಿ ಸಿಂಪಡಿಸಿದ್ದೇ ಆದಲ್ಲಿ ಕೀಟಗಳ ಕಾಟ ಹೆಚ್ಚಾಗುತ್ತದೆ. ಕೀಟಗಳಿಗೂ ಸಾರಜನಕದಿಂದ ಪರೋಕ್ಷವಾಗಿ ಉತ್ತಮ ಆಹಾರ ಲಭಿಸುತ್ತದೆ. ಆದರೆ ಕೀಟಗಳ ಹಾವಳಿಯಿಂದಾಗಿ ಹೆಚ್ಚು ಇಳುವರಿ ಪಡೆದರೂ ರೈತನಿಗೆ ನಷ್ಟವಾಗುತ್ತದೆ. ಸಸ್ಯ ದಟ್ಟವಾಗಿ ಬೆಳೆದರೆ ಅದರ ಕಾಂಡ, ಬೇರುಗಳು ಮೃದುವಾಗಿ ಕೀಟಗಳ ಉತ್ಪತ್ತಿಗೆ ಅನುಕೂಲಕರವಾಗುತ್ತವೆ. ಹೀಗಾಗಿ ಅನಗತ್ಯವಾಗಿ ಗಿಡಗಳು ದಟ್ಟವಾಗಿ ಬೆಳೆಯದಂತೆ ಎಚ್ಚರಿಕೆ ವಹಿಸಬೇಕು.

ಅತಿಯಾದ ಸಾರಜನಕದ ಬಳಕೆಯಿಂದಾಗಿ ಅದರಲ್ಲಿನ ನೈಟ್ರೈಟ್ ಅಂಶ ಭೂಮಿಗಿಳಿದು ಜಲಮಾಲಿನ್ಯವಾಗುತ್ತದೆ. ಇದರಿಂದ ಭೂಮಿಯ ಮೇಲಿನ ಜೀವಿಗಳಿಗೆ, ಜಲಚರಗಳಿಗೂ ತೊಂದರೆಯಾಗುತ್ತದೆ. ಪರೋಕ್ಷ ಜೀವನಾಧಾರವಾದ ಸಾರಜನಕವೇ ಜೀವ ಹಾನಿಗೆ ಕಾರಣವಾಗಬಲ್ಲದು. ಹೀಗಾಗಿ ಈ ಸಾರಜನಕದ ಅಂಶ ಭೂಮಿಗಿಳಿಯದಂತೆ ತಡೆಯಲು ಮುಂಜಾಗ್ರತಾ ಕ್ರಮ ವಹಿಸಬೇಕು. ಮರಳು, ಜಲ್ಲಿಕಲ್ಲು ಸಹಿತ ಮಣ್ಣಿದ್ದಲ್ಲಿ ಸಾರಜನಕ ನೀಡುವ ಮುನ್ನ ಅತಿ ಎಚ್ಚರಿಕೆ ವಹಿಸಿ ಕನಿಷ್ಠ ಅಗತ್ಯ ಪ್ರಮಾಣವನ್ನಷ್ಟೇ ಒದಗಿಸಬೇಕು. ಮಣ್ಣಿನಲ್ಲಿ ಹೆಚ್ಚು ಸಾರಜನಕದ ಅಂಶವಿದ್ದಲ್ಲಿ ಯಾವ ಸಸ್ಯ ಹೆಚ್ಚಾಗಿ ಸುಲಭವಾಗಿ ಸಾರಜನಕವನ್ನು ಹೀರಿಕೊಳ್ಳುವುದೋ ಅಂತಹ ಗಿಡವನ್ನು ಆ ಮಣ್ಣಿನಲ್ಲಿ ನೆಡಬೇಕು.

ಬೆಳೆ ನಿರ್ವಹಣೆಯಲ್ಲಿ ಗಂಧಕ ಕೂಡ ಪ್ರಮುಖ ಅಂಶವಾಗಿದೆ. ಆದರೆ ವಿಶ್ವಾದ್ಯಂತ ಅನೇಕ ಬಿತ್ತನೆ ಜಾಗಗಳಲ್ಲಿ ಮಣ್ಣಿನಲ್ಲಿ ಅಗತ್ಯ ಗಂಧಕದ ಅಂಶಗಳು ಇಲ್ಲವಾಗಿವೆ. ಎಲೆಗಳ ಹಸಿರು ವರ್ಣಕ್ಕೆ ಕಾರಣ 'ಕ್ಲೋರೋಫಿಲ್'. ಸೂರ್ಯನ ಬೆಳಕಿನಲ್ಲಿ ದ್ಯುತಿಸಂಶ್ಲೇಷಣೆ ಪ್ರಕ್ರಿಯೆಗೆ ಇದು ಬೇಕೇ ಬೇಕು. ಅಗತ್ಯ ಪ್ರಮಾಣದ ಗಂಧಕ ಇದ್ದಲ್ಲಿ ಮಾತ್ರ ಗಿಡಗಳು ತಮ್ಮ ಸಂಪೂರ್ಣ ಸಾಮರ್ಥ್ಯದ ಕ್ಲೋರೋಫಿಲ್ ಮತ್ತು ಪ್ರೊಟೀನ್ ಅಂಶ ಪಡೆಯಲು ಸಾಧ್ಯ. ಮಣ್ಣಿನಲ್ಲಿ ಗಂಧಕದ ಕೊರತೆ ಇದ್ದಲ್ಲಿ ಇತರೆ ಎಲ್ಲಾ ಅಗತ್ಯ ಪೋಷಕಾಂಶಗಳನ್ನು ನೀಡಿದರೂ ಕೂಡ ಉತ್ತಮ ಇಳುವರಿ ಪಡೆಯಲು ಸಾಧ್ಯವಿಲ್ಲ. ಗಂಧಕ ಪ್ರಮುಖವಾಗಿ ಮಣ್ಣಿನ ಸಾವಯವ ಪದಾರ್ಥದಲ್ಲಿರುತ್ತದೆ. ಗಂಧಕ ಮಣ್ಣಿನಲ್ಲಿ ಚಲಿಸಬಲ್ಲದು. ಅದು ನೀರಿನೊಂದಿಗೆ ಸುಲಭವಾಗಿ ಕೆಳಕ್ಕಿಳಿಯುತ್ತದೆ. ಸಾರಜನಕ ಹೀರಿಕೊಳ್ಳುವ ಮಣ್ಣಿನ ಸಾಮರ್ಥ್ಯ ಗಂಧಕದ ಮೂಲಗಳ ಮೇಲೂ ಅವಲಂಬಿತವಾಗಿದೆ.

ಮಣ್ಣಿನಲ್ಲಿನ ಸೂಕ್ಷ್ಮಾಣು ಜೀವಿಗಳ ಚಟುವಟಿಕೆಯನ್ನು ರಂಜಕ ಹೆಚ್ಚಿಸುತ್ತದೆ. ಜಿಪ್ಸಂ ಬಳಕೆಯಿಂದ ಚಟುವಟಿಕೆ ಕುಗ್ಗುತ್ತದೆ ಎಂಬುದು ಸಂಶೋಧನೆಗಳಿಂದ ತಿಳಿದು ಬಂದಿದೆ. ಹೀಗೆ ಈ ಪೋಷಕಾಂಶಗಳು ಪರಸ್ಪರ ಪೂರಕವಾಗಿವೆ.

ಸ್ಥಳೀಯವಾಗಿ ಲಭಿಸುವ ಬಗೆ ಬಗೆಯ ನೈಸರ್ಗಿಕ ವಸ್ತುಗಳನ್ನು ಬಳಸಿ ಅಲ್ಪ ವೆಚ್ಚದಲ್ಲಿ ಬೇಸಾಯ ಮಾಡಿ ವಿಷಮುಕ್ತ ಆಹಾರ ಬೆಳೆಯಬಹುದಾಗಿದೆ. ಇದರಿಂದ ಮಣ್ಣಿನ ಆರೋಗ್ಯ ಕಾಯ್ದುಕೊಳ್ಳುವ ಜೊತೆಗೆ ದೇಹದ ಆರೋಗ್ಯ ಕಾಪಾಡಿಕೊಳ್ಳಬಹುದು.

ಬಿತ್ತನೆಗೆ ಮೊದಲು ಮಣ್ಣು ಪರೀಕ್ಷೆ ಮಾಡಿಸಿ ಅಗತ್ಯ ರಸಗೊಬ್ಬರ ಬಳಸಬೇಕು. ಸೂಕ್ತ ಸಮಯದಲ್ಲಿ ಅಗತ್ಯ ಪೋಷಕಾಂಶ ನೀಡಿದರೆ ಉತ್ತಮ ಇಳುವರಿ ಪಡೆಯಲು ಸಾಧ್ಯ. ಹೆಚ್ಚು ಇಳುವರಿ ಸಿಗಲಿ ಎಂದು ಹೆಚ್ಚು ಪೋಷಕಾಂಶ ನೀಡಿದರೆ ಅದು ವ್ಯರ್ಥವಾಗುವುದರ ಜೊತೆಗೆ ಅಪಾಯಕಾರಿಯೂ ಆಗಿ ಪರಿಣಮಿಸುವ ಸಾಧ್ಯತೆಯೂ ಇದೆ. ಪ್ರತಿಯೊಂದು ಸಸಿಗೂ ಭಿನ್ನ ಪೋಷಕಾಂಶಗಳು ಅಗತ್ಯವಿದ್ದು ಅದಕ್ಕೆ ತಕ್ಕಂತೆ ಅವುಗಳನ್ನು ನೀಡಬೇಕಿದೆ.

ವಾತಾವರಣದಲ್ಲಿ ಸಾರಜನಕದ ಅಂಶ ಹೆಚ್ಚಾದಲ್ಲಿ ಓಜೋನ್ ಪದರಕ್ಕೆ ಅಪಾಯವಾಗುತ್ತದೆ. ಇದು ಬೆಳೆಯ ಮೇಲೆ ಮಾತ್ರವಲ್ಲ ಇಡೀ ವ್ಯವಸ್ಥೆಯ ಮೇಲೇ ನಕಾರಾತ್ಮಕ ಪರಿಣಾಮ ಬೀರುತ್ತದೆ. ಹೀಗಾಗಿ ವಾಯುವಿನಲ್ಲಿನ ಸಾರಜನಕದ ಪ್ರಮಾಣ ಏರುಪೇರಾಗದಂತೆಯೂ ನೋಡಿಕೊಳ್ಳಬೇಕು.

ಇತ್ತೀಚೆಗೆ 2019ರ ಮಾರ್ಚ್‌ನಲ್ಲಿ ನಡೆದ ವಿಶ್ವ ಸಂಸ್ಥೆ ಪರಿಸರ ಸಮಿತಿ (ಯುಎನ್‌ಇಎ) ಯ ನಾಲ್ಕನೇ ಶೃಂಗಸಭೆಯಲ್ಲಿ ಏಕ ಬಳಕೆಯ ಪ್ಲಾಸ್ಟಿಕ್ ಮತ್ತು ಸುಸ್ಥಿರ ಸಾರಜನಕ ನಿರ್ವಹಣೆ ಸಂಬಂಧದ ಭಾರತದ ಎರಡು ನಿರ್ಣಯಗಳಿಗೆ ಮನ್ನಣೆ ನೀಡಲಾಗಿದೆ. ಜಾಗತಿಕ ಮಟ್ಟದಲ್ಲಿ ಸಾರಜನಕ ಬಳಕೆಯ ಸಾಮರ್ಥ್ಯ ಕಡಿಮೆ ಇದೆ. ಇದರಿಂದಾಗಿ ಪ್ರತಿಕ್ರಿಯಾತ್ಮಕ ಸಾರಜನಕದ ಮಾಲಿನ್ಯ ಹೆಚ್ಚಾಗಿದೆ. ಇದು ಮಾನವನ ಆರೋಗ್ಯದ ಮೇಲೆ ಪರಿಣಾಮ ಬೀರುವುದರ ಜೊತೆಗೆ ಪರಿಸರ ವ್ಯವಸ್ಥೆಗೆ ಹಾನಿ ತಂದೊಡ್ಡಿದೆ ಎಂದು ಭಾರತ ಪ್ರತಿಪಾದಿಸಿದೆ. ಇದಕ್ಕೆ ಯುಎನ್‌ಇಎ ಸಹಮತ ನೀಡಿದೆ. ಸಾರಜನಕದ ತುರ್ತು ನಿರ್ವಹಣೆ ಅಗತ್ಯವಾಗಿದೆ ಎಂಬುದು ವಿಶ್ವಸಂಸ್ಥೆಯಲ್ಲೂ ಪ್ರತಿಧ್ವನಿತವಾಗಿದೆ.

ಹೆಚ್ಚುತ್ತಿರುವ ಜನಸಂಖ್ಯೆಗೆ ಆಹಾರ ಒದಗಿಸುವುದು ಸವಾಲಾಗಿದೆ. ಆಧುನೀಕರಣದಿಂದಾಗಿ ಕೃಷಿ ಭೂಮಿ ಕಡಿಮೆಯಾಗಿ ಆಹಾರ ಉತ್ಪಾದನೆ ಪ್ರಮಾಣ ಕುಂಠಿತವಾಗುತ್ತಿದೆ. ಇತ್ತೀಚೆಗೆ ಕೃಷಿ ಪರ ಒಲವು ಹೆಚ್ಚಾಗಿ ಕಂಡುಬಂದಿದೆಯಾದರೂ ಇಡೀ ವಿಶ್ವಕ್ಕೆ ಅಗತ್ಯವಿರುವಷ್ಟು ಆಹಾರ ಉತ್ಪಾದಿಸಲು ಮತ್ತು ಪರಿಸರ ಸಮತೋಲನ ಕಾಯ್ದುಕೊಳ್ಳಲು ಸಾರಜನಕದ ನಿರ್ವಹಣೆ ಪ್ರಮುಖವಾಗಿದೆ. ಬೆಳೆಗಳಿಗೆ ಅಗತ್ಯವಿರುವಷ್ಟು ಮಾತ್ರ ಸಾರಜನಕ ಒದಗಿಸಿ ಉತ್ತಮ ಇಳುವರಿ ಪಡೆಯುವುದರ ಜೊತೆಗೆ ಪರಿಸರ ಮಾಲಿನ್ಯ ತಡೆಗಟ್ಟಬಹುದಾಗಿದೆ. ಈ ನಿಟ್ಟಿನಲ್ಲಿ ಹೆಚ್ಚು ಹೆಚ್ಚು ಸಂಶೋಧನೆಗಳು ನಡೆಯುತ್ತಿವೆ. ರೈತ ಸಮುದಾಯ ತಜ್ಞರ ಸಲಹೆಗಳನ್ನು ಪಾಲಿಸುತ್ತಾ ಉತ್ತಮ ಬೆಳೆ ಹೊಂದುತ್ತಾ ಆದಾಯ ಹೆಚ್ಚಿಸಿಕೊಳ್ಳುವುದರ ಜೊತೆಗೆ ಪರಿಸರ ಕಾಪಾಡುವಲ್ಲೂ ಪ್ರಯತ್ನ ಮಾಡಬೇಕಿದೆ. ■





## ಯುವಜನತೆಯ ಸ್ಥೈರ್ಯ ವೃದ್ಧಿಸಲು

# ಯುವಸ್ಪಂದನ

ಬಿ.ಎ. ಖಾದರ್ ಶಾ



**ಯು**ವಜನತೆಯನ್ನು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಸಶಕ್ತೀಕರಣಗೊಳಿಸಲು ಕರ್ನಾಟಕ ಸರ್ಕಾರವು ದೇಶದಲ್ಲಿಯೇ ಪ್ರಥಮ ಬಾರಿಗೆ ಜಾರಿಗೆ ತಂದಿರುವ 'ಯುವ ಸ್ಪಂದನ' ಕಾರ್ಯಕ್ರಮವು ಯುವ ಪರಿವರ್ತನೆಯಲ್ಲಿ ಹೊಸ ಆಯಾಮ ಮೂಡಿಸಿದೆ.

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆ(ನಿಮ್ಹಾನ್ಸ್)ಯ ತಾಂತ್ರಿಕ ಸಹಯೋಗದೊಂದಿಗೆ ಕೈಗೊಂಡಿರುವ ಈ ಕಾರ್ಯಕ್ರಮದಲ್ಲಿ ಯುವ ಜನರಿಗೆ ತಮ್ಮಲ್ಲಿ ಕಾಡುವ ಗೊಂದಲಗಳನ್ನು ನಿವಾರಿಸಿ, ತಮ್ಮ ವೈಯಕ್ತಿಕ ಸಾಮರ್ಥ್ಯಗಳ ಬಗ್ಗೆ ಅರಿವು ಮೂಡಿಸುವುದು, ಯುವ ಜನರಿಗೆ ಅವರ ಕುಟುಂಬಗಳು ಮತ್ತು ಸದಾ ಬದಲಾಗುತ್ತಿರುವ ಸಮಾಜದ ನಡುವಿನ ಅಂತರವನ್ನು ತಗ್ಗಿಸುವುದು, ಯುವ ಜನರ ಗೊಂದಲಗಳು, ಅವಶ್ಯಕತೆಗಳು ಹಾಗೂ ಇತರೆ ವಿಷಯಗಳ ಬಗ್ಗೆ ಅರಿವು ಮೂಡಿಸಿ ಅವರ ಕುಟುಂಬದ ಮತ್ತು ಸಮಾಜದವರನ್ನು ಅಭಿವ್ಯಕ್ತಿ ಪಡಿಸಿಕೊಳ್ಳಲು ಬೇಕಾದ ಸುರಕ್ಷಿತ ಸ್ಥಳಗಳನ್ನಾಗಿ ಮಾಡುವುದು ಈ ಯುವಸ್ಪಂದನ ಕಾರ್ಯಕ್ರಮದ ಉದ್ದೇಶವಾಗಿದೆ.



downloaded from: www.kpscvaani.com

ಯುವಸ್ಪಂದನ ಯೋಜನೆಯು ಇಡೀ ದೇಶದಲ್ಲಿಯೇ ಪ್ರಥಮ ಬಾರಿಗೆ ಯುವ ಜನರಿಗಾಗಿ ಪ್ರಾರಂಭವಾಗಿರುವ ವಿನೂತನ ಹಾಗೂ ಮಹತ್ವಾಕಾಂಕ್ಷಿ ಕಾರ್ಯಕ್ರಮವಾಗಿದ್ದು, ಕರ್ನಾಟಕ ಸರ್ಕಾರದ ಯುವ ನೀತಿಯ ಮಹತ್ವಾಕಾಂಕ್ಷಿ ಕಾರ್ಯಕ್ರಮವಾಗಿದೆ.

**ಯುವಸ್ಪಂದನದ ಗುರಿ:**

ಯುವಜನತೆ ಸಮಾಜ, ಸಂಸ್ಕೃತಿಗೆ ಹೊಂದಿಕೊಳ್ಳುವ ಗುಂಪಾಗಿ ಗುರುತಿಸಿ ಕೊಂಡಿದೆ. ಜಾಗತೀಕರಣ ಹಾಗೂ ಉದಾರೀಕರಣದ ಪ್ರಸ್ತುತ ವಿದ್ಯಮಾನಗಳು ಯುವ ಜನರನ್ನು ಸಾಂಸ್ಕೃತಿಕ ಸಂಕ್ರಮಣಕ್ಕೆ ಒಡ್ಡುತ್ತಿವೆ. ಇದರಿಂದ ಸಾಮಾಜಿಕ, ಮಾನಸಿಕ ನಡವಳಿಕೆಗಳಿಗೆ ಹಾಗೂ ಮಾನಸಿಕ ಆರೋಗ್ಯದ ವಿಷಯಗಳಿಗೆ ಸಂಬಂಧಿಸಿದಂತೆ ಅನೇಕ ಸವಾಲುಗಳನ್ನು ಎದುರಿಸುತ್ತಿದ್ದಾರೆ. ಹೀಗಾಗಿ ಯುವ ಜನರಿಗೆ ಕಾರ್ಯಕ್ರಮ ರೂಪಿಸುವುದು ಅತ್ಯವಶ್ಯಕವಾಗಿದೆ.

ಮಾನಸಿಕ ತೊಂದರೆಗಳ ಬಗ್ಗೆ ಅಜ್ಞಾನ ಮತ್ತು ತಾರತಮ್ಯವಿದೆ. ಮಾನಸಿಕ ಆರೋಗ್ಯ ತಜ್ಞರ ಕೊರತೆಗಳಿಂದ ಭಾರತದಲ್ಲಿ ಯುವ ಜನರು ಸರಿಯಾದ ಮಾನಸಿಕ ಸಲಹೆ ಹಾಗೂ ಚಿಕಿತ್ಸೆಗಳಿಲ್ಲದೇ ತಮ್ಮ ಯೌವ್ವನವನ್ನೇ ಕಳೆದುಕೊಳ್ಳುತ್ತಿದ್ದಾರೆ. ಇಡೀ ದೇಶದಲ್ಲಿ 4000 ಮನೋವೈದ್ಯರು, 1000 ಮನೋತಜ್ಞರು, 3000 ಸಾಮಾಜಿಕ ಕಾರ್ಯಕರ್ತರಿದ್ದಾರೆ. ಮಾನಸಿಕ ಸಮಸ್ಯೆಗಳ ಬಗ್ಗೆ ಕೆಲವೊಮ್ಮೆ ತಜ್ಞರ ಬಳಿ ಇರಲಿ, ತಮ್ಮ ಕೌಟುಂಬಿಕ ಸಂಬಂಧಿಕರಲ್ಲಿ ಅಥವಾ ಆಪ್ತರಲ್ಲಿಯೂ ಸಮಸ್ಯೆ ಕುರಿತು ಹೇಳಿಕೊಳ್ಳಲು ಹಿಂಜರಿಯುವಂತಹ ಪರಿಸ್ಥಿತಿ ಇದೆ. ಇಂತಹ ತೊಳಲಾಟವನ್ನು ಹೋಗಲಾಡಿಸಲು ಯುವಸ್ಪಂದನ ಜಾರಿಗೆ ಬಂದಿದೆ.

ನಿಮ್ಹಾನ್ಸ್ ಸಂಸ್ಥೆಯ ಎಪಿಡೇಮಿಯಾಲಜಿ ವಿಭಾಗದ ಜನ ಆರೋಗ್ಯ ಕೇಂದ್ರವು ಯೋಜನೆಗೆ ಅವಶ್ಯಕವಾದ ತಾಂತ್ರಿಕ ಬೆಂಬಲ, ತರಬೇತಿ, ಪಠ್ಯ ತಯಾರಿಕೆಯನ್ನು ಕೈಗೊಂಡಿದೆ. ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿನ ಸಮನ್ವಯ ಸಮಿತಿಗಳ ರಚನೆ, ಯುವ ಸ್ಪಂದನ ಕೇಂದ್ರದ ಸ್ಥಾಪನೆ ಮತ್ತು ಇದಕ್ಕೆ ಅವಶ್ಯಕ ವಿದ್ಯುನ್ಮಾನ ದಾಖಲಾತಿ ಕ್ರಮಗಳು ಎಲ್ಲವನ್ನೂ ಸಂಸ್ಥೆಯು ಕೈಗೊಂಡಿದೆ.

ಈ ಯೋಜನೆಯ ಎಲ್ಲಾ ಹಂತದಲ್ಲಿಯೂ ಯುವ ಜನರು ಮತ್ತು ಇತರೆ ಭಾಗಿದಾರರ ಅವಶ್ಯಕತೆಯನ್ನು ಪರಿಗಣಿಸಿ ಯೋಜನೆಯನ್ನು ಸಿದ್ಧಪಡಿಸಲಾಗಿದೆ. 2013 ರ ಡಿಸೆಂಬರ್‌ನಲ್ಲಿ ಈ ಯೋಜನೆಗೆ ರಾಜ್ಯ ಸರಕಾರ ಮಂಜೂರಾತಿ ನೀಡಿತು. ಆರಂಭದಲ್ಲಿ ಕರ್ನಾಟಕದ 10 ಜಿಲ್ಲೆಗಳಲ್ಲಿ ಯುವ ಪರಿವರ್ತಕರನ್ನು ಆಯ್ಕೆ ಮಾಡಲಾಯಿತು. 2015ರಲ್ಲಿ ಈ ಯೋಜನೆಯನ್ನು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೂ ವಿಸ್ತರಿಸಲಾಯಿತು.

ಕರ್ನಾಟಕದಲ್ಲಿ ಸಬಲೀಕರಣ ಮಾದರಿಯನ್ನು ಉಪಯೋಗಿಸಿಕೊಂಡು, ಯುವ ಜನತೆಗಾಗಿ ಜಿಲ್ಲಾ ಯುವ ಸಬಲೀಕರಣ ಕೇಂದ್ರಗಳಲ್ಲಿ ಮಾರ್ಗದರ್ಶನ ಕೇಂದ್ರಗಳನ್ನು ಅಭಿವೃದ್ಧಿಪಡಿಸಿ, ಪರಿವರ್ತನಾ, ಮಾನಸಿಕ ಮತ್ತು ಮನೋ ಸಮಾಜಿಕ ಬೆಂಬಲ ಸೇವೆಗಳನ್ನು ಅನುಷ್ಠಾನಕ್ಕೆ ತರುವುದು ಯುವಸ್ಪಂದನದ ಮುಖ್ಯ ಗುರಿಯಾಗಿದೆ.

**ಜಿಲ್ಲೆಗಳಲ್ಲಿ ಯುವಸ್ಪಂದನ ಸ್ಥಾಪನೆ:**

- ಪ್ರತಿ ಜಿಲ್ಲೆಯ ಕ್ರೀಡಾಂಗಣದಲ್ಲಿ ಪ್ರತ್ಯೇಕವಾದ ಸ್ಥಳಾವಕಾಶವನ್ನು ಯುವ ಸ್ಪಂದನ ಕೇಂದ್ರಕ್ಕೆ ನೀಡಲಾಗಿದೆ.
- ಯುವಕರು ಮತ್ತು ಯುವತಿಯರಿಗೆ ಪ್ರತ್ಯೇಕವಾದ ಮಾರ್ಗದರ್ಶನ ಅಥವಾ ಕೊಠಡಿಯ ವ್ಯವಸ್ಥೆ ಇದೆ.
- ಯುವ ಸ್ಪಂದನಾ ಕೇಂದ್ರದಲ್ಲಿ ಶೌಚಾಲಯ, ವಿದ್ಯುತ್, ನೀರು, ಗಣಕ ಯಂತ್ರಗಳು, ಜ್ಞಾನ ಕೇಂದ್ರ ಎಲ್ಲವೂ ಪ್ರತ್ಯೇಕವಾಗಿದೆ.
- ತರಬೇತಿ ಪಡೆದ ಯುವ ಸಮಾಲೋಚಕರು/ ಯುವ ಪರಿವರ್ತಕರು ಬೆಳ್ಗೆ 9.30 ರಿಂದ 5 ಗಂಟೆಯ ತನಕ ಲಭ್ಯವಿರುತ್ತಾರೆ.
- ಕೌನ್ಸಿಲಿಂಗ್ ಸೇವೆ, ವಿಶೇಷ ತಜ್ಞರ ಕ್ಯಾಂಪ್‌ಗಳು, ದೂರವಾಣಿ ಮೂಲಕ ಕೌನ್ಸಿಲಿಂಗ್/ ಮಾರ್ಗದರ್ಶನ ಮತ್ತಿತರ ಸೇವೆಗಳು ಯುವಸ್ಪಂದನದಲ್ಲಿ ದೊರೆಯುತ್ತವೆ.

ಸದ್ಯ ಯುವ ಸ್ಪಂದನ ಕೇಂದ್ರವನ್ನು ಜಿಲ್ಲಾ ಕೇಂದ್ರದಲ್ಲಿ ಸ್ಥಾಪಿಸಲಾಗಿದ್ದು, ಮುಂದಿನ ದಿನಗಳಲ್ಲಿ ಅವಶ್ಯಕತೆಗೆ ಅನುಗುಣವಾಗಿ ತಾಲೂಕು ಕೇಂದ್ರಗಳಿಗೆ ವಿಸ್ತರಿಸುವ ಉದ್ದೇಶವನ್ನು ಸರಕಾರ ಹೊಂದಿದೆ.





downloaded from: www.kpscvaani.com



**ಉದ್ದೇಶಗಳು:**

ಕರ್ನಾಟಕ ರಾಜ್ಯದಾದ್ಯಂತ ಯುವ ಜನಾಂಗದ ವರ್ತನೆಗಳಿಗೆ ಸಂಬಂಧಿಸಿದ, ಮಾನಸಿಕ, ದೈಹಿಕ, ಭಾವನಾತ್ಮಕ, ಪ್ರಾಕೃತಿಕ, ಶೈಕ್ಷಣಿಕ, ವ್ಯಕ್ತಿತ್ವ ಬೆಳವಣಿಗೆ ಮತ್ತು ಕೌಟುಂಬಿಕ ಸಂಬಂಧ ಕುರಿತಾದ ಯುವ ಜನತೆ ಮತ್ತು ಅವರ ಕುಟುಂಬಗಳ ಸಮಸ್ಯೆಗಳ ಮಾರ್ಗದರ್ಶನಕ್ಕಾಗಿ ತರಬೇತಿ ಪಠ್ಯಗಳನ್ನು ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸುವುದು ಯುವಸ್ಪಂದನದ ಪ್ರಮುಖ ಉದ್ದೇಶವಾಗಿದೆ.

ಕರ್ನಾಟಕದಲ್ಲಿ ವರ್ತನಾ, ಮಾನಸಿಕ ಮತ್ತು ಮನೋ ಸಾಮಾಜಿಕ ಬೆಂಬಲ ಸೇವೆಗಳನ್ನು ಒದಗಿಸುವ 30 ಯುವ ಸಮಾಲೋಚಕರು ಹಾಗೂ 150 ಯುವ ಪರಿವರ್ತಕರನ್ನು ಇಲ್ಲಿ ತರಬೇತಿಗೊಳಿಸಲಾಗುತ್ತದೆ.

ಕರ್ನಾಟಕದ ಯುವ ಜನತೆಯ ವರ್ತನಾ, ಮಾನಸಿಕ ಮತ್ತು ಮನೋ ಸಾಮಾಜಿಕ ಬೆಂಬಲ ಸೇವೆಗಳನ್ನು ಒದಗಿಸುವುದು ಯುವ ಸ್ಪಂದನ ಕೇಂದ್ರಗಳನ್ನು ಸ್ಥಾಪಿಸಿ ಮಾರ್ಗದರ್ಶನ ಮತ್ತು ಬೆಂಬಲ ಸೇವೆಗಳನ್ನು ಒದಗಿಸಲಾಗುತ್ತದೆ. ಹಾಗೂ ಕರ್ನಾಟಕ ರಾಜ್ಯದಲ್ಲಿ ಗಣನೀಯ ಪ್ರಮಾಣದ ಯುವ ಜನಾಂಗಕ್ಕೆ ಈ ಸೇವೆಗಳು ತಲುಪುವಂತೆ ಮಾಡುವುದು ಇದರ ಉದ್ದೇಶ.

ಈಗಾಗಲೇ ಈ ಯೋಜನೆಯು ಕರ್ನಾಟಕದ 30 ಜಿಲ್ಲೆಗಳಲ್ಲಿ ಪ್ರಾರಂಭವಾಗಿದೆ. ಹೆಸರೇ ಸೂಚಿಸುವಂತೆ ಈ ಯೋಜನೆಯನ್ನು ಯುವ ಜನರಿಗಾಗಿ ಕೈಗೊಳ್ಳಲಾಗಿದೆ. ಈ ಯೋಜನೆಯ ಫಲಾನುಭವಿಗಳಲ್ಲಿ ಯುವ ಜನರು ಹಾಗೂ ಯುವ ಜನ ಸಂಬಂಧಿ ವಿಷಯಗಳಿಗೆ ಸಂಬಂಧಿಸಿದ ಯಾರೇ ಆದರು ಈ ಯೋಜನೆಯ ಸದುಪಯೋಗ ಪಡೆದುಕೊಳ್ಳಬಹುದು. ಯುವಸ್ಪಂದನ ಕೇಂದ್ರದಲ್ಲಿ ಪ್ರತೀ ದಿನ ಕಛೇರಿ ವೇಳೆಯಲ್ಲಿ ಒಬ್ಬ ಯುವ ಸಮಾಲೋಚಕರು, ಒಬ್ಬ ಯುವ ಪರಿವರ್ತಕರು ಮಾರ್ಗದರ್ಶನ ಸೇವೆ ಒದಗಿಸುತ್ತಾರೆ. ಇವರೂ ಸಹಾ ಯುವಕರೇ ಆಗಿದ್ದು ಇವರಿಗೆ ನಿಮ್ಹಾನ್ಸ್ ಸಂಸ್ಥೆಯ ನುರಿತ ತಜ್ಞರಿಂದ ತರಬೇತಿ ನೀಡಲಾಗಿರುತ್ತದೆ.

ಯುವಜನತೆಯ ಆರೋಗ್ಯ, ಜೀವನಶೈಲಿ, ಶಿಕ್ಷಣ, ವೃತ್ತಿ, ಸಂಬಂಧಗಳು, ವ್ಯಕ್ತಿತ್ವ ಬೆಳವಣಿಗೆ ಹಾಗೂ ಭಾವನೆಗಳ ಹತೋಟಿ, ಲಿಂಗ ಮತ್ತು ಲೈಂಗಿಕತೆ, ಸುರಕ್ಷತೆ ಈ ಎಲ್ಲಾ ವಿಷಯಗಳಿಗೆ ಸಂಬಂಧಿಸಿದಂತೆ ಆಪ್ತ ಸಮಾಲೋಚನೆ (ಕೌನ್ಸಿಲಿಂಗ್)/ ಮಾರ್ಗದರ್ಶನ ಹಾಗೂ ಸೇವೆಗಳು ಇಲ್ಲಿ ದೊರೆಯುತ್ತವೆ. 5 ರಿಂದ 30 ವರ್ಷ ವಯಸ್ಸಿನ ಯುವ ಜನಾಂಗದತ್ತ ಯೋಜನೆಯು ಕೇಂದ್ರೀಕೃತವಾಗಿದ್ದು, ಬಾಲ್ಯದಿಂದ ಪ್ರೌಢಾವಸ್ಥೆಗೆ ಸುಗಮ ಪರಿವರ್ತನೆಗೆ ಒತ್ತು ನೀಡಲಾಗುವುದು. ಯುವ ಪರಿವರ್ತಕರು ಈ ಯೋಜನೆಯ ಬೆನ್ನೆಲುಬಾಗಿ ಸಮುದಾಯ ಮಟ್ಟದಲ್ಲಿ ಸೇವೆ ಸಲ್ಲಿಸುತ್ತಾರೆ.

**ಕೇಂದ್ರದಲ್ಲಿ ದೊರೆಯುವ ಸೌಲಭ್ಯಗಳು:**

ವೈಯಕ್ತಿಕ ಬೆಂಬಲ, ದೂರವಾಣಿ ಮುಖಾಂತರ ಬೆಂಬಲ, ಬಿಕ್ಕಟ್ಟು ನಿರ್ವಹಣೆ, ಪಠ್ಯ ಮತ್ತು ವೃತ್ತಿಪರ ಮಾರ್ಗದರ್ಶನ, ಆಪ್ತ ಸಮಾಲೋಚನೆ, ಸೇವೆಗಳು, ಸ್ವಯಂ ಅಭಿವೃದ್ಧಿ, ಭಾವನಾತ್ಮಕ ಬೆಂಬಲ, ಕಾರ್ಯಾಗಾರ ಮತ್ತು ತರಬೇತಿಗಳು, ತಜ್ಞರ ಸಲಹಾ ಶಿಬಿರಗಳು, ಜ್ಞಾನಕೇಂದ್ರ ಇತ್ಯಾದಿ ಎಲ್ಲಾ ಸೇವೆಗಳು ಯುವಸ್ಪಂದನ ಕೇಂದ್ರದಲ್ಲಿ ಉಚಿತವಾಗಿ ದೊರೆಯುತ್ತದೆ. ಯುವ ಸ್ಪಂದನದಲ್ಲಿ 150 ಜನ ಯುವ ಪರಿವರ್ತಕರು ಹಾಗೂ 30 ಜನ ಯುವ ಸಮಾಲೋಚಕರು 30 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಯುವಸ್ಪಂದನ ಮೇಲ್ವಿಚಾರಣೆಗೆ ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಜಿಲ್ಲಾ ಸಮನ್ವಯ ಸಮಿತಿ ರಚಿಸಲಾಗಿದೆ. ಈ ಸಮಿತಿಯಲ್ಲಿ ಜಿಲ್ಲೆಯ ಎಲ್ಲಾ ಇಲಾಖೆಯ ಅಧಿಕಾರಿಗಳು ಸದಸ್ಯರಾಗಿದ್ದು ಆಯಾ ಜಿಲ್ಲೆಯ ಜಿಲ್ಲಾಧಿಕಾರಿಯವರು ಅಧ್ಯಕ್ಷರಾಗಿರುತ್ತಾರೆ. ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಉಪ/ಸಹಾಯಕ ನಿರ್ದೇಶಕರು, ಸಮಿತಿಯ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ನಿಮ್ಹಾನ್ಸ್ ಸಂಸ್ಥೆಯ ಯೋಜನಾ ಅಧಿಕಾರಿಗಳು ಹಾಗೂ ಆ ಜಿಲ್ಲೆಯ ಕ್ಷೇತ್ರ ಸಂಪರ್ಕಾಧಿಕಾರಿಗಳು ಸಹ ಸದಸ್ಯರಾಗಿರುತ್ತಾರೆ.

**ಗೌಪ್ಯತೆ:**

ಇಲ್ಲಿಗೆ ಆಗಮಿಸುವ ಪ್ರತಿಯೊಬ್ಬ ಅಭ್ಯರ್ಥಿಯೂ ನೀಡುವ ಮಾಹಿತಿಯನ್ನು ಗುಪ್ತವಾಗಿಡಲಾಗುತ್ತದೆ. ಇಲ್ಲಿಗೆ ಬಂದವರು ಯಾರು ಎನ್ನುವುದು ಯುವ ಸಮಾಲೋಚಕರನ್ನು ಬಿಟ್ಟು ಉಳಿದವರಿಗೆ ತಿಳಿಯುವುದಿಲ್ಲ. ಅವರ ಮಾಹಿತಿಯನ್ನು ತಮ್ಮ ಮೇಲಾಧಿಕಾರಿ ಅಥವಾ ಸಂಪನ್ಮೂಲ ವ್ಯಕ್ತಿಯೊಂದಿಗೆ ಮಾತನಾಡುವಾಗ ಒಂದು ಕೋಡ್ ಮೂಲಕ ಅಥವಾ ಹೆಸರನ್ನು ಬದಲಾಯಿಸಿ ಮಾತನಾಡುತ್ತಾರೆ.

ಯುವಸ್ಪಂದನ ಪ್ರಯೋಜನ ಪಡೆಯಲು ಹಾಗೂ ವಿವರಗಳಿಗಾಗಿ ಆಯಾ ಜಿಲ್ಲೆಯ ಯುವ ಸ್ಪಂದನ ಕೇಂದ್ರ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯನ್ನು ಸಂಪರ್ಕಿಸಬಹುದು.



# ಅಚ್ಚರಿಯ ಕಂದಕಕ್ಕೆ ಪಯಣ

ಲಕ್ಷ್ಮಿ

ಅನೇಕ ರಹಸ್ಯಗಳನ್ನು, ಅಚ್ಚರಿಗಳನ್ನು ತನ್ನ ಒಡಲಲ್ಲಿಟ್ಟುಕೊಂಡು, ನಾಲ್ಕೂವರೆ ಬಿಲಿಯನ್ ವರ್ಷಗಳಿಂದ ನಿರಂತರವಾಗಿ ತನ್ನ ಅಕ್ಷರೇಖೆಯಲ್ಲಿ ಸುತ್ತುತ್ತಿರುವ 5ನೇ ದೊಡ್ಡ ಗ್ರಹ ಭೂಮಿ.

ಖಂಡಗಳ ವರ್ಗಾವಣೆ ಹಾಗೂ ಘರ್ಷಣೆ, ಜ್ವಾಲಾಮುಖಿಯ ಆರ್ಭಟ, ಹಿಮನದಿಗಳ ಬೆಳೆಯುವಿಕೆ ಹಾಗೂ ಕುಗ್ಗುವಿಕೆ ಇವೆಲ್ಲವೂ ಪ್ರಕೃತಿದತ್ತವಾಗಿ ಸಾಗುತ್ತಿದ್ದರೆ, ಭೂಮಿಯ ಮೇಲ್ಪದರ ಮಾತ್ರ ಹಲವಾರು ಆಶ್ಚರ್ಯಕರ ಮತ್ತು ಆಕರ್ಷಕ ರೀತಿಯಿಂದ ಕೆತ್ತಲ್ಪಟ್ಟು, ಭೌಗೋಳಿಕ ರಹಸ್ಯದ ಜಾಡನ್ನು ಹಿಂದಿಕ್ಕಿದೆ. ಅಚ್ಚರಿಗಳ ಗೂಡಾಗಿರುವ ಭೂಮಿಯು, ತನ್ನನ್ನು ಶೋಧಿಸುವವರಿಗೆ ನಿಬ್ಬೆರಗಾಗಿಸುವ ಸಂಗತಿಗಳನ್ನು ಬಿಚ್ಚಿಡುವುದರಲ್ಲಿ ಯಾವುದೇ ಸಂಶಯವಿಲ್ಲ.

ಆ ಅಚ್ಚರಿಯೇ, ಭೂಮಿಯ ಅತೀ ಆಳವಾದ ಗೋಲಾಕಾರದ ಕಂದಕ ಮರಿಯಾನಾ ಟ್ರೆಂಚ್!. ಹೇಗೆ ಈ ಆಳದ ಕಂದಕ ಸೃಷ್ಟಿಯಾಯ್ತು? ಇಲ್ಲಿಗೆ ಹೇಗೆ ತಲುಪುವುದು? ಎನ್ನುವ ಹಲವಾರು ಕುತೂಹಲ ಕೆರಳಿಸುವ ಪ್ರಶ್ನೆಗಳು, ವಿಜ್ಞಾನಿಗಳನ್ನು 'ಡೀಪ್ ಅಬ್ಬಿಸಿಗೆ' ಕರೆದೊಯಿತು. ಅಂಡರ್ ಸೀ ಜಗತ್ತಿನ ಹಲವು ಅಚ್ಚರಿಯನ್ನು ಅಲ್ಲಿ ವಿಜ್ಞಾನಿಗಳು ಕಾಣುತ್ತಾರೆ. ಅದುವೇ ಬೆಂಕಿಯ ಪರ್ವತಗಳು, ಕರಗಿರುವ ಜ್ವಾಲಾಮುಖಿಗಳು ಮತ್ತು ಪ್ರಪಂಚದ ಅತೀ ದೊಡ್ಡ ಭೌಗೋಳಿಕ ರಚನೆ.

ಸಂಶೋಧನೆಯ ಪುಟಗಳಲ್ಲಿ 1872 ಅತ್ಯಂತ ಪ್ರಮುಖವಾದ ವರ್ಷವಾಗಿದ್ದು, ಮೊಟ್ಟಮೊದಲು ಬ್ರಿಟಿಷ್ ಸಂಶೋಧನಾ ಹಡಗು – ಹೆಚ್‌ಎಂಎಸ್ ಚಾಲೆಂಜರ್, ಸಾಗರದ ತಳದ ಆಳ ಮತ್ತು ಅಗಲವನ್ನು ಕಂಡು ಹಿಡಿಯಲು ಹೊರಟಿತ್ತು. ಆ ಆಳವನ್ನು ಅಳೆಯಲು ಪ್ರತಿ 140 ಮೈಲಿಗೂ, 249 ಮೈಲಿಯ ಹಗ್ಗವನ್ನು ಬಿಡಲಾಗುತ್ತಿತ್ತು. ನೂರಾರು ಪೌಂಡ್ ತೂಕದ ಲೆಡ್ ವೈಟ್ ಅನ್ನು ತಳ್ಳಲಾಗಿತ್ತು. ಬಹಳ ಕ್ಲಿಷ್ಟಕರ ಹಾಗೂ ಬೆನ್ನು ಮೂಳೆ ಮುರಿಯುವ ಕೆಲಸ ಇದಾಗಿದ್ದು, ಸಾಗರದ ಆಳವನ್ನು ತಿಳಿಯಲು ಬೇರಾವ ಸಮೀಪ ಮಾರ್ಗ ಇರಲಿಲ್ಲ.

ಹೀಗೆ ಸಾಗುತ್ತಿರುವಾಗ, ಪಶ್ಚಿಮ ಫೆಸಿಫಿಕ್‌ನ ಒಂದು ಜಾಗದಲ್ಲಿ ಮಾತ್ರ ಲೆಡ್ ವೈಟ್ ಇನ್ನೂ ಆಳಕ್ಕೆ ಇಳಿಯಲಾರಂಭಿಸಿತು. 4475 ಫಾಥೋಮ್ಸ್‌ನಷ್ಟು, ಅಂದರೆ ಸಮುದ್ರ ತಟದಿಂದ 5 ಮೈಲಿಗಳಷ್ಟು ಇನ್ನೂ ಕೆಳಗೆ. ಇದು ವಿಜ್ಞಾನಿಗಳನ್ನು ಮರು ಯೋಚಿಸುವಂತೆ ಮಾಡಿತಲ್ಲದೆ, ನೂತನ ಸಮುದ್ರ ಶಾಸ್ತ್ರದ ನಕ್ಷೆಯನ್ನು ಹೊರ ತಂದಿತ್ತು. ಆ ನಕ್ಷೆಯನ್ನು ಪರೀಕ್ಷಿಸಿದಾಗ, ಅದು ವಿಭಿನ್ನವಾಗಿರುವ ಪಶ್ಚಿಮ ಫೆಸಿಫಿಕ್ಕನ್ನು ತೋರಿಸಿದಲ್ಲದೆ, 5 ಮೈಲಿ ಆಳವಿರುವ ಗುಂಡಿಯ ವಿಷಯವನ್ನು ಹೊರಹಾಕ್ಕಿತ್ತು.

1940ರ ಪ್ರಾರಂಭಿಕ ತಿಂಗಳುಗಳಲ್ಲಿ ಶೋಧ ಕಾರ್ಯವು ಅಭಿವೃದ್ಧಿಗೊಂಡಿತ್ತು. ಅದು ಶಬ್ದ ತರಂಗಗಳನ್ನು ನೀರಿನಲ್ಲಿ ಪಂಪ್ ಮಾಡುವ ಸಾಹಸವಾಗಿತ್ತು. ಬದಲಿಗೆ ಆ ತರಂಗಗಳು ತಟವನ್ನು ಮುಟ್ಟಿ ಮತ್ತೆ ವಾಪಸ್ ಬರುವ ಸಮಯವನ್ನು ರೆಕಾರ್ಡ್ ಮಾಡಲಾಗಿತ್ತು.

1951ರಲ್ಲಿ ಬ್ರಿಟಿಷ್ ಸಂಶೋಧನಾ ಹಡಗು–ಹೆಚ್‌ಎಂಎಸ್ ಚಾಲೆಂಜರ್, ಶೋಧನಾ ಸ್ಥಳಕ್ಕೆ ಪುನಃ ಬಂದಿತ್ತು, ಆದರೆ ಈ



ಬಾರಿ ಸಕಲ ಸಿದ್ಧತೆಗಳೊಂದಿಗೆ ಸೋನಾರ್ ಉಪಕರಣದ ಸಹಾಯದಿಂದ....

ಈ ಸೋನಾರ್ ನಕ್ಷೆಗಳು ಅನೇಕ ಸತ್ಯ ಸಂಗತಿಗಳನ್ನು ಭೂ ವಿಜ್ಞಾನಿಗಳಿಗೆ ರವಾನಿಸಿತು. ಅದುವೇ "ಫೆಸಿಫಿಕ್ ಮಹಾಸಾಗರದಲ್ಲಿನ ಗುಂಡಿಯು ಬೃಹತ್ ಕಂದಕದ ಒಂದು ಅಂಶವೆಂದು, ಅದು 'ದಿ ಎಂಪೈಯರ್ ಸ್ಟೇಟ್ ಬಿಲ್ಡಿಂಗ್'ನ ಎತ್ತರಕ್ಕಿಂತಲೂ ಮೂವತ್ತು ಪಟ್ಟು ಆಳವಿದೆಯೆಂದು" ಹೇಳಿತು.

ಕಂದಕದೊಳಗೆ ಹಲವು ವ್ಯತ್ಯಾಸಗಳಿದ್ದವು. ಅದರ ದಕ್ಷಿಣಕ್ಕೆ ಸಮುದ್ರದ ತಟವು 2 ಮೈಲಿ ಇನ್ನೂ ಆಳಕ್ಕೆ ಜಾರಿತ್ತು. ನಿಬ್ಬೆರಗಾಗಿಸುವಂತಹ, ವಿಜ್ಞಾನ ಲೋಕಕ್ಕೆ ಸವಾಲಾಗಿರುವ ಆಳವು ಇಂದಿಗೂ ಪ್ರಪಂಚದ ಅತ್ಯಂತ 'ಲೋವೆಸ್ಟ್ ಪಾಯಿಂಟ್'. ಈ ಲೋವೆಸ್ಟ್ ಪಾಯಿಂಟನ್ನು ಹೆಚ್‌ಎಂಎಸ್ ಚಾಲೆಂಜರ್‌ನ ಸಹಾಯದಿಂದ ಕಂಡುಹಿಡಿದುದ್ದರಿಂದ ಇದಕ್ಕೆ 'ಚಾಲೆಂಜರ್ ಡೀಪ್' ಎಂದು ಹೆಸರಿಡಲಾಯ್ತು. ಆದರೆ ಮರಿಯಾನ ಟ್ರೆಂಚ್ ಹೇಗೆ ಉದ್ಭವವಾಯ್ತು? ಇನ್ನೂ ತಿಳಿಯಲ್ಲಿಲ್ಲ....

ವಿಜ್ಞಾನಿಗಳು ಹಾಗೂ ಶೋಧಕರು ಇದನ್ನು ಹಾಗೇ ಬಿಡಲಿಲ್ಲ. ಕಂದಕಕ್ಕೆ ಇಳಿಯಲೇಬೇಕೆಂದು ನಿಶ್ಚಯಿಸಿದ್ದರು. ಆದರೆ ಅದು ಸುಲಭವಿರಲಿಲ್ಲ. 'ಚಾಲೆಂಜರ್ ಡೀಪ್'ನ ಒಳಗಿನ ಒತ್ತಡ 1000 ಪಟ್ಟು, ಅದರ ಮೇಲ್ಪದರಕ್ಕಿಂತ ಬಲಶಾಲಿಯಾಗಿತ್ತು. ಒತ್ತಡದ ಪರಿಣಾಮವನ್ನು ತಿಳಿಯಲು ವಿಜ್ಞಾನಿಗಳು ಒಂದು ಬೊಂಬೆಯ ಕೃತಕ ತಲೆಯನ್ನು ಉಪಯೋಗಿಸಿದರು. ಇದನ್ನು 16,000 ಪಿ.ಎಸ್.ಐ.ಉಳ್ಳ ಒತ್ತಡದ ಚೇಂಬರ್‌ನೊಳಗೆ ಹಾಕಿ, ಹೊರ ತೆಗೆದಾಗ, ಅದು ಒತ್ತಡದಿಂದ ಬಹಳ ಚಿಕ್ಕದಾಗಿತ್ತು. ಇದನ್ನು ಕಂಡ ವಿಜ್ಞಾನಿಗಳು, ಮನುಷ್ಯನ ಪಯಣ ಅಲ್ಲಿಗೆ ಕಷ್ಟವಾದುದೆಂದು ಹಾಗೂ ಹೋಗಲೇಬೇಂಕೆದರೆ ಆಧುನಿಕ ಉಪಕರಣದೊಂದಿಗೆ ಹೋಗಬಹುದೆಂದು ದೃಢೀಕರಿಸಿದರು.





ಹಾಗೂ ಕಂದಕದ ಪ್ರಯಾಣಕ್ಕೆ ಹೊಂದಬಲ್ಲ ಸಬ್‌ಮರ್ಸಿಬಲ್ ವೆಹಿಕಲ್–ಟ್ರಿಯಸ್ಟ್ ಅನ್ನು ಕಂಡು ಹಿಡಿದಿದ್ದರು. ಇದರ ಸಹಾಯದಿಂದ 1960ರಲ್ಲಿ ಕಂದಕಕ್ಕೆ ಇಳಿಯುವ ಸಾಹಸಕ್ಕೆ ಯು.ಎಸ್.ನ ಲೂಟಿನೆಂಟ್, ಡೀಪ್ ಸೀ ಶೋಧಕ–ಡಾನ್ ವಾಲ್ಷ್ ಸಿದ್ಧರಾಗಿದ್ದರು. ಇವರ ಜೊತೆ ಟ್ರಿಯಸ್ಟ್‌ನ್ನು ಕಂಡು ಹಿಡಿದ ವಿಜ್ಞಾನಿಯ ಮಗನಾದ– ಜ್ಯಾಕ್ ಪಿಕಾರ್ ಮುಂದಾದರು. ಟ್ರಿಯಸ್ಟಿನೊಳಗೆ ಇವರಿಬ್ಬರಿಗಿದ್ದ ಜಾಗ ಕೇವಲ 20 ಘನ ಅಡಿ ಅಗಲ ಹಾಗೂ ಕಳೆಯಬೇಕಿದ್ದ ಕಾಲ ಒಂಭತ್ತು ಗಂಟೆಗಳು.

300 ಅಡಿಯಾಗುವಷ್ಟರಲ್ಲೆ ಕತ್ತಲಾವರಿಸಿಕೊಂಡಿತು. ಆದರೆ ಟ್ರಿಯಸ್ಟಿನ ಅತೀ ಬಲಶಾಲಿ ಬಲ್ಬ್‌ಗಳು ಅವರ ಹಾದಿಯನ್ನು ಸುಲಭಗೊಳಿಸಿದ್ದವು. ಟ್ರಿಯಸ್ಟಿನೊಳಗೆ ಬಂದಿಯಾಗಿದ್ದ ವಾಲ್ಷ್ ಹಾಗೂ ಪಿಕಾರ್ ಬಹು ಬೇಗ 18,000 ಅಡಿ ಆಳಕ್ಕೆ ತಲುಪಿ ದಾಖಲೆ ಸೃಷ್ಟಿಸಿದರು. ಟ್ರಿಯಸ್ಟಿನ ಹಿಂಭಾಗ ಡಬಲ್ ಲೇಯರ್ ಉಳ್ಳ ಗಾಜನ್ನು ರಕ್ಷಣೆಗೆಂದು ಹಾಕಲಾಗಿತ್ತು, ಆದರೆ ಎರಡು ತಾಸು ನೀರಿನೊಳಗೆ ಹೋಗುತ್ತಿದ್ದಂತೆ ಹೊರ ಲೇಯರ್‌ನ ಗಾಜು ಪುಡಿ ಪುಡಿಯಾಗಿತ್ತು.

ಅವರ ಚಿಕ್ಕ–ಪುಟ್ಟ ಲೈಫ್ ಸಪೋರ್ಟರ್, 8 ಟನ್‌ಗಳ ಒತ್ತಡದೊಂದಿಗೆ ಕಾದಾಡುತ್ತಿತ್ತು. ಹೊರಗಿನ ಮೃತ್ಯುವಿಗೂ, ಒಳಗಿರುವ ಮನುಷ್ಯರಿಗೂ ಇದ್ದ ಒಂದೇ ಒಂದು ತಡೆ–ಟ್ರಿಯಸ್ಟಿನ ಗಟ್ಟಿಯಾದ ಆ ಸಿಂಗಲ್ ಲೇಯರ್ ಗಾಜು. ಅದೃಷ್ಟವಶಾತ್ ಆ ಒಳಗಿನ ಗಾಜು ಗಟ್ಟಿಯಾದುದರಿಂದ ವಾಲ್ಷ್ ಹಾಗೂ ಪಿಕಾರ್ ತಮ್ಮ 'ಡೀಪ್ ಅಂಡರ್ ಸೀ' ಪಯಣವನ್ನು ಮುಂದುವರೆಸ ತೊಡಗಿದರು.

ಸರಿಯಾಗಿ ನಾಲ್ಕು ಗಂಟೆ, ನಲ್ವತ್ತೆಂಟು ನಿಮಿಷಕ್ಕೆ ಆಳದ ತಟವನ್ನು ತಲುಪುವುದರಲ್ಲಿ ಯಶಸ್ವಿಯಾದರು ಹಾಗೂ ಅಲ್ಲಿನ ಚಲನವಲನಗಳನ್ನು ನೋಡಿ ಆಶ್ಚರ್ಯಪಟ್ಟರು. ಡೆಪ್ತ್ ಗೇಜ್‌ನಲ್ಲಿ 35,800 ಅಡಿ ಆಳಹೋಗಿರುವುದಾಗಿ ತೋರಿಸತೊಡಗಿತ್ತು, ಅಂದರೆ 7 ಮೈಲಿ ಸಮುದ್ರದ ಮೇಲ್ಪದರದಿಂದ ಒಳಗೆ.

ಆ ಇಬ್ಬರು ಪರಿಶೋಧಕರು ಛಲ ಬಿಡದೆ, ಮನುಷ್ಯ ಹೋಗಲು ಸಾಧ್ಯವೆಂದು ಪರಿಗಣಿಸಿದ್ದ ಜಗತ್ತಿನ 'ಸೆಂಟರ್'ಗೆ ಹೋಗಿಯೇಬಿಟ್ಟರು. ಆದರೆ ಅವರು ಅಲ್ಲಿಯೇ ಕೊನೆಗೊಳಿಸಲಿಲ್ಲ. ಟ್ರೆಂಚ್‌ನ ಅಧ್ಯಯನ ನಡೆಸಬೇಕೆಂದು ಇನ್ನು ಮುಂದೆ ಸಾಗತೊಡಗಿದರು. ದುರದೃಷ್ಟವಶಾತ್ ಟ್ರಿಯಸ್ಟಿನ ಸಣ್ಣ ಧೂಳು ಕಣಗಳನ್ನು ಕದಡಿ ಬಿಟ್ಟಿತ್ತು. ಇದರಿಂದ ಅವರ ಅಧ್ಯಯನ ಅಷ್ಟೇನೂ ಸರಿಯಾಗಿ ಸಾಗಲಿಲ್ಲ. ನಿರಾಸೆಯಿಂದ ಅವರಿಬ್ಬರು ಸಮುದ್ರದ ಮೇಲ್ಪದರಕ್ಕೆ ಹೋಗಿ ಬಿಡಲು ನಿಶ್ಚಯಿಸಿದರು. ಹಾಗೂ ಅಧಿಕೃತವಾಗಿ ಆ ದಾಖಲೆಯ ಪುಟಗಳಲ್ಲಿ "ಡೀಪೆಸ್ಟ್ ಡೈವ್ ಆಫ್ ಆಲ್ ಟೈಮ್ಸ್" ಎನ್ನುವ ಹೆಗ್ಗಳಿಕೆಗೆ ಪಾತ್ರರಾದರು.

ಅವರಿಬ್ಬರ ಪಾದಾರ್ಪಣೆಯಾದ ಮೇಲೆ ಬೇರೆ ಯಾರೂ ಆ ಸಾಹಸಕ್ಕೆ ಮುನ್ನುಗ್ಗಲಿಲ್ಲ. ಮಿಷನ್ ಯಶಸ್ವಿಯಾಗಿತ್ತು. ಆದರೆ ರಹಸ್ಯ ಹಾಗೆ ಉಳಿದಿದೆ. ಪ್ರಪಂಚದ ಅತ್ಯಂತ ಕತ್ತಲಿನ ದೂರಸ್ಥ ಜಾಗಗಳು ಇಂದಿಗೂ ವಿಜ್ಞಾನಿಗಳ ಅರಿವನ್ನು ಹೆಚ್ಚಿಸುವುದಲ್ಲದೆ, ನಮ್ಮ ಗ್ರಹಕ್ಕೆ ಮತ್ತೊಂದು ಡೈನಾಮಿಕ್ ಕಥೆಯನ್ನು ಕೊಡುಗೆಯಾಗಿ ಕೊಡುತ್ತಿವೆ.





downloaded from: www.kpscvaani.com




# ಭಾರತ ಸಂವಿಧಾನ
# ಮೂಲಭೂತ ಕರ್ತವ್ಯಗಳು

1. ಪ್ರತಿಯೊಬ್ಬರು ಸಂವಿಧಾನಕ್ಕೆ ನಿಷ್ಠರಾಗಿರಬೇಕು. ಅದರ ಆದರ್ಶಗಳನ್ನು ಮತ್ತು ಸಂಸ್ಥೆಗಳನ್ನು ಹಾಗೂ ರಾಷ್ಟ್ರ ಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸಬೇಕು. ರಾಷ್ಟ್ರಧ್ವಜ ಮತ್ತು ರಾಷ್ಟ್ರಗೀತೆ ಭಾರತ ದೇಶದ ಪ್ರತಿಷ್ಠೆಯ ದ್ಯೋತಕಗಳು. ಇವುಗಳನ್ನು ಯಾವುದೇ ಕಾರಣಕ್ಕೂ ವಾಣಿಜ್ಯ ಉದ್ದೇಶಗಳಿಗೆ ಬಳಕೆ ಮಾಡುವಂತಿಲ್ಲ. ಅಲ್ಲದೆ ರಾಷ್ಟ್ರಧ್ವಜಕ್ಕೆ ಮತ್ತು ರಾಷ್ಟ್ರಗೀತೆಗೆ ಅವಮಾನ ಮಾಡುವುದು ಶಿಕ್ಷಾರ್ಹ ಅಪರಾಧವಾಗುತ್ತದೆ.
2. ಸ್ವಾತಂತ್ರ್ಯ ಹೋರಾಟಕ್ಕೆ ಸ್ಫೂರ್ತಿ ಕೊಟ್ಟ ಉದಾತ್ತ ಆದರ್ಶಗಳನ್ನು ಮನನಗೊಳಿಸುವುದು ಮತ್ತು ಅದರಂತೆ ನಡೆದುಕೊಳ್ಳುವುದು ಪ್ರತಿಯೊಬ್ಬರ ಕರ್ತವ್ಯವಾಗಿದೆ. (ಉದಾಹರಣೆ: 1857ರ ಸಿಪಾಯಿದಂಗೆ, ಗಾಂಧೀಜಿಯವರ ದಂಡಿ ಸತ್ಯಾಗ್ರಹ, ಜಲಿಯನ್ ವಾಲಾಬಾಗ್ ಮಾರಣ ಹೋಮ, ಸ್ವದೇಶಿ ಚಳುವಳಿ, ಭಾರತ ಬಿಟ್ಟು ತೊಲಗಿ ಚಳುವಳಿ, ಅಸಹಕಾರ ಚಳುವಳಿ ಇತ್ಯಾದಿ)
3. ಎಲ್ಲ ಭಾರತೀಯರು ರಾಷ್ಟ್ರದ ಸಾರ್ವಭೌಮತ್ವ, ಏಕತೆ, ಅಖಂಡತೆ ಮತ್ತು ನಿಷ್ಠೆಯನ್ನು ಎತ್ತಿ ಹಿಡಿಯಬೇಕು.
4. ದೇಶದ ರಕ್ಷಣೆಗೆ ಸಂಬಂಧಿಸಿದಂತೆ ಅವಶ್ಯಕತೆ ಬಿದ್ದಾಗ ರಾಷ್ಟ್ರದ ಸೇವೆಯಲ್ಲಿ ತೊಡಗಿಸಿಕೊಳ್ಳುವುದು.
5. ಭಾರತೀಯರು ಅವರು ಯಾವುದೇ ಧರ್ಮದವರಾಗಿರಲೀ, ಯಾವುದೇ ಭಾಷಿಕರಾಗಿರಲೀ, ಅಥವಾ ಪ್ರದೇಶದವರಾಗಿರಲೀ, ಪ್ರತಿಯೊಬ್ಬರು ಸಾಮರಸ್ಯವನ್ನು ಮತ್ತು ಭಾತೃತ್ವವನ್ನು ಪ್ರೇರೇಪಿಸಬೇಕು. (ಮಹಿಳೆಯರ ಆತ್ಮಗೌರವಕ್ಕೆ ಚ್ಯುತಿ ಬರುವಂಥ ಎಲ್ಲಾ ಆಚರಣೆಗಳನ್ನು ತ್ಯಜಿಸುವುದು; ಮಹಿಳೆಯರ ಅಪಹರಣ, ವರದಕ್ಷಿಣೆ ಕಿರುಕುಳ, ಸಜೀವ ದಹನ, ಮಹಿಳೆಯರ ಬಗ್ಗೆ ತಿರಸ್ಕಾರ ಭಾವ ಇತ್ಯಾದಿ ಆಚರಣೆಗಳು ನಿಲ್ಲಬೇಕು.)
6. ನಮ್ಮ ಸಮಷ್ಟಿ ಸಂಸ್ಕೃತಿಯ ಚಾರಿತ್ರಿಕ ಮೌಲ್ಯಗಳನ್ನು ಗೌರವಿಸುವುದರ ಜತೆಗೆ ಅವುಗಳನ್ನು ಕಾಪಾಡಿಕೊಂಡು ಬರುವುದು (ನಮ್ಮ ಸಂಸ್ಕೃತಿ, ನಮ್ಮ ಭಾಷೆ, ನಮ್ಮ ಸಂಗೀತ, ನಮ್ಮ ಉಡುಗೆ ತೊಡುಗೆಗಳ ಕುರಿತಾಗಿ ಗೌರವ, ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರಣೆಯನ್ನು ತ್ಯಜಿಸಿ, ನಮ್ಮ ಜೀವನ ಕ್ರಮದ ಮೌಲ್ಯಗಳನ್ನು ಎತ್ತಿ ಹಿಡಿಯುವುದು
7. ಅರಣ್ಯಗಳು, ಜಲ ರಾಶಿಗಳು, ಅಂದರೆ ಕೆರೆ, ಕಟ್ಟೆ, ನದಿ, ಸರೋವರಗಳು, ಅರಣ್ಯ ಜೀವಿಗಳು ಇವುಗಳನ್ನೆಲ್ಲ ಒಳಗೊಂಡಂತೆ ಪರಿಸರವನ್ನು ಕಾಪಾಡಿಕೊಳ್ಳುವುದಲ್ಲದೆ, ಅದನ್ನು ಉಳಿಸಿ ಬೆಳೆಸುವುದು (ಉದಾಹರಣೆಗೆ; ದಂತಕ್ಕಾಗಿ ಆನೆಗಳನ್ನು ಬೇಟೆಯಾಡುವುದು, ಚರ್ಮಕ್ಕಾಗಿ ಕಾಡು ಮೃಗಗಳನ್ನು ಕೊಲ್ಲುವುದು, ಪಶು ಪಕ್ಷಿಗಳನ್ನು ಬೇಟೆಯಾಡುವುದು, ಪರಿಸರಕ್ಕೆ ಹಾನಿ ಮಾಡುವುದು ಇತ್ಯಾದಿ)
8. ವೈಜ್ಞಾನಿಕ ಮನೋಧರ್ಮವನ್ನು, ಮಾನವೀಯತೆಯನ್ನು, ಅನ್ವೇಷಿಕ ಪ್ರವೃತ್ತಿ ಮತ್ತು ಸುಧಾರಣೆಯ ಮನೋಭಾವವನ್ನು ಬೆಳೆಸಿಕೊಳ್ಳಬೇಕು.
9. ಸಾರ್ವಜನಿಕ ಆಸ್ತಿಯನ್ನು ಕಾಪಾಡುವುದು ಮತ್ತು ಹಿಂಸಾ ಪ್ರವೃತ್ತಿಯನ್ನು ತ್ಯಜಿಸುವುದು. (ಇತ್ತೀಚಿನ ದಿನಗಳಲ್ಲಿ ಯಾವುದೇ ಚಳವಳಿಯಾಗಲೀ, ಯಾರ ಮೇಲೆ ಸಿಟ್ಟಿರಲಿ, ಬಸ್ಸುಗಳಿಗೆ ಬೆಂಕಿ ಹಚ್ಚುವುದು, ಕಟ್ಟಡಗಳ ಗಾಜುಗಳನ್ನು ಪುಡಿ ಮಾಡುವುದು, ಹಿಂಸಾಚಾರದಲ್ಲಿ ತೊಡಗುವುದು ಕಂಡು ಬರುತ್ತದೆ. ಇಂಥ ಕೃತ್ಯಗಳು ಸಭ್ಯವಲ್ಲ)
10. ವೈಯಕ್ತಿಕ ಮತ್ತು ಸಾಮೂಹಿಕ ಚಟುವಟಿಕೆಗಳ ಪರಿಧಿಯಲ್ಲಿ ಉತ್ಕೃಷ್ಟತೆ ಅಥವಾ ಮೇಲ್ಮೆಯನ್ನು ಸಾಧಿಸುವುದಕ್ಕೆ ಶ್ರಮಿಸುವುದು. ಇದರಿಂದ, ರಾಷ್ಟ್ರ ನಿರಂತರವಾಗಿ ಉದ್ಯಮಶೀಲತೆಯ ಮತ್ತು ಸಾಧನೆಯ ಮಟ್ಟಗಳನ್ನು ಎತ್ತರೆತ್ತರಕ್ಕೆ ತೆಗೆದುಕೊಂಡು ಹೋಗಲು ಅನುವಾಗುತ್ತದೆ.
11. ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ನೀಡುವುದು ತಂದೆ- ತಾಯಿಗಳು ಅಥವಾ ಪೋಷಕರಾದವರ ಕರ್ತವ್ಯ. 6 ರಿಂದ 14ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣವನ್ನು ಕೊಡಿಸುವುದು ಕಡ್ಡಾಯವಾಗಿದೆ.

Published by : The Director, Department of Information & Public Relations, 17, Varthasoudha, Bhagwan Mahaveer Road, Bangalore - 560 001
Printed at : M/s Abhimaani Publications Pvt. Ltd.., Dr Rajkumar Road, Rajajinagar, Bangalore - 560 010

downloaded from: www.kpscvaani.com